ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 43 | ಮಾರ್ಚ್ 4 ಶನಿವಾರ 2023 | ₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 314 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಾಳೆ, ನಾಳಿದ್ದು ನಗರದ ಕೆಲವೆಡೆ ನೀರು ಪೂರೈಕೆ ವ್ಯತ್ಯಯ

ಮೈಸೂರು, ಮಾ.3–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಬೆಳಗೊಳ ಮತ್ತು ಹೊಂಗಳ್ಳಿ 2ನೇ ಹಂತದ ಬೂಸ್ಟರ್ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಮೇಟಗಳ್ಳಿ ಸಬ್ ಸ್ಟೇಷನ್‌ನಲ್ಲಿ ಕೆಪಿಟಿಸಿಎಲ್ ಇಲಾಖೆಯವರು ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಮಾ.5 ಮತ್ತು 6ರಂದು ನಗರದ ಕೆಲವೆಡೆ ನೀರು ಸರಬರಾಜುವಿನಲ್ಲಿ ವ್ಯತ್ಯಯವಾಗಲಿದೆ. ವಾರ್ಡ್ ನಂ.4, 5, 6, 7, ಹೆಚ್‌ಎಲ್‌ಆರ್ ಇದಕ್ಕೆ ಸಂಬಂಧಪಟ್ಟ ಪ್ರದೇಶಗಳಾದ ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ದೇವರಾಜ ಮೊಹಲ್ಲಾ, ಲೂರ್ದ್‌ನಗರ, ಮೀನಾಬಜಾರ್, ವಾರ್ಡ್ ಸಂಖ್ಯೆ: 8, 17, 18, 19, 23 ರಿಂದ 27ರವರೆಗೆ 40, 41, 55, 60, 61, 62 ಹಾಗೂ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶಗಳು ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜಿರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಮಾ.5ರಂದು ವಚನ ಉತ್ಸವ ಕಾರ್ಯಕ್ರಮ

ವಿವಿಧ ಕ್ಷೇತ್ರಗಳ ಸಾಧಕರಿಗೆ 'ವಚನ ಸಿರಿ' ಪ್ರಶಸ್ತಿ ಪ್ರದಾನ



ಮೈಸೂರು,ಮಾ.3(ಪಿಎಂ)– ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ, ಹಿಮಾಲಯ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಮಾ.5ರಂದು ವಚನ ಉತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದ ಸಂಚಾಲಕ ಅರವಿಂದ್ ಶರ್ಮ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಎಂಜಿ ರಸ್ತೆಯ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಅಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಕಾರ್ಯಕ್ರಮ ನಡೆಯಲಿದೆ ಎಂದರು. ಅಂದು ಬೆಳಗ್ಗೆ 10ಕ್ಕೆ ಹನೂರು ಬಂಡಳ್ಳಿ ದೊಡ್ಡಮಠದ ಮಠಾಧೀಶ ಶ್ರೀ ಫಲಹಾರ ಪ್ರಭುದೇವ ಸ್ವಾಮೀಜಿ, ನಂದಿಗುಡಿ ಮಠದ ಮಠಾಧೀಶ ನಂದೀಶ್ವರ ಶಿವಾಚಾರ್ಯ ಸ್ವಾಮೀಜಿ, ಆಧ್ಯಾತ್ಮಿಕ ಶರಣ ಶ್ರೀ ಸೋಮಶೇಖರ ಸ್ವಾಮೀಜಿ, ಮಡಿವಾಳ ಸ್ವಾಮಿ ಗದ್ದಿಗೆ ಮಠಾಧೀಶ ಅಡವಿ ಸ್ವಾಮೀಜಿ, ಶ್ರೀ ಬಸವ ಜ್ಞಾನ ಮಂದಿರದ ಶ್ರೀಮಾತೆ ಡಾ.ಬಸವಾಂಜಲಿದೇವಿ ಅವರ ಸಾನಿಧ್ಯದಲ್ಲಿ ಹಿರಿಯ ಸಾಹಿತಿ ಡಾ.ಸಿಪಿಕೆ (ಡಾ.ಸಿ.ಪಿ. ಕೃಷ್ಣಕುಮಾರ್) ಉತ್ಸವ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಅಧ್ಯಕ್ಷತೆ ವಹಿಸಲಿದ್ದು, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ವಚನಕಾರರಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಉದ್ಯಮಿ ಎಸ್.ಎಂ.ಶಿವಪ್ರಕಾಶ್, ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷ ಚಂದನ್‌ಗೌಡ, ಲಿಂಗಾಯತಗೌಡ ಮಹಾಸಭಾದ ಅಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ ಪಾಲ್ಗೊಳ್ಳಲಿದ್ದಾರೆ ಎಂದರು. ಬಳಿಕ ನಡೆಯುವ ವಿಚಾರ ಗೋಷ್ಠಿಗಳಲ್ಲಿ ಹಿರಿಯ ಸಾಹಿತಿಗಳಾದ ಬನ್ನೂರು ಕೆ.ರಾಜು, ಡಾ.ಕೆ. ಲೀಲಾ ಪ್ರಕಾಶ್, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಸೇರಿದಂತೆ ಹಲವು ಚಿಂತಕರು ಶರಣರ ವಿಚಾರಧಾರೆ ಕುರಿತು ವಿಚಾರ ಮಂಡಿಸಲಿದ್ದಾರೆ. ಇದೇ ವೇಳೆ 11 ಮಂದಿ ವಿವಿಧ ಕ್ಷೇತ್ರಗಳ ಸಾಧಕರಿಗೆ 'ವಚನ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಕಾಂಗ್ರೆಸ್ ಮುಖಂಡ ಎಂ. ಪ್ರದೀಪ್‌ಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಹಿಮಾಲಯ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಎನ್.ಅನಂತ್, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ, ಕಾರ್ಯಕ್ರಮ ಸಂಚಾಲಕ ಮುತ್ತುಸ್ವಾಮಿ ಗೋಷ್ಠಿಯಲ್ಲಿದ್ದರು.

'ಪ್ರವರ್ಗ 2ಎ'ಗೆ ಬಂಟರ ಸಮಾಜ ಸೇರ್ಪಡೆಗೊಳಿಸಿ; ಸಮುದಾಯದ ಅಭಿವೃದ್ಧಿ ನಿಗಮ ಸ್ಥಾಪಿಸಿ

ಸರ್ಕಾರಕ್ಕೆ ಬಂಟರ ಸಂಘ ಒತ್ತಾಯ



ಮೈಸೂರು,ಮಾ.3(ಪಿಎಂ)– ಈಗ 'ಪ್ರವರ್ಗ 3ಬಿ'ಯಲ್ಲಿರುವ ಬಂಟರ ಸಮುದಾಯವನ್ನು 'ಪ್ರವರ್ಗ 2ಎ'ಗೆ ಸೇರ್ಪಡೆಗೊಳಿಸಬೇಕು ಮತ್ತು ಬಂಟರ ಅಭಿವೃದ್ಧಿ ನಿಗಮ ಸ್ಥಾಪಿಸಬೇಕೆಂದು ಮೈಸೂರು ಬಂಟರ ಸಂಘ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಟಿ.ಪ್ರಭಾಕರ ಶೆಟ್ಟಿ, ಬಂಟರ ಸಮುದಾಯದವರು ಮೇಲ್ನೋಟಕ್ಕೆ ಶ್ರೀಮಂತರು ಎನ್ನುವಂತೆ ಕಾಣುತ್ತಾರೆ. ಆದರೆ ಸಮುದಾಯದಲ್ಲಿ ಶೇ.60ರಷ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿವೆ. ಸಮುದಾಯವು ಬಹಳ ಹಿಂದೆಯೇ ನಮ್ಮ ಪೂರ್ವಜರ ಜಮೀನು ಕಳೆದುಕೊಂಡು ಅತ್ಯಂತ ಪರಿಶ್ರಮದಿಂದ ಜೀವನ ಸಾಗಿಸುತ್ತಿದೆ ಎಂದರು.

ಎಲ್ಲಾ ವರ್ಗಗಳಿಗೆ ಸರ್ಕಾರ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಿದೆ. ಆದರೆ ಬಂಟರ ಸಮುದಾಯಕ್ಕೆ ಮಾತ್ರ ಈ ಸೌಲಭ್ಯ ಕಲ್ಪಿಸಿಲ್ಲ. ಸಮುದಾಯದಿಂದ ಐವರು ಶಾಸಕರು, ಒಬ್ಬರು ಪರಿಷತ್ ಸದಸ್ಯರು, ಸಂಸದರೂ ಆದ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮತ್ತು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಗಡೆ ಅವರಿದ್ದರೂ ಸಮುದಾಯಕ್ಕೆ ಈವರೆಗೆ ನಿಗಮ ಸ್ಥಾಪನೆಯಾಗಿಲ್ಲ ಎಂದು ವಿಷಾದಿಸಿದರು. ಸಮುದಾಯವನ್ನು 'ಪ್ರವರ್ಗ 2ಎ'ಗೆ ಸೇರ್ಪಡೆ ಮಾಡಬೇಕು. ಇಲ್ಲವಾದರೆ ಶಿಕ್ಷಣ, ಉದ್ಯೋಗ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಸಮುದಾಯ ಅವಕಾಶ ವಂಚಿತವಾಗಲಿದೆ. ಈ ನಿಟ್ಟಿನಲ್ಲಿ ಸರ್ಕಾರ ಬಂಟರ ಸಮಾಜಕ್ಕೆ ನ್ಯಾಯ ದೊರಕಿಸಿ ಕೊಡಬೇಕು ಎಂದು ಆಗ್ರಹಿಸಿದರು.

ನಮ್ಮ ಈ ಎರಡು ಬೇಡಿಕೆಗಳ ಸಂಬಂಧ ಜಾಗತಿಕ ಬಂಡರ ಸಂಘಗಳ ಒಕ್ಕೂಟದ ವತಿಯಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಅಲ್ಲದೆ, ನಮ್ಮ ಸಮುದಾಯದ ಸಂಸದರು, ಶಾಸಕರಿಗೆ ಎರಡು ವರ್ಷಗಳ ಹಿಂದೆಯೇ ಮನವಿ ಸಲ್ಲಿಸಲಾಗಿದೆ. ಜೊತೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಳಿಯೂ ನಮ್ಮ ಬೇಡಿಕೆ ಸಂಬಂಧ ಪ್ರಸ್ತಾಪಿಸಿದ್ದು, ಅವರು ಪ್ರತ್ಯೇಕ ಬಂಟರ ನಿಗಮ ಸ್ಥಾಪನೆ ಹಾಗೂ ಪ್ರವರ್ಗ 2ಎಗೆ ಸೇರ್ಪಡೆಗೊಳಿಸುವ ಭರವಸೆ ನೀಡಿದ್ದರು. ಆದರೆ ಬಜೆಟ್‌ನಲ್ಲಿ ನಮಗೆ ನೀಡಿದ ಭರವಸೆ ಈಡೇರಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಘದ ಗೌರವ ಕಾರ್ಯದರ್ಶಿ ಎಂ.ನಂದ್ಯಪ್ಪಶೆಟ್ಟಿ ಮಾತನಾಡಿ, ಆದಷ್ಟು ಶೀಘ್ರದಲ್ಲಿ ನಮ್ಮ ಬೇಡಿಕೆ ಈಡೇರಿಸಲು ಒತ್ತಾಯಿಸಿ ಎಲ್ಲಾ ಜಿಲ್ಲಾ ಸಂಘಗಳು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ನೇತೃತ್ವದಲ್ಲಿ ಹೋರಾಟ ನಡೆಸಲಿವೆ ಎಂದು ತಿಳಿಸಿದರು. ಬಂಟರ ಸಂಘ ಮೈಸೂರು ಚಾರಿಟಬಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಕೆ.ಗಣೇಶ್ ನಾರಾಯಣ್ ಹೆಗ್ಡೆ, ಜಂಟಿ ಕಾರ್ಯದರ್ಶಿ ಹರೀಶ್ ಆಳ್ವಾ, ಸಂಘದ ಖಜಾಂಚಿ ಪಿ.ತುಕಾರಾಂ ರೈ, ಜಂಟಿ ಕಾರ್ಯದರ್ಶಿ ಸೌಮ್ಯ ವಿ.ಶೆಟ್ಟಿ ಗೋಷ್ಠಿಯಲ್ಲಿದ್ದರು.

ನಿಧನ



ಅಕ್ಕಿಹೆಬ್ಬಾಳ್ ನಾಗರಾಜ್

ಮೈಸೂರು, ಮಾ. 3– ಮೈಸೂರಿನ ರಾಮಕೃಷ್ಣನಗರದಲ್ಲಿ ವಾಸವಾಗಿದ್ದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ರಿಜಿಸ್ಟ್ರಾರ್ ಆಗಿ ಸಹ ಸೇವೆ ಸಲ್ಲಿಸಿದ್ದ ಅಕ್ಕಿಹೆಬ್ಬಾಳ್ ನಾಗರಾಜ್ (74) ಶುಕ್ರವಾರ ಬೆಳಗ್ಗೆ ನಿಧನರಾದರು, ಇವರು ಓರ್ವ ಪುತ್ರಿ ಮತ್ತು ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯ ಸಂಸ್ಕಾರ ಇಂದು ಮಧ್ಯಾಹ್ನ ಮೈಸೂರಿನಲ್ಲಿ ನೆಡೆಯಿತು. ಪ್ರಸಾರಂಗದ ಮಾಜಿ ನಿರ್ದೇಶಕ ಕೆ.ಟಿ.ವೀರಪ್ಪ ಸೇರಿದಂತೆ ಹಲವಾರು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮಾ.7ರಂದು ಮೈಸೂರಲ್ಲಿ ಫಲಾನುಭವಿಗಳ ಉತ್ಸವ ಸಮ್ಮೇಳನ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಂದ ಕಾರ್ಯಕ್ರಮ ಉದ್ಘಾಟನೆ, ರಾಜ್ಯ, ಕೇಂದ್ರ ಸರ್ಕಾರದ ಯೋಜನೆಗಳ ಸಾವಿರಾರು ಫಲಾನುಭವಿಗಳು ಭಾಗಿ



ಮೈಸೂರು, ಮಾ. 3(ಆರ್‌ಕೆ)– ಮೈಸೂರಿನಲ್ಲಿ ಮಾರ್ಚ್ 7ರಂದು ಸರ್ಕಾರಿ ಯೋಜನೆಯ ಫಲಾನುಭವಿಗಳ ಉತ್ಸವ ಸಮ್ಮೇಳನ ಏರ್ಪಡಿಸಲಾಗಿದೆ.

ಈ ಸಂಬಂಧ ಶುಕ್ರವಾರ ಬೆಳಗ್ಗೆ ಮೈಸೂರಿನ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಮೈಸೂರಿನ ಸಮ್ಮೇಳನವನ್ನು ಮಹಾರಾಜ ಕಾಲೇಜು ಮೈದಾನದಲ್ಲಿ ಅಂದು ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ಉದ್ಘಾಟಿಸಿ, ನಾನಾ ಸೌಲಭ್ಯ ಗಳನ್ನು ವಿತರಿಸುವರು ಎಂದರು.

ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯ 27,000, ನಗರಾಭಿವೃದ್ಧಿ ಇಲಾಖೆಯ 10,000, ಮೈಸೂರು ಮಹಾನಗರ ಪಾಲಿಕೆಯ 5,000, ಆರೋಗ್ಯ ಇಲಾಖೆಯ 4,000 ಮಂದಿ ಹಾಗೂ ಬಡ್ಡಿ ರಹಿತ ಸಾಲ ಸೌಲಭ್ಯ ಪಡೆದಿರುವ 3,000 ಫಲಾನುಭವಿಗಳು ಸೇರಿ ಒಟ್ಟು 57,000 ಮಂದಿ ಫಲಾನುಭವಿಗಳ ಆಯಾ ಇಲಾಖೆ ಅಧಿಕಾರಿಗಳು ಸಮ್ಮೇಳನಕ್ಕೆ ಕರೆತಂದು ಸುರಕ್ಷಿತವಾಗಿ ವಾಪಸ್ ಕರೆದೊಯ್ದು ಬಿಡಬೇಕು ಎಂದು ಸಚಿವರು ಸೂಚನೆ ನೀಡಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆದಿರುವವರನ್ನು ಎಲ್ಲಾ ತಾಲೂಕುಗಳಿಂದ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಸುರಕ್ಷಿತವಾಗಿ ಕರೆತರಲು ವ್ಯವಸ್ಥೆ ಮಾಡಿ. ತಾಲೂಕು ಪಂಚಾಯ್ತಿ ಕಾರ್ಯ ನಿರ್ವಾಹಕ ಅಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು ಜವಾಬ್ದಾರಿಯಿಂದ ಫಲಾನುಭವಿಗಳನ್ನು ಕರೆತಂದು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಸೋಮಶೇಖರ್ ಇದೇ ಸಂದರ್ಭ ತಾಕೀತು ಮಾಡಿದರು. ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಿಸಿರುವ 277 ಮನೆಗಳ ಫಲಾನುಭವಿಗಳಿಗೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳಿಂದ ಹಕ್ಕುಪತ್ರ ವಿತರಿಸಲಾಗುವುದು ಎಂದ ಶಾಸಕ ಎಲ್. ನಾಗೇಂದ್ರ, ಕೋವಿಡ್‌ನಿಂದ ಸಾವನ್ನಪ್ಪಿದವರ ಕುಟುಂಬದವರಿಗೆ 1 ಲಕ್ಷ ರೂ. ಪರಿಹಾರ ಧನ ವಿತರಿಸಿಲ್ಲ, ಆ ಬಗ್ಗೆ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಅತಿವೃಷ್ಟಿ ಸಂದರ್ಭ ಕೆ.ಆರ್. ನಗರ ತಾಲೂಕು ಚೌಕಹಳ್ಳಿ ಗ್ರಾಮದ ನಾಗಮ್ಮ ಎಂಬುವರ ಮನೆ ಬಿದ್ದುಹೋಗಿದ್ದು, ಬಾಕಿ ಇರುವ 50,000 ಪರಿಹಾರ ಧನ ಸೇರಿದಂತೆ ವಿವಿಧ ಯೋಜನೆಗಳಡಿ ಮಂಜೂರಾಗಿರುವ ಸೌಲಭ್ಯಗಳನ್ನು ತಡಮಾಡದೇ ತಲುಪಿಸಿ ಎಂದು ಶಾಸಕ ಸಾರಾ ಮಹೇಶ್ ಅಧಿಕಾರಿಗಳಿಗೆ ತಿಳಿಸಿದರು.

ಆ ಬಗ್ಗೆ ತುರ್ತಾಗಿ ಕ್ರಮ ವಹಿಸುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಸಮ್ಮೇಳನಕ್ಕೆ ಫಲಾನುಭವಿಗಳನ್ನು ಕರೆತರಲು ಸಾರಿಗೆ ವ್ಯವಸ್ಥೆ ಮಾಡಲಾಗುವುದು. ಶಿಷ್ಟಾಚಾರದನ್ವಯ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು ಎಂದು ಸಚಿವರಿಗೆ ತಿಳಿಸಿದರು. ಮೇಯರ್ ಶಿವಕುಮಾರ್, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜಿಲ್ಲಾ ಪಂಚಾಯ್ತಿ ಸಿಇಓ ಕೆ.ಎಂ. ಗಾಯತ್ರಿ, ಎಸ್ಪಿ ಸೀಮಾ ಲಾಟ್ಕರ್, ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾನ್ಹವಿ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಲೋಕಾಯುಕ್ತ ದಾಳಿಯಿಂದ ಪಕ್ಷಕ್ಕೆ ಮುಜುಗರ ಇಲ್ಲ: ಸಚಿವ ಎಸ್‌ಟಿಎಸ್

ಮೈಸೂರು, ಮಾ.3(ಆರ್‌ಕೆ)– ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಕಚೇರಿ, ಮನೆ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಅಪಾರ ಪ್ರಮಾಣದ ನಗದು ವಶಪಡಿಸಿಕೊಂಡಿರುವ ವಿಷಯದಲ್ಲಿ ಪಕ್ಷಕ್ಕೆ ಯಾವುದೇ ಮುಜುಗರವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ. ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದ ಬಳಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಲೋಕಾಯುಕ್ತ ಬಲಪಡಿಸಿರುವುದರಿಂದ ಇಂತಹ ದಾಳಿಗಳು ನಡೆಯುತ್ತಿವೆ. ಭ್ರಷ್ಟರು, ತಪ್ಪಿತಸ್ಥರ ವಿರುದ್ಧ ಸರ್ಕಾರವೇ ಕ್ರಮ ಕೈಗೊಂಡರೆ ಬಿಜೆಪಿಗೆ ಮುಜುಗರ ಹೇಗಾಗುತ್ತದೆ ಎಂದರು. ಸಚಿವ ನಾರಾಯಣಗೌಡರಿಗೆ ಕಾಂಗ್ರೆಸ್ ದಾಳ ಹಾಕಿ ಆಫರ್ ನೀಡಿದೆ ಎಂಬುದರ ಬಗ್ಗೆ ಉತ್ತರಿಸಿದ ಸಚಿವರು, ನನಗೆ ಯಾವುದೇ ಆಫರ್ ಬಂದಿಲ್ಲ ಎಂದು ಅವರೇ ಹೇಳಿದ್ದಾರೆ. ನನಗೂ ಅಂತಹ ಯಾವುದೇ ಆಫರ್‌ಗಳು ಬಂದಿಲ್ಲ. ಬಿಜೆಪಿ ಸರ್ಕಾರದಲ್ಲಿ ಒಳ್ಳೆಯ ಕೆಲಸ ಮಾಡಿ ಎಂದು ಕೊಟ್ಟಿರುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೇವೆ ಎಂದರು. ಚಾಮರಾಜ ನಗರದಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಗೆ ಸಚಿವ ವಿ. ಸೋಮಣ್ಣ ಗೈರು ಹಾಜರಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಆ ಕುರಿತು ಅವರೇ ಮಾತನಾಡುತ್ತಾರೆ. ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿದರು.

ಅಡಿಗೆ ಅನಿಲ ದರ ಏರಿಕೆ ಖಂಡಿಸಿ

ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರ ಪ್ರತಿಭಟನೆ



ಮೈಸೂರು, ಮಾ.3(ಎಂಟಿವೈ)– ಗೃಹ ಬಳಕೆಯ ಅಡುಗೆ ಅನಿಲ ದರ ಏರಿಕೆ ಖಂಡಿಸಿ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯ ಕಾರ್ಯಕರ್ತರು ಖಾಲಿ ಸಿಲಿಂಡರ್ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿ, ಎಸ್‌ಯುಸಿಐ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮಾ.1ರಿಂದ ಜಾರಿಗೆ ಬರುವಂತೆ ಗೃಹ ಬಳಕೆಯ ಸಿಲಿಂಡರ್‌ಗೆ 50 ರೂ. ಮತ್ತು ವಾಣಿಜ್ಯ ಬಳಕೆಯ ಸಿಲಿಂಡರ್‌ಗೆ 360 ರೂ. ದರ ಏರಿಕೆ ಮಾಡಲಾಗಿದೆ. ಈಗಾಗಲೇ ಆಹಾರ ಪದಾರ್ಥಗಳು, ವಿದ್ಯುತ್, ದಿನ ಬಳಕೆಯ ವಸ್ತುಗಳ ಬೆಲೆ ಏರಿಕೆಯಿಂದ ಜನತೆ ತತ್ತರಿಸಿದ್ದಾರೆ. ಕೋವಿಡ್ ಕಾರಣದಿಂದ 2020ರಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಅಡುಗೆ ಅನಿಲದ ಬೆಲೆ ಕಡಿಮೆಯಾಗಿ ರಿಯಾಯಿತಿ ದರ ಮತ್ತು ಮಾರುಕಟ್ಟೆ ದರ ಒಂದೇ ಆಗಿತ್ತು. ಈ ಸಂದರ್ಭವನ್ನು ದುರ್ಬಳಕೆ ಮಾಡಿಕೊಂಡು ಕೇಂದ್ರವು ಗ್ರಾಹಕರ ಬ್ಯಾಂಕ್ ಖಾತೆಗೆ ಸಬ್ಸಿಡಿ ಮೊತ್ತ ವರ್ಗಾವಣೆ ಮಾಡುವುದನ್ನು ನಿಲ್ಲಿಸಿತು ಎಂದು ಕಿಡಿಕಾರಿದರು.

2012–13ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಗ್ಯಾಸ್ ಮತ್ತು ಸೀಮೆಎಣ್ಣೆ ಸೇರಿದಂತೆ 97 ಸಾವಿರ ಕೋಟಿ ರೂ. ಸಬ್ಸಿಡಿ ನೀಡಿದ್ದು, ಈ ವರ್ಷದ ಬಜೆಟ್‌ನಲ್ಲಿ ಇದು 2,257 ರೂ.ಗೆ ಇಳಿದಿದೆ. 9.5 ಕೋಟಿ ಬಡ ಕುಟುಂಬಗಳಿಗೆ ಉಜ್ವಲ ಯೋಜನೆಯಲ್ಲಿ ಅನಿಲ ಸಂಪರ್ಕ ನೀಡಲಾಗಿದೆಯೆಂದು ಹೇಳುವ ನರೇಂದ್ರ ಮೋದಿ ಸರ್ಕಾರ ಅದೇ ಕಾರಣಕ್ಕೆ ಸೀಮೆಎಣ್ಣೆ ವಿತರಿಸುವುದನ್ನೂ ನಿಲ್ಲಿಸಿದೆ. ಸರ್ಕಾರ ಭಾರೀ ಪ್ರಚಾರ ನೀಡುತ್ತಿರುವ ಈ ಯೋಜನೆಯ ಫಲಾನುಭವಿಗಳಿಗೂ ಕೇವಲ 200 ರೂ. ಮಾತ್ರ ಸಬ್ಸಿಡಿ ನೀಡಲಾಗುತ್ತಿದೆ. ಬಡವರು ಮತ್ತು ಗ್ರಾಮೀಣ ಕೂಲಿಕಾರರು ಮತ್ತೆ ಸೌದೆ ಬಳಸುವ ಸಂಕಷ್ಟಕ್ಕೆ ಸಿಲುಕಿದ್ದಾರೆ. ತಕ್ಷಣ ಗೃಹ ಬಳಕೆಯ ಅಡುಗೆ ಅನಿಲದ ದರ, ಅಗತ್ಯ ವಸ್ತುಗಳು, ಪೆಟ್ರೋಲ್ ದರವನ್ನು ಇಳಿಕೆ ಮಾಡಬೇಕು ಎಂದು ಆಗ್ರಹಿಸಿದರು

ಎಸ್‌ಯುಸಿಐಸಿ ಜಿಲ್ಲಾ ಕಾರ್ಯದರ್ಶಿ ಬಿ.ರವಿ, ಸದಸ್ಯರಾದ ಎಂ.ಉಮಾದೇವಿ, ಜಿ.ಎಸ್.ಸೀಮಾ, ಪಿ.ಎಸ್.ಸಂಧ್ಯಾ, ಟಿ.ಆರ್. ಸುನೀಲ್, ಸುಮಾ, ಚಂದ್ರಕಲಾ, ಆಸಿಯಾ ಬೇಗಂ, ಬಸವರಾಜು, ನೀತುಶ್ರೀ, ಎಐಯುಟಿಯುಸಿ ರಾಜ್ಯಾಧ್ಯಕ್ಷ ಕೆ.ಸೋಮಶೇಖರ್, ಉಪಾಧ್ಯಕ್ಷ ಕೆ.ವಿ.ಭಟ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಅರ್ಜಿ ಆಹ್ವಾನ

ಮೈಸೂರು, ಮಾ.3– 2023–24ನೇ ಸಾಲಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಹಾಗೂ ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಗಂಡು ಮಕ್ಕಳಿಗೆ 8ನೇ ತರಗತಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಶ್ರೀ ರಾಮಕೃಷ್ಣ ವಿದ್ಯಾಶಾಲೆಗೆ ಪ್ರವೇಶ ಪರೀಕ್ಷೆಯ ಮುಖಾಂತರ ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಏ.5 ಕೊನೆಯ ದಿನಾಂಕವಾಗಿದ್ದು, ಪ್ರವೇಶ ಪರೀಕ್ಷೆಯನ್ನು ಏ.20ಕ್ಕೆ ನಿಗದಿಪಡಿಸಲಾಗಿದೆ. ಅರ್ಜಿಗಳನ್ನು ಜಿಲ್ಲಾ ಕಛೇರಿಯಲ್ಲಿ ಅಥವಾ ತಾಲೂಕಿನಲ್ಲಿರುವ ಸಹಾಯಕ ನಿರ್ದೇಶಕರ ಕಛೇರಿಗಳಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ದಾಖಲಾತಿಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಗೆ ಸಲ್ಲಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಣ್ಯ ಇಲಾಖೆಯಿಂದ ಪ್ಲಾಸ್ಟಿಕ್ ಮುಕ್ತ ಚಾಮುಂಡಿಬೆಟ್ಟ ಅಭಿಯಾನ

ಮಾ.31ರವರೆಗೂ ಬೆಟ್ಟದಲ್ಲಿರುವ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹ



ಮೈಸೂರು,ಮಾ.3(ಎಂಟಿವೈ)– ಚಾಮುಂಡಿಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತಗೊಳಿಸಲು ಅರಣ್ಯ ಇಲಾಖೆ ಮುಂದಾಗಿದ್ದು, ಇಂದಿನಿಂದ ಮಾ.21ರವರೆಗೆ ಬೆಟ್ಟದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸುವ ವಿಶೇಷ ಅಭಿಯಾನ ಆರಂಭಿಸಿದೆ.

ಹಳೇ ಮೈಸೂರು ಭಾಗದ ಪ್ರಮುಖ ಧಾರ್ಮಿಕ ಹಾಗೂ ಪ್ರವಾಸಿ ತಾಣವಾಗಿರುವ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ತ್ಯಾಜ್ಯದಿಂದ ಪಕ್ಷಿ ಸಂಕುಲ ಮಾತ್ರವಲ್ಲದೆ, ಬೆಟ್ಟದ ಮಣ್ಣಿನ ಸವಕಳಿಗೂ ಕಾರಣವಾಗುತ್ತಿದೆ. ಈಗಾಗಲೇ ಚಾಮುಂಡಿಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ತಾಣವಾಗಿ ಘೋಷಿಸಲಾಗಿದೆಯಾದರೂ, ಅದರ ಬಳಕೆ ಮಿತಿ ಮೀರಿದೆ. ಈ ಹಿನ್ನೆಲೆಯಲ್ಲಿ ಬೆಟ್ಟದ ಮಾರ್ಗದಲ್ಲಿ ಪ್ರವಾಸಿಗರು ಹಾಗೂ ಭಕ್ತರು ಎಲ್ಲೆಂದರಲ್ಲಿ ಎಸೆದಿರುವ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿದೆ.

ಸ್ವಯಂಸೇವಕರು, ಪರಿಸರ ಪ್ರೇಮಿಗಳು, ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಆಸಕ್ತ ಸಾರ್ವಜನಿಕರ ಸಹಕಾರದಿಂದ ಸ್ವಚ್ಛತಾ ಅಭಿಯಾನ ಆರಂಭಿಸಿದೆ. ಮೊದಲ ದಿನವಾದ ಶುಕ್ರವಾರ ತಾವರೆಕಟ್ಟೆ ಮುಖ್ಯ ದ್ವಾರದಿಂದ ಕೇವಲ ಒಂದು ಗಂಟೆಯಷ್ಟೇ ಸ್ವಚ್ಛತಾ ಅಭಿಯಾನ ನಡೆಸಿದ 15ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ, 30 ಚೀಲ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿದೆ. ಮಾ.21ರವರೆಗೂ ಬೆಳಗ್ಗೆ 7ರಿಂದ ಮಧ್ಯಾಹ್ನ 1 ಗಂಟೆವರೆಗೆ ಸ್ವಚ್ಛತಾ ಕಾರ್ಯ ನಡೆಸಲಿದೆ. ಈ ವೇಳೆ ಆಸಕ್ತರು ಇಲಾಖೆ ಸಿಬ್ಬಂದಿಗಳೊಂದಿಗೆ ಸೇರಿ ಶ್ರಮದಾನ ಮಾಡಬಹುದಾಗಿದೆ. ಶುಕ್ರವಾರ ನಡೆದ ಅಭಿಯಾನದಲ್ಲಿ ಆರ್‌ಎಫ್‌ಓ ಧನ್ಯಶ್ರೀ, ಡಿಆರ್‌ಎಫ್‌ಓ ಸತೀಶ್‌ಕುಮಾರ್, ಗಾರ್ಡ್‌ಗಳಾದ ಅಪ್ಪಣ್ಣ, ಗಗನ್ ಹಾಗೂ 10 ಮಂದಿ ವಾಚರ್‌ಗಳು ಪಾಲ್ಗೊಂಡಿದ್ದರು. ಪರಿಸರ ಹೋರಾಟಗಾರ್ತಿ ಭಾನು ಮೋಹನ್, ನಾಳೆಯಿಂದ ಸ್ವಯಂ ಸೇವಕರೊಂದಿಗೆ ತಾವೂ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.3.2023 ಶನಿವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿರಿಧಾನ್ಯದ ಸಿರಿ–ಸಿಎಫ್‌ಟಿಆರ್‌ಐ ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ಮಂಡ್ಯದ 5 ರೂಪಾಯಿ ಡಾಕ್ಟರ್ ಶಂಕರೇಗೌಡ ಅವರೊಂದಿಗೆ ಸಂವಾದ, ನಡೆಸಿಕೊಡುವವರು– ದಿವಾಕರ ಹೆಗಡೆ, 10.00 ಈ.ಗಾಯತ್ರಿ– ವೀಣಾವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ನಾಗಣ್ಣ ಮತ್ತು ತಂಡ – ತತ್ವಪದಗಳು, 1.20 ಭಾವಗೀತೆ– ಕಸ್ತೂರಿ ಶಂಕರ್, ಬಿ.ವಿ. ಮೋಹನ್, 3.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ–ಕೆ.ಬಿ.ಮೀನಾ, 4.00 ನಾಟಕ–ಯಮನ ಸೋಲು, ರಚನೆ– ಕುವೆಂಪು, ನಿರ್ದೇಶನ– ಹೆಚ್.ಎಸ್. ಸರಸ್ವತಿ, 6.50 ಕೃಷಿರಂಗ "ತೋರಣ ಹೂರಣ" ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 8.00 ಯುವವಾಣಿ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ವಿದ್ವಾನ್ ಸಹನಾ ಬ್ಯಾನರ್ಜಿ– ಸಿತಾರ್

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್, ಪುರುಷರಲ್ಲಿ ಬಂಜೆತನ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಗಜಾರೋಹಣ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.

■ **ಎಡಿನ್ ಸಿನರ್ಜಿ ಮಾನವ ಸಂಪನ್ಮೂಲ ಸಂಸ್ಥೆ :** ಟೆನ್ನಿಸ್‌ಬಾಲ್ ಎನ್‌ಐಇ ಮೈಸೂರು ಎಡಿನ್ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಎನ್‌ಐಇ ಕಾಲೇಜು ಮೈದಾನ, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಬೆಳಗ್ಗೆ 7.30 ರಿಂದ.

■ **ಶ್ರೀ ದಿಗಂಬರ ಜೈನ ಸಮಾಜ ಮತ್ತು ಪದ್ಮಶ್ರೀ ಜೈನ ಮಹಿಳಾ ಸಮಾಜ :** ಫಾಲ್ಗುಣ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಡಾ. ಶಶಿರೇಖಾ ಅವರಿಂದ ಗಾಥ : 501 ರಿಂದ 524 ಕುರಿತು ಪ್ರವಚನ, ಸ್ಥಳ: ಶ್ರೀ ಶಾಂತೀಶ್ವರ ಸ್ವಾಮಿ ಬಸದಿ (ಕೋಟೆ ಬಸದಿ), ಬೆಳಗ್ಗೆ 6 ಗಂಟೆಯಿಂದ.

■ **ಕ್ಯಾತಮಾರನಹಳ್ಳಿ ಗ್ರಾಮಸ್ಥರು :** ಹುಲಿಯಮ್ಮ ಜಾತ್ರಾ ಮಹೋತ್ಸವ, ರಾತ್ರಿ 8 ಗಂಟೆಯಿಂದ ದೇವಾಲಯದ ಮುಂಭಾಗದಲ್ಲಿ ಕೋಲಾಟ, ತಮಟೆ ವಾದ್ಯದೊಂದಿಗೆ ಕುಣಿತ, ಸ್ಥಳ: ಕ್ಯಾತಮಾರನಹಳ್ಳಿ ದೇವಸ್ಥಾನ ಆವರಣ.

■ **ವೈ.ಟಿ. ಮತ್ತು ಮಾಧುರಿ ತಾತಾಚಾರಿಯವರ ಭ್ರಮರ ಟ್ರಸ್ಟ್ :** ಜೀವಮಾನ ಸಾಧನೆಯ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು : ಭಾರತ್ ಬಯೋಟೆಕ್‌ನ ಸಹ ಸಂಸ್ಥಾಪಕರಾದ ಡಾ. ಕೃಷ್ಣ ಎಲ್ಲ, ಅಧ್ಯಕ್ಷತೆ : ರಾಜವಂಶಸ್ಥರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಇಸ್ರೋ ಮಾಜಿ ಮುಖ್ಯಸ್ಥ ಎ.ಎಸ್. ಕಿರಣ್ ಕುಮಾರ್, ಭಾರತ ಸರ್ಕಾರದ ಮಾಜಿ ಮುಖ್ಯ ವೈಜ್ಞಾನಿಕ ಸಲಹೆಗಾರ ಪದ್ಮಶ್ರೀ ಕೆ. ವಿಜಯರಾಘವನ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಸಮಕುಲಾಧಿಪತಿ ಡಾ. ಸುರೇಶ್ ಭೋಜ್‌ರಾಜ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಶ್ರೀ ಶಿವರಾತ್ರೀಶ್ವರನಗರ, ಸಂಜೆ 4.30ಕ್ಕೆ.

■ **ದಿ ನ್ಯಾಷನಲ್ ಎಜುಕೇಷನಲ್ ಸೋಸಿಯಲ್ ಟ್ರಸ್ಟ್ :** ದಿ ನೆಸ್ಟ್ ಫೆಸ್ಟ್–2023, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ಮೇಯರ್ ಶಿವಕುಮಾರ್, ಪಾಲಿಕೆ ಸದಸ್ಯರಾದ ಎಂ.ಯು. ಸುಬ್ಬಯ್ಯ, ಶ್ರೀಮತಿ ಸಿ. ವೇದಾಂತಿ ಶಿವಶಂಕರ್, ಸಹಾಯಕ ಪೊಲೀಸ್ ಆಯುಕ್ತ ಜಿ.ಎಸ್. ಗಜೇಂದ್ರಪ್ರಸಾದ್, ಸ್ಥಳ: ದಿ ನೆಸ್ಟ್ ಪ್ರಿ–ಸ್ಕೂಲ್ ಆವರಣ, ವಿಜಯನಗರ 2ನೇ ಹಂತ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನೃತ್ಯಾಲಯ ಟ್ರಸ್ಟ್ ಪ್ರದರ್ಶಕ ಕಲೆಗಳ ಅಕಾಡೆಮಿ :** ನಲಿವಿನ ಪಯಣ–44, ಹರಿದಾಸ ಸಾಹಿತ್ಯ ಸಂಗೀತ ನೃತ್ಯ ಸಂಭ್ರಮ, ಸಂಜೆ 5 ರಿಂದ ನೃತ್ಯಾಲಯ ತಂಡದವರಿಂದ ಶ್ರೀ ಹರಿಭಜನೆ, ನೃತ್ಯಾಲಯದ ಹಿರಿಯ ವಿದ್ಯಾರ್ಥಿಗಳಿಂದ ಪುಷ್ಪಾಂಜಲಿ, ಸಂಜೆ 5.30 ರಿಂದ ರಿಂದ 6.30, ಉದ್ಘಾಟನೆ : ಅನನ್ಯ ಜಿಎಂಎಲ್ ಕಲ್ಚರಲ್ ಅಕಾಡೆಮಿ ವ್ಯವಸ್ಥಾಪಕ ಟ್ರಸ್ಟಿ ಡಾ. ಆರ್.ವಿ. ರಾಘವೇಂದ್ರ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ, ಉಪಸ್ಥಿತರು : ನೃತ್ಯಾಲಯ ಟ್ರಸ್ಟ್ ಅಧ್ಯಕ್ಷ ಡಾ. ತುಳಸೀರಾಮಚಂದ್ರ, ಸನ್ಮಾನಿತರು : ಡಾ. ರಮಾ ವಿ. ಬೆನ್ನೂರು, ವಿದುಷಿ ಶ್ರೀ ಲಕ್ಷ್ಮೀಕುಮಾರ್, ವಿದುಷಿ ಧರಿತ್ರೀ ಆನಂದರಾವ್, ಸಂಜೆ 6.30 ರಿಂದ ನೃತ್ಯಾಲಯ ಟ್ರಸ್ಟ್ ವಿದ್ಯಾರ್ಥಿನಿಯರಿಂದ ಕೋಲಾಟ–ದಾಸರಪದ ಆಧಾರಿತ, ಸಂಜೆ 6.45 ರಿಂದ ಸಹಚೇತನಾ ನಾಟ್ಯಾಲಯದವರಿಂದ ನರ್ತನಾಂಜಲಿ, ನಿರ್ದೇಶನ : ನೃತ್ಯಗುರು ಶ್ರೀಮತಿ ಸಹನಾ ಚೇತನ್, ಶಿವಮೊಗ್ಗ, ರಾತ್ರಿ 7.30 ರಿಂದ ನೃತ್ಯಾಲಯ ಟ್ರಸ್ಟ್ ವಿದ್ಯಾರ್ಥಿನಿಯರಿಂದ ಮಾಧುರ್ಯ ಮೋಹನರಂಗ, ಶ್ರೀ ಪಾದರಾಜರ ಸುಳಾದಿ ಆಧಾರಿತ ಪುರಂದರದಾಸರ ಬಗ್ಗೆ ತಿಲ್ಲಾನ, ರಚನೆ : ಡಾ. ತುಳಸೀ ರಾಮಚಂದ್ರ ಮತ್ತು ಮಂಗಳ, ಸ್ಥಳ: ರಮಾಗೋವಿಂದ ಕಲಾ ವೇದಿಕೆ, ಗಾನಭಾರತಿ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿಶ್ವ ಇಂಜಿನಿಯರುಗಳ ದಿನದ ಅಂಗವಾಗಿ ಸುಸ್ಥಿರ ಅಭಿವೃದ್ಧಿ ಕುರಿತು ವಿವಿಸಿಇ ಕಾಲೇಜ್ ಆಫ್ ಇಂಜಿನಿಯರಿಂಗ್ ಪ್ರಿನ್ಸಿಪಾಲ್ ಡಾ. ಸದಾಶಿವೇಗೌಡ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಬಿ.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಹೆಚ್.ಡಿ. ಕೋಟೆಯಲ್ಲಿಂದು

■ **ಶ್ರೀ ಆದಿಚುಂಚನಗಿರಿ ಸ್ವತಂತ್ರ ಪದವಿಪೂರ್ವ ಕಾಲೇಜು :** ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಮೈಸೂರು ಶಾಖೆ ಮುಖ್ಯಸ್ಥರಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಪ್ರೊ. ಕೆ.ಪಿ. ಬಸವೇಗೌಡ, ಮುಖ್ಯ ಅತಿಥಿಗಳು : ಸಿ.ಆರ್. ದಿನೇಶ್, ಡಾ. ಎಚ್.ಸಿ. ರವಿಗೌಡ, ಬಿ. ಭೈರೇಗೌಡ, ಪ್ರೊ. ಚಂದ್ರೇಗೌಡ, ಡಾ. ಜೆ.ಎನ್. ವೆಂಕಟೇಶ್, ಕು. ನಂದಿನಿ, ಸ್ಥಳ: ಬಿಜಿಎಸ್ ಸಭಾ ಭವನ, ಬೆಳಗ್ಗೆ 10ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 4 ಶನಿವಾರ 2023

ಸಂಪುಟ: 43 | ಸಂಚಿಕೆ: 314 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸಂಚಾರ ನಿಯಮ ಉಲ್ಲಂಘನೆ ಪ್ರಕರಣ

ದಂಡದಲ್ಲಿ ಮತ್ತೆ ಶೇ.50 ರಿಯಾಯ್ತಿ 15 ದಿನ ಅವಕಾಶ



ಮೈಸೂರು, ಮಾ. 3 (ಆರ್‌ಕೆ)– ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡದ ಬಾಕಿ ಪಾವತಿಗೆ ನಾಳೆ (ಮಾ.4)ಯಿಂದ ಅನ್ವಯವಾಗುವಂತೆ ಮತ್ತೆ ಶೇ.50 ರಿಯಾಯ್ತಿ ಕಲ್ಪಿಸಲಾಗಿದೆ. ಈ ಕುರಿತು ಇಂದು ಸಾರಿಗೆ ಇಲಾಖೆ ಅಧೀನ ಕಾರ್ಯದರ್ಶಿ ವಿ.ಎಸ್. ಪುಷ್ಪಾ, ದಂಡದಲ್ಲಿ ಶೇ.50ರಷ್ಟು ರಿಯಾಯಿತಿ ಪಾವತಿಗೆ ಮಾರ್ಚ್ 4ರಿಂದ 15 ದಿನಗಳ ಕಾಲ ಅವಕಾಶ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಈ ಹಿಂದೆ ಫೆ. 3 ರಿಂದ 11 ರವರೆಗೆ ಶೇ. 50ರ ರಿಯಾಯಿತಿ ನೀಡಲಾಗಿತ್ತು. ಈ ಅವಕಾಶ ಬಳಸಿಕೊಂಡು ಸಾರ್ವಜನಿಕರು ತಮ್ಮ ▶ 8ನೇ ಪುಟಕ್ಕೆ

ದ್ವಿತೀಯ ಪಿಯುಸಿ ಪರೀಕ್ಷೆ; ವಿದ್ಯಾರ್ಥಿಗಳಿಗೆ ಉಚಿತ ಬಸ್ ಪ್ರಯಾಣ



ಬೆಂಗಳೂರು, ಮಾ.3– ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಪರೀಕ್ಷೆಗೆ ಉಚಿತವಾಗಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಸಂಚರಿಸಬಹುದು ಎಂದು ನಿಗಮ ತಿಳಿಸಿದೆ. ಪರೀಕ್ಷೆ ಬರೆಯಲು ಇತರೆ ವಿದ್ಯಾಸಂಸ್ಥೆಗಳಿಗೆ ತೆರಳುವವರಿಗೂ ಇದು ಅನ್ವಯವಾಗಲಿದೆ. ಮಾ.9 ರಿಂದ ಮಾ.29ರವರೆಗೆ ವಿದ್ಯಾರ್ಥಿಗಳು ಉಚಿತವಾಗಿ ಸಂಚರಿಸಬಹುದು. ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ಪ್ರವೇಶ ಪತ್ರ ತೋರಿಸಿ ಉಚಿತವಾಗಿ ಬಸ್‌ನಲ್ಲಿ ಪ್ರಯಾಣಿಸಬಹುದಾಗಿದೆ ಎಂದು ತಿಳಿಸಿರುವ ನಿಗಮ, ▶ 8ನೇ ಪುಟಕ್ಕೆ

ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪುತ್ರನ ಲಂಚಾವತಾರ

ಲೋಕಾಯುಕ್ತ ದಾಳಿಯಲ್ಲಿ 8.12 ಕೋಟಿ ನಗದು ಜಪ್ತಿ





ಪ್ರಶಾಂತ್

ಬೆಂಗಳೂರು, ಮಾ. 3– ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಪ್ರಶಾಂತ್ ಕೆಎಸ್‌ಡಿಎಲ್ ಗುತ್ತಿಗೆ ಸಂಬಂಧ ಲಂಚ ಪಡೆಯುತ್ತಿದ್ದಾಗ ಗುರುವಾರ ಸಿಕ್ಕಿಬಿದ್ದ ನಂತರ ಅವರ ಕಚೇರಿ ಮತ್ತು ಮನೆಯಲ್ಲಿ ನಡೆಸಿದ ಶೋಧ ಕಾರ್ಯಾಚರಣೆ ವೇಳೆ ಈವರೆಗೆ ಲೋಕಾಯುಕ್ತ ಪೊಲೀಸರಿಗೆ ಒಟ್ಟು 8.12 ಕೋಟಿ ರೂ. ಸಿಕ್ಕಿದೆ.

ನಿನ್ನೆ ಶಾಸಕರ ಪುತ್ರ ಪ್ರಶಾಂತ್ ಖಾಸಗಿ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದಾಗ ಲಂಚದ ಹಣ 40 ಲಕ್ಷ ರೂ. ಸೇರಿದಂತೆ ಒಟ್ಟು 2.02 ಕೋಟಿ ರೂ. ಸಿಕ್ಕಿತ್ತು. ನಂತರ ಅವರ ನಿವಾಸದ ಮೇಲೆ ದಾಳಿ ನಡೆಸಿದಾಗ ಬೆಡ್‌ನಲ್ಲಿ ಬಚ್ಚಿಟ್ಟಿದ್ದ 6.10 ಕೋಟಿ ರೂ. ಪತ್ತೆಯಾಗಿತ್ತು. ಒಟ್ಟಾರೆ ಲೋಕಾಯುಕ್ತ ಪೊಲೀಸರು 8.12 ಕೋಟಿ ರೂ. ವಶಪಡಿಸಿಕೊಂಡಿದ್ದಾರೆ.

ಲೋಕಾಯುಕ್ತ ಪೊಲೀಸರ ತಂಡ ಬನಶಂಕರಿಯಲ್ಲಿರುವ ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ನಿವಾಸ ಸೇರಿದಂತೆ ಬೆಂಗಳೂರಿನಲ್ಲಿ 3 ಕಡೆ ಹಾಗೂ ಮಾಡಾಳ್ ವಿರೂಪಾಕ್ಷಪ್ಪ ಸ್ವಗ್ರಾಮವಾದ ಚನ್ನೇಪುರ ಗ್ರಾಮದ ಮನೆ, ಮಾವಿನ ಹೊಳೆ ಬಳಿ ಇರುವ ಮಾಡಾಳ್ ಕುಟುಂಬದ ಕ್ರಷರ್ ಕಚೇರಿ, ಮಾವಿನಕಟ್ಟೆ ಗ್ರಾಮದ ಬಳಿ ಇರುವ ತೋಟದ ಮನೆ ಮೇಲೆ ದಾಳಿ ನಡೆಸಿ ದಾಖಲೆಗಳನ್ನು ಪರಿಶೀಲಿಸುತ್ತಿದೆ. ಅಲ್ಲಿ ಪತ್ತೆಯಾದ ನಗದು ಹಾಗೂ ಆಸ್ತಿಪಾಸ್ತಿಗಳ ವಿವರ ಇನ್ನೂ ಲಭ್ಯವಾಗಿಲ್ಲ.

ಲೋಕಾಯುಕ್ತ ಪೊಲೀಸರ ಕಾರ್ಯಾಚರಣೆ ವೇಳೆ ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಪ್ರಶಾಂತ್ ಗುರುವಾರ ಒಂದೇ ದಿನ ಒಂದು ಬ್ಯಾಂಕ್ ಖಾತೆಗೆ 60 ಲಕ್ಷ ಹಾಗೂ ಮತ್ತೊಂದು ಖಾತೆಗೆ 30 ಲಕ್ಷ ರೂ. ಜಮೆ ಮಾಡಿರುವುದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿದ್ದು, ಈ ಹಿನ್ನೆಲೆಯಲ್ಲಿ ಮಾಡಾಳ್ ವಿರೂಪಾಕ್ಷಪ್ಪ ಕುಟುಂಬದವರ ಬ್ಯಾಂಕ್ ಖಾತೆಗಳ ವಿವರಗಳನ್ನು ಲೋಕಾಯುಕ್ತ ಪೊಲೀಸರು ಕಲೆಹಾಕುತ್ತಿದ್ದಾರೆ ಎಂದು ಹೇಳಲಾಗಿದೆ.

ಲಂಚ ಪ್ರಕರಣದ ಆರು ಆರೋಪಿಗಳಿಗೆ ನ್ಯಾಯಾಂಗ ಬಂಧನ

ಬೆಂಗಳೂರು, ಮಾ. 3– ಲೋಕಾಯುಕ್ತ ಪೊಲೀಸರು ದಾವಣಗೆರೆ ಜಿಲ್ಲೆ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಅವರ ಪುತ್ರ ಪ್ರಶಾಂತ್ ಸೇರಿದಂತೆ 6 ಮಂದಿ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿದ್ದು, ಮಾಡಾಳ್ ವಿರೂಪಾಕ್ಷಪ್ಪ ಹೊರತುಪಡಿಸಿ ಅವರ ಪುತ್ರ ಸೇರಿದಂತೆ ಐವರನ್ನು ಬಂಧಿಸಿದ್ದಾರೆ. ಬಂಧಿತರೆಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಕೆಎಸ್‌ಡಿಎಲ್‌ಗೆ ರಾಸಾಯನಿಕ ಪೂರೈಕೆ ಗುತ್ತಿಗೆ ಕಾರ್ಯಾದೇಶಕ್ಕಾಗಿ ಲಂಚ ಕೇಳಲಾಗುತ್ತಿದೆ ಎಂದು ಶ್ರೇಯಸ್ ಕಶ್ಯಪ್ ಎಂಬುವವರು ನೀಡಿದ ದೂರಿನನ್ವಯ ಮೊದಲನೇ ಆರೋಪಿಯಾಗಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ನಂತರ ಅವರ ಪುತ್ರ ಪ್ರಶಾಂತ್, ಸಂಬಂಧಿಕ ಸಿದ್ದೇಶ್, ಆರೋಮಾ ಕಂಪನಿ ಸಿಬ್ಬಂದಿಗಳಾದ ಆಲ್ಬರ್ಟ್ ನಿಕೋಲಾ ಮತ್ತು ಗಂಗಾಧರ ಎಂಬುವರ ವಿರುದ್ಧ ಲೋಕಾಯುಕ್ತ ▶ 8ನೇ ಪುಟಕ್ಕೆ

ಕೆಎಸ್‌ಡಿಎಲ್ ಅಧ್ಯಕ್ಷ ಸ್ಥಾನಕ್ಕೆ ಮಾಡಾಳ್ ವಿರೂಪಾಕ್ಷಪ್ಪ ರಾಜೀನಾಮೆ



ಬೆಂಗಳೂರು, ಮಾ.3(ಕೆಎಂಶಿ)– ತಮ್ಮ ಪುತ್ರನ ಮನೆ ಹಾಗೂ ಕಚೇರಿಯ ಮೇಲೆ ಲೋಕಾಯುಕ್ತ ದಾಳಿ ನಡೆದಿರುವ ಹಿನ್ನೆಲೆಯಲ್ಲಿ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪಅವರು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ(ಕೆಎಸ್‌ಡಿಎಲ್)ಅಧ್ಯಕ್ಷ ಸ್ಥಾನಕ್ಕೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದಾರೆ.

ರಾಜೀನಾಮೆ ಪತ್ರವನ್ನು ಖುದ್ದಾಗಿ ಮುಖ್ಯಮಂತ್ರಿಗೆ ಸಲ್ಲಿಸದ ಶಾಸಕರು, ತಮ್ಮ ಆಪ್ತರ ಮೂಲಕ ಮುಖ್ಯಮಂತ್ರಿಗಳ ಕಚೇರಿಗೆ ಕಳುಹಿಸಿಕೊಟ್ಟಿದ್ದಾರೆ.

ರಾಜೀನಾಮೆ ಪತ್ರದಲ್ಲಿ ತಮ್ಮ ಪುತ್ರನ ಕಚೇರಿ ಹಾಗೂ ಮನೆಯ ಮೇಲೆ ನಡೆದಿರುವ ಲೋಕಾಯುಕ್ತ ದಾಳಿಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, ಇದು ನನ್ನ ಕುಟುಂಬದ ವಿರುದ್ಧದ ಷಡ್ಯಂತ್ರವಾಗಿದೆ. ಆದರೂ ನನ್ನ ಮೇಲೆ ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ▶ 8ನೇ ಪುಟಕ್ಕೆ


ಅಪ್ಪನೇ ಎ–1 ಆರೋಪಿ: ಅಗತ್ಯ ಬಿದ್ದರೆ ವಿರೂಪಾಕ್ಷಪ್ಪ ವಿಚಾರಣೆ



ಬಿ.ಎಸ್.ಪಾಟೀಲ್

ಬೆಂಗಳೂರು, ಮಾ.3–ಭ್ರಷ್ಟಾಚಾರ ಪ್ರಕರಣದಲ್ಲಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಪ್ರಶಾಂತ್ ಸೇರಿದಂತೆ ಐವರನ್ನು ಬಂಧಿಸಲಾಗಿದ್ದು, 8 ಕೋಟಿಗೂ ಅಧಿಕ ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ತಿಳಿಸಿದ್ದಾರೆ. ಇಂದು ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಎಸ್‌ಡಿಎಲ್ ಟೆಂಡರ್‌ಗೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ನಡೆಸಿದ ದಾಳಿ ವೇಳೆ ನಿನ್ನೆ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಕಚೇರಿಯಲ್ಲಿ ನಡೆಸಿದ ಕಾರ್ಯಾಚರಣೆ ▶ 8ನೇ ಪುಟಕ್ಕೆ

ನಿಷ್ಪಕ್ಷಪಾತ ತನಿಖೆ: ಸಿಎಂ



ಬೆಂಗಳೂರು, ಮಾ.3(ಕೆಎಂಶಿ)– ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರನನ್ನು ಲೋಕಾಯುಕ್ತ ಬಂಧಿಸಿರುವ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆಯಾಗಲಿದೆ. ತಪ್ಪು ಮಾಡಿದವರಿಗೆ ಶಿಕ್ಷೆಯಾಗಲಿ ಎನ್ನುವುದು ನಮ್ಮ ನಿಲುವು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ವಿರೂಪಾಕ್ಷಪ್ಪ ಅವರ ಪುತ್ರನನ್ನು ಲೋಕಾಯುಕ್ತ ಬಂಧಿಸಿರುವ ವಿಚಾರದ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಾಯುಕ್ತವನ್ನು ಪುನರ್ ಸ್ಥಾಪನೆ ಮಾಡಿದ್ದೇ ಭ್ರಷ್ಟಾಚಾರವನ್ನು ಮುಕ್ತವಾಗಿ ನಿಗ್ರಹಿಸಬೇಕು ಎಂದು. ಲೋಕಾಯುಕ್ತ ಇಲ್ಲದೆ ಇಂತಹ ಹಲವಾರು ಪ್ರಕರಣಗಳು ಕಾಂಗ್ರೆಸ್ ಆಡಳಿತದಲ್ಲಿ ನಡೆದು, ಮುಚ್ಚಿಹೋಗಿವೆ. ಆದರೆ ಈಗ ನಿಷ್ಪಕ್ಷಪಾತ ತನಿಖೆಯಾಗಲಿದೆ ಎಂದು ಪುನರುಚ್ಚರಿಸಿದ ಸಿಎಂ, ▶ 8ನೇ ಪುಟಕ್ಕೆ

ವಿಧಾನಸಭಾ ಚುನಾವಣೆ ಘೋಷಣೆಗೆ ಮುನ್ನವೇ ವ್ಯಾಪಕ ಉಡುಗೊರೆ ಭಾಗ್ಯ

ರಾಜ್ಯದಲ್ಲಿ ಇಡಿ, ಐಟಿ ಅಧಿಕಾರಿಗಳ ಹದ್ದಿನ ಕಣ್ಣು

- ಅಭ್ಯರ್ಥಿಗಳ ಹಣದ ಮೂಲ ಪತ್ತೆಗೆ 'ನಿಗೂಢ' ಕಾರ್ಯಾಚರಣೆ
- ಬ್ಯಾಂಕ್ ಖಾತೆಗಳ ಮೇಲೆ ತೀವ್ರ ನಿಗಾ; ಪ್ರತಿಪಕ್ಷಗಳು ತತ್ತರ

ಬೆಂಗಳೂರು, ಮಾ.3(ಕೆಎಂಶಿ) ವಿಧಾನಸಭೆ ಚುನಾವಣೆಗೂ ಮುನ್ನ ಸ್ಪರ್ಧಾಕಾಂಕ್ಷಿಗಳು ಮತದಾರರಿಗೆ ನಾನಾ ರೀತಿಯ ಆಮಿಷ ವೊಡ್ಡುತ್ತಿರುವ ಆರೋಪ ವ್ಯಾಪಕವಾಗಿ ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಹಣದ ವಹಿವಾಟಿನ ಮೇಲೆ ನಿಗಾ ಇಡಲು ರಾಷ್ಟ್ರ ಮಟ್ಟದ ತನಿಖಾ ಸಂಸ್ಥೆಗಳ ಅಧಿಕಾರಿಗಳು ರಾಜ್ಯದಲ್ಲಿ ಈಗಾಗಲೇ ಬೀಡು ಬಿಟ್ಟಿದ್ದಾರೆ.

ಸ್ಪರ್ಧಾಕಾಂಕ್ಷಿಗಳಿಗೆ ಈಗಾಗಲೇ 'ದಾಳಿ' ಗುಮ್ಮ ಕಾಡತೊಡಗಿದೆ. ಹೀಗಾಗಿ ಬಚಾವಾಗಲು ನಾನಾ ರೀತಿಯ ತಂತ್ರಗಾರಿಕೆ ಅನುಸರಿಸುತ್ತಿದ್ದಾರೆ. ಚುನಾವಣೆಯಲ್ಲಿ ಹಣದ ಹೊಳೆ ಹರಿಯುವ ಸುಳಿವು ಅರಿತಿರುವ ಇಡಿ, ಐಟಿ ಸೇರಿದಂತೆ ರಾಷ್ಟ್ರೀಯ ಸಂಸ್ಥೆಗಳ ಅಧಿಕಾರಿಗಳು ರಾಜ್ಯದ ಆಯಕಟ್ಟಿನ ಸ್ಥಳದಲ್ಲಿ ಬೀಡು ಬಿಟ್ಟಿದ್ದು, ಈಗಾಗಲೇ ಕಾರ್ಯಾಚರಣೆಗೆ ಇಳಿದಿದ್ದಾರೆ. ಗೋವಾ, ತಮಿಳುನಾಡು ಹಾಗೂ ದೆಹಲಿಯಿಂದ ಅಧಿಕಾರಿಗಳು ರಾಜ್ಯಕ್ಕೆ ಆಗಮಿಸಿದ್ದಾರೆ. ಸ್ಪರ್ಧೆ ಖಾತ್ರಿಯಾಗಿರುವ ಕೆಲವು ಆಕಾಂಕ್ಷಿಗಳು ಈಗಾಗಲೇ ಟಿವಿ, ಕುಕ್ಕರ್, ತವಾ, ಮಿಕ್ಸಿ, ಸೀರೆ ಉಡುಗೊರೆ ನೀಡಿದ್ದಾರೆ, ನೀಡುತ್ತಿದ್ದಾರೆ. ಬಹಳಷ್ಟು ಮಂದಿ ಪ್ರವಾಸಕ್ಕೆ ಬಸ್ ಭಾಗ್ಯ ಕಲ್ಪಿಸಿದ್ದಾರೆ. ನೀತಿ ಸಂಹಿತೆ ಜಾರಿಯಾದರೆ ಇಂತಹ ಆಮಿಷಗಳನ್ನು ಒಡ್ಡಲಾಗುವುದಿಲ್ಲ ಎಂಬ ಕಾರಣಕ್ಕೆ ಈಗಾಗಲೇ ಉಡುಗೊರೆ ಭಾಗ್ಯ ಕರುಣಿಸಿದ್ದಾರೆ. ಇಂತಹ ವಿಚಾರಗಳ ಬಗ್ಗೆಯೂ ಗಮನ ಹರಿಸಿರುವ ಅಧಿಕಾರಿಗಳು ಸೂಕ್ತ ಕಾಲದಲ್ಲಿ ದಾಳಿ ನಡೆಸಲು ಸಿದ್ಧತೆ ನಡೆಸಲಾಗಿದೆ. ರಾಜಕೀಯ ಪಕ್ಷಗಳು ಹಾಗೂ ಚುನಾವಣಾ ಕಣದಲ್ಲಿನ ಅಭ್ಯರ್ಥಿಗಳ ಖರ್ಚುಗಳ ಮೇಲೆ ಚುನಾವಣಾ ಆಯೋಗ ಹದ್ದಿನ ಕಣ್ಣಿಡುವುದು ಒಂದೆಡೆಯಾದರೆ, ಮತ್ತೊಂದೆಡೆ ಚುನಾವಣಾ ಸಮಯದಲ್ಲಿ ಆರ್ಥಿಕ ಸಂಪನ್ಮೂಲ ಒದಗಿಸುವ ವ್ಯಕ್ತಿಗಳು ಹಾಗೂ ಸಂಸ್ಥೆಗಳ ವ್ಯವಹಾರದ ಮೇಲೂ ಈ ಅಧಿಕಾರಿಗಳು ಕಣ್ಣಿಡಲಿದ್ದಾರೆ. ಈಗಾಗಲೇ ಕೆಲವು ಸಂಸ್ಥೆ ಹಾಗೂ ವ್ಯಕ್ತಿಗಳ ಮೇಲೆ ದಾಳಿಯಾಗಿದ್ದರೂ ಬಹಿರಂಗಗೊಂಡಿಲ್ಲ ಎಂದು ಉನ್ನತ ಮೂಲಗಳು ತಿಳಿಸಿವೆ. ಪ್ರತಿಪಕ್ಷದವರು ಹಾಗೂ ಅವರಿಗೆ ಹಣಕಾಸಿನ ನೆರವು ಒದಗಿಸುವವರಿಗೆ ಕಾನೂನು ರೀತಿ ಕಡಿವಾಣ ಹಾಕುವ ಉದ್ದೇಶ ಹೊಂದಿದ್ದಾರೆ. ಅದರಲ್ಲೂ ಕಾಂಗ್ರೆಸ್ ಮತ್ತು ಆ ಪಕ್ಷದ ಅಭ್ಯರ್ಥಿಗಳಿಗೆ ಹಣ ಪೂರೈಕೆ ಬಂದ್ ಆಗುವ ಸಾಧ್ಯತೆ ಇದೆ.



ಹಿಂದಿನ ಚುನಾವಣೆ ಸಮಯದಲ್ಲಿ ಯಾರು, ಯಾವ ಸಂಸ್ಥೆಗಳು ನೆರವು ನೀಡಿದ್ದವು. ಅವರಿಗೆ ಅಥವಾ ಆ ಸಂಸ್ಥೆಗಳಿಗೆ ಇರುವ ಆದಾಯದ ಮೂಲದ ಬಗ್ಗೆ ಮಾಹಿತಿ ಸಂಗ್ರಹಿಸಿ ದಾಳಿ ಮಾಡುವ ಉದ್ದೇಶ ಹೊಂದಿವೆ. ಈಗಾಗಲೇ ಹಲವರಿಗೆ ಇಡಿ ಮತ್ತು ಐಟಿ ಭಯ ಕಾಡತೊಡಗಿದ್ದು, ಚುನಾವಣೆ ಸಂದರ್ಭದಲ್ಲಿನ ಸಹಕಾರಕ್ಕೆ ▶ 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಪತ್ನಿ : ನಾನು ನಿಮಗಾಗಿ ಸಂಪೂರ್ಣ ಜಗತ್ತಿನ ಜೊತೆ ಜಗಳವಾಡ ಬಲ್ಲೆ.
ಪತಿ : ಆದರೆ ನೀನು ಯಾವಾಗಲೂ ನನ್ನ ಜೊತೆಯೇ ಹೆಚ್ಚು ಜಗಳವಾಡುತ್ತಿರುವೆ...?
ಪತ್ನಿ : ಹೌದು, ನೀವೇ ತಾನೆ ನನ್ನ ಪ್ರಪಂಚ

ಮೈಸೂರು ಮಿತ್ರ

ಶನಿವಾರ, 4 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನೀವು ಏನೇ ಮಾಡಿದರೂ ಅದು ಶ್ರೇಷ್ಠ ಸಾಧನೆ ಆಗಬೇಕಿದ್ದರೆ ಅದನ್ನು ಪ್ರೀತಿಸಿ ಹಾಗೂ ಅದಕ್ಕಾಗಿ ತ್ಯಾಗ ಮಾಡಿ –ಮಾಯಾ ಎಂಜಲೋ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿಡಿ ತುಂಬಾ ಹಣವಿದ್ದರೂ ಗುಡಿ ಚೆನ್ನಾಗಿರಬೇಕು

ನಿಮ್ಮ ಪತ್ರಗಳು

ಕನ್ನಡ ಸಾಹಿತ್ಯ ಸಮ್ಮೇಳನಗಳು ಸರಳವಾಗಿ ನಡೆಯಲಿ

ಮಾನ್ಯರೆ,

ಕಳೆದ ಜನವರಿಯಲ್ಲಿ ಹಾವೇರಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 25 ಕೋಟಿ ರೂಪಾಯಿ ಖರ್ಚು ಮಾಡಿರುವುದು ಆಶ್ಚರ್ಯಕರ ಸಂಗತಿ. ಸಾರ್ವಜನಿಕರ ತೆರಿಗೆ ಹಣವನ್ನು ಈ ರೀತಿ ದುಂದು ವೆಚ್ಚ ಮಾಡಬಹುದೆ. ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಸುಮಾರು 2,700 ಕನ್ನಡ ಸರ್ಕಾರಿ ಶಾಲೆಗಳು ಮುಚ್ಚಿವೆ. ಸುಮಾರು 6 ಸಾವಿರ ಸರ್ಕಾರಿ ಶಾಲೆಗಳಿಗೆ ಉಪಾಧ್ಯಾಯರುಗಳ ಕೊರತೆ ಇದೆ. ಹಳ್ಳಿಗಾಡಿನ ಅನೇಕ ಸರ್ಕಾರಿ ಶಾಲೆಯ ಕಟ್ಟಡಗಳು ಆಗಲೋ–ಈಗಲೋ ಬೀಳುವ ಸ್ಥಿತಿಯಲ್ಲಿವೆ. ಸಮ್ಮೇಳನಕ್ಕೆ ಖರ್ಚು ಮಾಡಿರುವ ಅರ್ಧ ಹಣವನ್ನಾದರೂ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ಬಳಕೆಯಾಗಿದ್ದರೆ ಅದೊಂದು ಅರ್ಥಪೂರ್ಣವಾಗಿರುತಿತ್ತು.

ಆಶ್ಚರ್ಯಕರ ಸಂಗತಿ ಎಂದರೆ ಸಮ್ಮೇಳನಕ್ಕೆ 20 ಸಾವಿರ ಪ್ರತಿನಿಧಿಗಳನ್ನು ನಿರೀಕ್ಷೆ ಮಾಡಿದ್ದೆವು. ಆದರೆ ತಾಂತ್ರಿಕ ದೋಷದಿಂದ 10 ಸಾವಿರ ಪ್ರತಿನಿಧಿಗಳಷ್ಟೇ ಭಾಗ ವಹಿಸಲು ಸಾಧ್ಯವಾಯಿತು ಎಂದಿದ್ದಾರೆ. ಉಸ್ತುವಾರಿ ವಹಿಸಿಕೊಂಡಿದ್ದ ಅಧಿಕಾರಿಗಳು ಅಂದರೆ ಮೂರು ದಿನಗಳ ಸಮ್ಮೇಳನದಲ್ಲಿ 30 ಸಾವಿರ ಜನರು ಊಟ ಮಾಡಿದ್ದಾರೆ. ಸಮ್ಮೇಳನಕ್ಕೆ ಊಟದ ಖರ್ಚು 8 ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಅಂದರೆ ಪ್ರತಿನಿಧಿಯೊಬ್ಬರಿಗೆ ಸುಮಾರು ರೂ, 2700 ಖರ್ಚಾಗಿದೆ. ಇಷ್ಟೊಂದು ದುಬಾರಿಯಾದ ಊಟ ಏನಿತ್ತು?

ಕರ್ನಾಟಕದಲ್ಲಿ ಮಾತ್ರ ಸರ್ಕಾರದ ಅನುದಾನದ ಹಣದಲ್ಲಿ ಭಾಷಾ ಸಾಹಿತ್ಯ ಸಮ್ಮೇಳನಗಳು ಜರುಗುತ್ತವೆ. ಬೇರೆ ರಾಜ್ಯಗಳಲ್ಲಿ ಕೊಡುಗೈ ಧಾನಿಗಳಿಂದಲೇ ಅಲ್ಲಿನ ಭಾಷಾ ಸಾಹಿತ್ಯ ಸಮ್ಮೇಳನಗಳು ನಡೆಯುತ್ತವೆ. ಆದರೆ ನಮ್ಮಲ್ಲಿ ಸಾಹಿತ್ಯಕ್ಕೂ ರಾಜಕಾರಣಕ್ಕೂ ಬಿಡದ ನಂಟು. ಮುಂದೆ ನಡೆಯುವ ಸಾಹಿತ್ಯ ಸಮ್ಮೇಳನಗಳು ಸರಳವಾಗಿ ನಡೆದು, ಸಾಮಾನ್ಯ ಜನರನ್ನು ತಲುಪುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು

ಸಂಸದ ಪ್ರತಾಪ್ ಸಿಂಹರ ಜನಪರ ಕಾಳಜಿ ಮೆಚ್ಚುಗೆ

ಮಾನ್ಯರೆ,

ಬೆಂಗಳೂರು –ಮೈಸೂರು ದಶಪಥ ರಸ್ತೆ ಸಂಚಾರಕ್ಕೆ ಸಜ್ಜಾಗಿ ಅಧಿಕೃತ ಆರಂಭಕ್ಕೆ ಕಾಯುತ್ತಿದೆ. ಈ ನಡುವೆ ಮಾರ್ಚ್ ಒಂದರಿಂದ ಟೋಲ್ ಸಂಗ್ರಹಣೆಗೆ ಮುಂದಾಗಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಆಜ್ಞೆಗೆ ತಡೆ ತರುವ ಪ್ರಯತ್ನದಲ್ಲಿ ಯಶಸ್ವಿಯಾದ ಸಂಸದ ಪ್ರತಾಪ್ ಸಿಂಹ ಅವರ ಜನಪರ ಕಾಳಜಿ ಮೆಚ್ಚುಗೆಯಾಯಿತು.

ಮೊದಲನೆಯದಾಗಿ ಸರ್ವಿಸ್ ರಸ್ತೆ ಸಂಪೂರ್ಣ ಸಜ್ಜಾಗದೆ ಟೋಲ್ ಸಂಗ್ರಹಣೆ ಹಗಲು ದರೋಡೆಯಾದೀತು ಎಂಬ ಸಾರ್ವಜನಿಕರ ಅಭಿಪ್ರಾಯಕ್ಕೆ ತಕ್ಷಣ ಸ್ಪಂದಿಸಿದ ಪ್ರತಾಪ್ ಸಿಂಹ, ಆ ರಸ್ತೆಯ ಅಧಿಕೃತ ಉದ್ಘಾಟನೆಯಾಗುವ ತನಕ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅವಸರ ಪಡಬಾರದು ಎಂಬ ಸಾರ್ವಜನಿಕ ಕಾಳಜಿಯೇ ಈಗ ಜನಕ್ಕೆ ಬೇಕಾಗಿರುವುದು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಂದ ಅಧಿಕೃತವಾಗಿ ಉದ್ಘಾಟನೆ ಅದ ಮೇಲೆ ಟೋಲ್ ಸಂಗ್ರಹಣೆ ಪ್ರಾರಂಭ ಮಾಡಲಿ ಹಾಗೂ ಟೋಲ್ ದರವೂ ಸಹ ರೂ 135 ರಿಂದ 100ಕ್ಕೆ ನಿಗದಿ ಮಾಡಬಹುದು ಹಾಗೂ ರೂ.205 ರಿಂದ ರೂ.175 ಕ್ಕೆ ನಿಗದಿ ಮಾಡಬಹುದು. ಹಾಗೆಯೇ ಎಲ್ಲಾ ಬಗೆಯ ವಾಹನಗಳಿಗೂ ರಿಯಾಯಿತಿ ನೀಡಬೇಕು. ಸಂಸದರ ಈ ಜನಪರ ನಿಲುವುಗಳು ಮುಂದಿನ ದಿನಗಳಲ್ಲಿ ಅವರ ಯಶಸ್ಸಿಗೆ ಕಾರಣವಾಗಿ ರಾಜ್ಯದ ಇತರ ಶಾಸಕ– ಸಂಸದರೂ ಅವರನ್ನು ಅನುಕರಿಸುವಂತಾಗಲಿ. ಜನಪರ ಕಾಳಜಿ ಇರುವ ಕೆಲಸಗಳನ್ನು ಮಾಡಿದಾಗ ಪಕ್ಷಾತೀತವಾಗಿ ಮೆಚ್ಚುಗೆ ಸೂಚಿಸಬೇಕಲ್ಲವೇ?

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಆದರ್ಶ ಶಾಲೆ ಪ್ರವೇಶ ಪರೀಕ್ಷೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಿಸಿ

ಮಾನ್ಯರೆ,

ಶೈಕ್ಷಣಿಕ ಸಾಲಿಗೆ ಕರ್ನಾಟಕ ಆದರ್ಶ ವಿದ್ಯಾಲಯಗಳಿಗೆ 6ನೇ ತರಗತಿ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆಗೆ ಅರ್ಜಿಯನ್ನು ಆನ್ಲೈನ್ ನಲ್ಲಿ ಆಹ್ವಾನಿಸಲಾಗಿದ್ದು, ಅರ್ಜಿಯನ್ನು ದಿನಾಂಕ 18 ಫೆಬ್ರವರಿ 2023 ರಿಂದ ಸ್ವೀಕರಿಸಲು ಪ್ರಾರಂಭವಾಗಿ, ದಿನಾಂಕ 04 ಮಾರ್ಚ್ 2023 ರವರೆಗೆ ಅರ್ಜಿ ಸಲ್ಲಿಸಲು ಕಲಾವಕಾಶವನ್ನು ಕೇವಲ 15 ದಿನಗಳು ಮಾತ್ರ ನೀಡಲಾಗಿದೆ, ಗ್ರಾಮೀಣ ಭಾಗದ ಪೋಷಕರಿಗೆ ಅರ್ಜಿ ಸಲ್ಲಿಸಲು ಪರದಾಡುತ್ತಿದ್ದು, ಆನ್ಲೈನ್, ಸರ್ವರ್‌ಗಳು, ನೆಟ್ವರ್ಕ್ ಸಮಸ್ಯೆಯಿಂದ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಅಲ್ಲದೆ ಕಂದಾಯ ಇಲಾಖೆಯಲ್ಲಿ ಜಾತಿ, ಆದಾಯ ಪ್ರಮಾಣ ಪತ್ರ, ಇತರ ತಾಲೂಕು, ಜಿಲ್ಲೆ, ಹೊರ ರಾಜ್ಯಗಳಲ್ಲಿ ಅರ್ಜಿಯನ್ನು ಸಲ್ಲಿಸಲು ವಾಸಸ್ಥಳದ ಪ್ರಮಾಣ ಪತ್ರವು ಅಗತ್ಯವಾಗಿರುವುದರಿಂದ, ಈ ದಾಖಲಾತಿಗಳನ್ನು ಪಡೆಯಲು 21 ದಿನಗಳು ಬೇಕಾಗಿರುತ್ತದೆ. ಅಲ್ಲಿಯೂ ಕೂಡ ಸರ್ವರ್ ಸಮಸ್ಯೆ ಇದ್ದು, ಈ ಪ್ರಮಾಣ ಪತ್ರಗಳು ತ್ವರಿತವಾಗಿ ಸಿಗುತ್ತಿಲ್ಲದ ಕಾರಣದಿಂದ ವಿದ್ಯಾರ್ಥಿ ಮತ್ತು ಪೋಷಕರು ಅರ್ಜಿ ಸಲ್ಲಿಸಲು ಆತಂಕಗೊಂಡು ಪರದಾಡುತ್ತಿದ್ದಾರೆ. ಈ ಶೈಕ್ಷಣಿಕ ವರ್ಷ ಐದನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿರುತ್ತದೆ. ಈ ಶಾಲೆಗೆ ಸೇರಲು ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ 6ನೇ ತರಗತಿಗೆ ಅರ್ಹತೆ ಹೊಂದಿರುತ್ತಾರೆ, ಇದೊಂದು ಸದವಕಾಶವಾಗಿದ್ದು, ಮುಂದಿನ ವರ್ಷದಲ್ಲಿ ಈ ಅವಕಾಶ ಇರುವುದಿಲ್ಲ. ಆದ್ದರಿಂದ ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಸರ್ಕಾರವಾಗಲಿ, ಸಚಿವರಾಗಲಿ, ಅಧಿಕಾರಿಗಳಾಗಲಿ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಬೇಕೆಂದು ಈ ಮೂಲಕ ವಿನಂತಿಸಿಕೊಳ್ಳಲಾಗುತ್ತಿದೆ. ಇದರಿಂದ ಗ್ರಾಮೀಣ ಹಾಗೂ ಬಡ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಶ್ರೀ ಚಾಮುಂಡಿಬೆಟ್ಟದ ಸಮಗ್ರ ಅಭಿವೃದ್ಧಿ ಪ್ರಶಂಸನೀಯ

ಮಾನ್ಯರೆ,

ಮೈಸೂರಿನ ಶ್ರೀ ಚಾಮುಂಡೇಶ್ವರಿ ಬೆಟ್ಟದ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವನೆಗೆ ಪ್ರಸಾದ ಯೋಜನೆಯಡಿ ಭಕ್ತಾದಿಗಳು ಹಾಗೂ ಪ್ರವಾಸಿಗರ ಅನುಕೂಲಕ್ಕಾಗಿ 48.3 ಕೋಟಿ ರೂ. ವೆಚ್ಚದ ಕಾಮಗಾರಿ ಕೈಗೊಳ್ಳಲು ಕೇಂದ್ರ ಸರ್ಕಾರ ಅನುಮೋದನೆ ನೀಡಿರುವುದು ತುಂಬಾ ಶ್ಲಾಘನೀಯ. ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಹಾಗೂ ಮಹಿಷಾಸುರ ಪ್ರತಿಮೆ ವೃತ್ತದಿಂದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದವರೆಗಿನ ರಸ್ತೆಗೆ ಪಾರಂಪರಿಕ ವಿದ್ಯುತ್ ದೀಪಗಳು, ಎಂಟ್ರೆನ್ಸ್ ಪ್ಲಾಜಾ, ನಂದಿ ಪ್ರತಿಮೆ ಆವರಣ, ದೇವಿಗೆರೆ ಅಭಿವೃದ್ಧಿ, ಚಾಮುಂಡಿ ಬೆಟ್ಟದ ಆವರಣದ ಸಮಗ್ರ ಅಭಿವೃದ್ಧಿಗೆ ರಾಜ್ಯ ಪ್ರವಾಸೋದ್ಯಮ ಇಲಾಖೆ ಡಿ.ಪಿ.ಆರ್. ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತ್ತು. ಸಂಸದ ಪ್ರತಾಪ್ ಸಿಂಹ ಅವರ ಸತತ ಪ್ರಯತ್ನದಿಂದ ಯೋಜನೆಗೆ ಅನುಮೋದನೆ ಪಡೆದು ಯಶಸ್ವಿಯಾಗಿರುವುದು ಪ್ರಶಂಸನೀಯ.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ.ನಗರ, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ವಿಶ್ವ ಸಮುದಾಯಕ್ಕೆ ಭಾರತ ಈಗ ಆಪತ್ಬಾಂಧವ





> ಟರ್ಕಿಯಲ್ಲಿ ಭೂಕಂಪ ಸಂಭವಿಸಿದ ಮಾಹಿತಿ ಬರುತ್ತಿದ್ದಂತೆ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಟರ್ಕಿ ರಾಷ್ಟ್ರಪತಿ ರೆಸಿಪ್ ಎರ್ಡೋಗಂರನ್ನು ಸಂಪರ್ಕಿಸಿ ಸಂವೇದನೆ ಯನ್ನು, ಸಹಾನುಭೂತಿಯನ್ನು ವ್ಯಕ್ತಪಡಿಸಿ ಪರಿಹಾರ ತಂಡ, ಜೀವ ರಕ್ಷಕ ಔಷಧಿಗಳು, ಪರಿಹಾರ ಸಾಮಗ್ರಿಗಳನ್ನು ಕಳುಹಿಸಿದೆ. ತುರ್ತಾಗಿ ಸಹಾಯಕ್ಕೆ ಧಾವಿಸಿದ ಮೊದಲ ಕೆಲ ದೇಶಗಳಲ್ಲಿ ಭಾರತವು ಒಂದಾಗಿತ್ತು. 'ಆಪರೇಷನ್ ದೋಸ್ತ್' ಎಂಬ ಅರ್ಥಪೂರ್ಣ ಸಂಕೇತನಾಮದಲ್ಲಿ ಟರ್ಕಿಗೆ ಇದುವರೆಗೆ ಆರು ಸಿ-17 ಸಾರಿಗೆ ವಿಮಾನದಲ್ಲಿ ಪರಿಹಾರ ಸಾಮಗ್ರಿಗಳು, ಮೂವತ್ತು ಹಾಸಿಗೆಯುಳ್ಳ ಸಂಚಾರಿ ಆಸ್ಪತ್ರೆ, ಭಾರೀ ಪ್ರಮಾಣದಲ್ಲಿ ಔಷಧಿಗಳು, ನಾನಾ ವೈದ್ಯಕೀಯ ಉಪಕರಣಗಳು, ವಾಹನಗಳ ಸಹಿತ ಎಲ್ಲಾ ಅವಶ್ಯಕ ಸಾಮಗ್ರಿಗಳನ್ನು ರವಾನಿಸಿದೆ. ಇದರೊಂ ದಿಗೆ ಒಂದು ಸಾವಿರ ಸಿಬ್ಬಂದಿ, ಒಂದು ನೂರು ಚಿಕಿತ್ಸಕರು, ಒಂದು ಶ್ವಾನದಳವುಳ್ಳ ಎನ್‌ಡಿ ಆರ್‌ಎಫ್‌ನ ಎರಡು ತಂಡಗಳನ್ನು ಕಳುಹಿಸಿದೆ.

ಫೆಬ್ರವರಿ 6 ರಂದು ಸಂಜೆ ಟರ್ಕಿ ಮತ್ತು ಸಿರಿಯಾ ದೇಶಗಳಲ್ಲಿ ಭೀಕರ ಭೂಕಂಪ ಸಂಭವಿಸಿತು. ರಿಕ್ಟರ್ ಮಾಪನದಲ್ಲಿ 7.8ರ ತೀವ್ರತೆಯ ಈ ಭೂಕಂಪ ಎರಡೂ ದೇಶಗಳಲ್ಲಿ ವಿನಾಶದ ತಾಂಡವವಾಡಿದೆ. ಇದುವರೆಗೆ ಟರ್ಕಿಯಲ್ಲಿ 50 ಸಾವಿರಕ್ಕಿಂತ ಹೆಚ್ಚು ನಾಗರಿಕರು ಸಾವಿಗೀಡಾಗಿದ್ದಾರೆ. ಆರು ಲಕ್ಷ ಅಪಾರ್ಟ್‌ಮೆಂಟ್‌ಗಳು ನೆಲಸಮವಾಗಿವೆ. 1.50 ಲಕ್ಷ ವಾಣಿಜ್ಯ ಸಂಕೀರ್ಣಗಳು ಹಾನಿಗೀಡಾಗಿವೆ. ಫೆ.24 ರವರೆಗೆ 7930 ಪಶ್ಚಾತ್ ಕಂಪನಗಳು (ಭೂಮಿ ನಡುಗುವಿಕೆ) ಸಂಭವಿಸಿದೆ ಎಂದು ಟರ್ಕಿಯ ಆಂತರಿಕ ವ್ಯವಹಾರಗಳ ಸಚಿವ ಸುಲೈಮಾನ್ ಸೊಯ್ಲು ಅಲ್ಲಿನ ರಾಷ್ಟ್ರೀಯ ಸುದ್ದಿ ಮಾಧ್ಯಮದವರಿಗೆ ಮಾಹಿತಿ ನೀಡಿದ್ದರು. ಸಿರಿಯಾದಲ್ಲೂ 6 ಸಾವಿರಕ್ಕಿಂತ ಹೆಚ್ಚು ಮಂದಿ ಸಾವಿಗೀಡಾಗಿದ್ದಾರೆ. ಎರಡೂ ದೇಶಗಳಲ್ಲಿ ಗಾಯಾಳುಗಳು ಕಟ್ಟಡಗಳ ಅವಶೇಷಗಳಡಿ ಸಿಲುಕಿದವರು, ಕಾಣೆಯಾದವರ ಸಂಖ್ಯೆ ಇನ್ನೂ ಅನೇಕ ಪಟ್ಟು ಇದೆ ಎಂಬ ಆತಂಕವೂ ಇದೆ. ಬದುಕುಳಿದವರಿಗೆ ಆಹಾರದ ಕೊರತೆ, ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಗಳಿವೆಯೆಂದು ಆತಂಕಪಡಲಾಗಿದೆ. ಪರಿಹಾರ ಕಾರ್ಯಗಳಿಗಾಗಿ ಈಗಾಗಲೇ 84 ದೇಶಗಳ ವಿಪತ್ತು ಪರಿಹಾರ ತಂಡಗಳು ಆಗಮಿಸಿ ಪರಿಹಾರ ಕಾರ್ಯದಲ್ಲಿ ತೊಡಗಿವೆ. ಎರಡೂ ದೇಶಗಳ ಸಂಕಷ್ಟದ ಘಳಿಗೆಯಲ್ಲಿ ಭಾರತವು ಬಹುದೊಡ್ಡ ಭೂಮಿಕೆ ನಿರ್ವಹಿಸಿದೆ.

ಆಪತ್ಬಾಂಧವನಾದ ಭಾರತ

ಟರ್ಕಿಯಲ್ಲಿ ಭೂಕಂಪ ಸಂಭವಿಸಿದ ಮಾಹಿತಿ ಬರುತ್ತಿದ್ದಂತೆ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಟರ್ಕಿ ರಾಷ್ಟ್ರಪತಿ ರೆಸಿಪ್ ಎರ್ಡೋಗಂರನ್ನು ಸಂಪರ್ಕಿಸಿ ಸಂವೇದನೆಯನ್ನು, ಸಹಾನುಭೂತಿಯನ್ನು ವ್ಯಕ್ತಪಡಿಸಿ ಪರಿಹಾರ ತಂಡ, ಜೀವ ರಕ್ಷಕ ಔಷಧಿಗಳು, ಪರಿಹಾರ ಸಾಮಗ್ರಿಗಳನ್ನು ಕಳುಹಿಸಿದೆ. ತುರ್ತಾಗಿ ಸಹಾಯಕ್ಕೆ ಧಾವಿಸಿದ ಮೊದಲ ಕೆಲ ದೇಶ ಗಳಲ್ಲಿ ಭಾರತವು ಒಂದಾಗಿತ್ತು. 'ಆಪರೇಷನ್ ದೋಸ್ತ್' ಎಂಬ ಅರ್ಥಪೂರ್ಣ ಸಂಕೇತನಾಮ ದಲ್ಲಿ ಟರ್ಕಿಗೆ ಇದುವರೆಗೆ ಆರು ಸಿ–17 ಸಾರಿಗೆ ವಿಮಾನದಲ್ಲಿ ಪರಿಹಾರ ಸಾಮಗ್ರಿಗಳು, ಮೂವತ್ತು ಹಾಸಿಗೆಯುಳ್ಳ ಸಂಚಾರಿ ಆಸ್ಪತ್ರೆ, ಭಾರೀ ಪ್ರಮಾಣದಲ್ಲಿ ಔಷಧಿಗಳು, ನಾನಾ ವೈದ್ಯಕೀಯ ಉಪಕರಣಗಳು, ವಾಹನಗಳ ಸಹಿತ ಎಲ್ಲಾ ಅವಶ್ಯಕ ಸಾಮಗ್ರಿಗಳನ್ನು ರವಾನಿಸಿದೆ. ಇದರೊಂದಿಗೆ ಒಂದು ಸಾವಿರ ಸಿಬ್ಬಂದಿ, ಒಂದು ನೂರು ಚಿಕಿತ್ಸಕರು, ಒಂದು ಶ್ವಾನದಳವುಳ್ಳ ಎನ್‌ಡಿ ಆರ್‌ಎಫ್‌ನ ಎರಡು ತಂಡಗಳನ್ನು ಕಳುಹಿಸಿದೆ. ಅವಶ್ಯಕತೆ ಇದ್ದಲ್ಲಿ ಇನ್ನೂ ಹೆಚ್ಚಿನ ನೆರವು ನೀಡುವ ಭರವಸೆಯನ್ನು ನೀಡಲಾಗಿದೆ. ಭಾರತದಲ್ಲಿರುವ ಟರ್ಕಿ ರಾಯಭಾರಿ, ತ್ವರಿತ ಸಹಾಯ ನೀಡಿದ್ದಕ್ಕೆ 'ಸಂಕಷ್ಟದ ಸಮಯದಲ್ಲಿ ಸಹಾಯಕ್ಕೆ ಬರುವವನೇ ನಿಜವಾದ ಸ್ನೇಹಿತ' ಎಂದು ಕೃತಜ್ಞತೆಯನ್ನು ಸಲ್ಲಿಸಿದರು.

ಭಾರತವನ್ನು ವಿರೋಧಿಸುತ್ತಿದ್ದ ಟರ್ಕಿ

ಇತ್ತೀಚಿನ ವರ್ಷಗಳಲ್ಲಿ ಭಾರತ–ಟರ್ಕಿ ನಡುವಿನ ಸಂಬಂಧ ಹದಗೆಟ್ಟಿತ್ತು. ಟರ್ಕಿ ರಾಷ್ಟ್ರಪತಿ ಎಡೋರ್ಗಂ ಇಸ್ಲಾಮಿಕ್ ದೇಶಗಳ ನಾಯಕನಾಗುವ ಉತ್ಸಾಹ ದಲ್ಲಿ, ಇಸ್ಲಾಮಿಕ್ ದೇಶಗಳಿಗೆ ಖಲೀಫನಾಗುವ ಮಹತ್ವಾಕಾಂಕ್ಷೆಯಲ್ಲಿ ವಿಶ್ವದ ಎಲ್ಲಾ ವೇದಿಕೆಗಳಲ್ಲಿ ಭಾರತವನ್ನು ಕಟುವಾಗಿ ದೂಷಿಸುತ್ತಿದ್ದರು. ಪರಮಾಪ್ತ ಮಿತ್ರ ಪಾಕ್‌ನ ನೆಲೆಯಲ್ಲೂ ಭಾರತವನ್ನು ದ್ವೇಷಿಸುತ್ತಿದ್ದರು. ಕಾಶ್ಮೀರವನ್ನು ಪಾಕಿಸ್ತಾನಕ್ಕೆ ನೀಡಬೇಕೆಂದು ಕಿರುಚಾಡುತ್ತಿದ್ದರು. ಕಾಶ್ಮೀರದಲ್ಲಿ 370ನೇ ವಿಧಿ ರದ್ದುಗೊಳಿಸಿದಾಗ ಸಿಎಎ, ಎನ್‌ಆರ್‌ಸಿ ಗಳಿಗೂ ಸಂಬಂಧಿಸಿದಂತೆ ಭಾರತನ್ನು ಜರಿಯು ತ್ತಿದ್ದರು. ಕೇದಾರನಾಥದಲ್ಲಿ ಭೀಕರ ಮೇಘ ಸ್ಫೋಟ ದಿಂದ ವಿನಾಶ ಸಂಭವಿಸಿತು. ಆ ಸಂದರ್ಭದಲ್ಲಿ ಟರ್ಕಿ ಸಹಾಯ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಎಡೋರ್ಗಂರವರು "ಭಾರತದಲ್ಲಿ ಸ್ವತಃ ಅವರ ದೇವರೇ ರಕ್ಷಿಸದಿರುವಾಗ ಅಲ್ಲಾಹುನ ಅನುಯಾಯಿಗಳಾದ ನಾವೇಕೆ ಹೋಗಬೇಕು" ಎಂದು ಮಾನವೀಯತೆಗೆ ವಿರುದ್ಧವಾದ ದುರುಳ ಹೇಳಿಕೆ ನೀಡಿದ್ದರು.

ಕೋವಿಡ್ ಸಂದರ್ಭದಲ್ಲಿ ಭಾರತಕ್ಕೆ ಅಲ್ಪ ಪ್ರಮಾಣದ ಚಿಕಿತ್ಸಾ ಸಲಕರಣೆಗಳನ್ನು ಕಳಿಸಿತ್ತು. ಆದರೆ ಈ ಬಾರಿ ಭಾರತವು ಟರ್ಕಿಗೆ ಸ್ಪಂದಿಸಿದ ರೀತಿಯು ಭಾರತವು ಜಗತ್ತನ್ನು ಕುರಿತು ಹೊಂದಿರುವ ಉದಾತ್ತ ಭಾವನೆಗಳ ಪ್ರತೀಕವಾಗಿತ್ತು. ಜಗತ್ತಿನ ಯಾವುದೇ ಮೂಲೆಯಲ್ಲೂ ಪ್ರಾಕೃತಿಕ ವಿಪತ್ತು ಘಟಿಸಿದಲ್ಲಿ ಭಾರತವು ಜಾತಿ, ಧರ್ಮ, ಪ್ರದೇಶಗಳನ್ನು ಪರಿಗಣಿಸದೇ ಸಹಾಯಕ್ಕೆ ಧಾವಿಸುತ್ತದೆ. ಪರಿಹಾರ ಕಾರ್ಯದಲ್ಲಿ ಭಾಗವಹಿಸಿದ ಭಾರತದ ಎನ್‌ಡಿಆರ್‌ಎಫ್ ಯೋಧರು ಟರ್ಕಿಯಲ್ಲಾದ ಹೃದಯಸ್ಪರ್ಶಿ ಅನುಭವಗಳನ್ನು ಪ್ರಧಾನಿಯವರ ಸಮ್ಮುಖದಲ್ಲಿ ಹಂಚಿಕೊಂಡಿದ್ದರು.

ಪಾಕ್‌ಗೆ ಕಪಾಳಮೋಕ್ಷ ನೀಡಿದ ಟರ್ಕಿ

ಟರ್ಕಿ ಹಾಗೂ ಪಾಕಿಸ್ತಾನ ಎರಡೂ ಇಸ್ಲಾಮಿಕ್ ಮಿತ್ರ ರಾಷ್ಟ್ರಗಳು. ಆದರೂ ಭಾರತದ ಪರಿಹಾರ ಹೊತ್ತ ವಿಮಾನಗಳಿಗೆ ಪಾಕ್ ತನ್ನ ವಾಯುಮಾರ್ಗ ಬಳಸಲು ಅನುಮತಿ ನೀಡಲು ವಿಳಂಬ ನೀತಿ ಅನುಸರಿಸಿ, ದುರುಳತನ ತೋರಿತು. ಪಾಕಿಸ್ತಾನದ ಸೂಚನೆ–ಪ್ರಸಾರಣ ಸಚಿವೆ ಮರಿಯಂ ಔರಂಗಜೇಬ್‌ರವರು ಪ್ರಧಾನಿ ಶಹಬಾಜ್ ಶರೀಫ್ ಫೆ.8 ರಂದು ಟರ್ಕಿಗೆ ಆಗಮಿಸಿ ರಾಷ್ಟ್ರಪತಿ ಎರ್ಡೋಗಂರವರಿಗೆ ತಮ್ಮ ದೇಶದ ಸಂವೇದನೆ ವ್ಯಕ್ತಪಡಿಸುವುದಾಗಿ ಟ್ವೀಟ್ ಮಾಡಿದರು. ಇದಕ್ಕೆ ಪ್ರತಿಯಾಗಿ ಪಾಕ್ ಪ್ರಸ್ತಾಪ ತಿರಸ್ಕರಿಸುತ್ತಾ ಪ್ರಸ್ತುತ ದೇಶದ ಎಲ್ಲಾ ಸಚಿವರು, ಆಡಳಿತ ಯಂತ್ರ ಪರಿಹಾರ ಕಾರ್ಯದಲ್ಲಿ ನಿರತರಾಗಿರುವಾಗ ಟರ್ಕಿಯು ಯಾವುದೇ ರೀತಿಯ ಆತಿಥ್ಯ ನೀಡುವ ಅಥವಾ ಪ್ರೋಟೋ ಕಾಲ್ ಶಿಷ್ಟಾಚಾರ ನಿರ್ವಹಿಸುವ ಸ್ಥಿತಿಯಲ್ಲಿಲ್ಲ ಎಂದು ತಿಳಿಸಿತು. ರಾಷ್ಟ್ರಪತಿ ಎರ್ಡೋಗಂರ ಮಾಜಿ ವಿಶೇಷ ಸಹಾಯಕ ಆಜಂ ಜಮೀಲ್ ತಮ್ಮ ಟ್ವೀಟ್‌ನಲ್ಲಿ 'ಸದ್ಯ ಟರ್ಕಿಯು ಕೇವಲ ತನ್ನ ನಾಗರಿಕರ ರಕ್ಷಣೆಯಲ್ಲಿ ನಿರತವಾಗಿದೆ. ಆದ್ದರಿಂದ ಸಾಧ್ಯವಾದರೆ ರಕ್ಷಣಾ ತಂಡ ಕಳಿಸಿರಿ' ಎನ್ನುವ ಮೂಲಕ ಪಾಕ್‌ಗೆ ಕಪಾಳಮೋಕ್ಷ ನೀಡಿತು.

ಪಾಕಿಸ್ತಾನದ ಪಾಶವಿ ಮಾನಸಿಕತೆ

ಸಂಕಷ್ಟದ ಸಮಯದಲ್ಲಿ ಪಾಕ್ ತನ್ನ ಪಾಶವಿ ಬುದ್ಧಿ ಕಾಲ ಕಾಲಕ್ಕೆ ತೋರಿಸಿದೆ. ಹಸಿವಿನಿಂದ ಕಂಗೆಟ್ಟ ಇನ್ನೊಂದು ಇಸ್ಲಾಮಿಕ್ ದೇಶ ಅಫ್ಘಾನಿಸ್ತಾನಕ್ಕೆ ಭಾರತವು ನಲ್ವತ್ತು ಸಾವಿರ ಟನ್ ಗೋಧಿ ಕಳಿಸುವ ವಾಗ್ದಾನ ನೀಡಿತ್ತು. ನೂರಾರು ಗೋಧಿ ತುಂಬಿದ ಲಾರಿಗಳಿಗೆ ತನ್ನ ನೆಲದಿಂದ ಸಂಚರಿಸಲು ಕೆಲವು ವಾರಗಳ ಕಾಲ ತಡೆಯೊಡ್ಡಿತು. ಉಳಿದ ಗೋಧಿಯನ್ನು ಭಾರತವು ಇರಾನ್ ಮೂಲಕ ಕಳುಹಿಸಿತು. ಪ್ರಸ್ತುತ ಭಿಕಾರಿಯಾಗಿರುವ ಪಾಕಿಸ್ತಾನಕ್ಕೆ ಭಾರತವು ಸಹಾಯ ಮಾಡಬೇಕೆನ್ನುವ ಕೆಲವು ಉದಾರವಾದಿಗಳು, ಪಾಕ್ ಭಕ್ತರು ಟರ್ಕಿ, ಆಫ್ಘಾನ್ ವಿಷಯದಲ್ಲಿ ಪಾಕ್ ನಡವಳಿಕೆಯನ್ನು ಗಮನಿಸುವುದು ಸೂಕ್ತ. ಪಾಕಿಸ್ತಾನ ಕೇವಲ ಭಾರತ ಮಾತ್ರವಲ್ಲ. ಇಡೀ ಜಗತ್ತಿಗೆ ಶಾಪವಾಗಿದೆ, ಅಪಾಯಕಾರಿಯಾಗಿದೆ.

ಸಿರಿಯಾಗೂ ಸಹಾಯಹಸ್ತ

ಪಶ್ಚಿಮದ ದೇಶಗಳು ಕೇವಲ ಟರ್ಕಿಗೆ ಸಹಾಯ ನೀಡುವತ್ತ ಗಮನ ಹರಿಸಿದವು. ಆದರೆ ಭಾರತವು ಸಿರಿಯಾಕ್ಕೂ ಸಹಾಯ ಮಾಡಿತು. ಸಿರಿಯಾಕ್ಕೆ ಆರು ಟನ್‌ನಷ್ಟು ಆಪತ್ ಸಹಾಯತಾ ಸಾಮಗ್ರಿಗಳು, ಜೀವರಕ್ಷಕ ಔಷಧಿಗಳು, ಮೂರು ಟ್ರಕ್ ಬಟ್ಟೆಗಳು, ಇಸಿಜಿ ಮಷಿನ್ ಗಳು ಹಾಗೂ ಇತರ ಅವಶ್ಯಕ ಸಾಮಗ್ರಿಗಳೊಂದಿಗೆ ಪರಿಹಾರ ತಂಡವನ್ನು ಕಳುಹಿಸಿತು. ಈ ಕುರಿತು ಸಿರಿಯಾ ರಾಯಭಾರಿ ಭಾರತವನ್ನು ಪ್ರಶಂಸಿಸುತ್ತಾ ಪಶ್ಚಿಮ ದೇಶಗಳು ತಮ್ಮ ಸದಸ್ಯ ದೇಶ ಟರ್ಕಿಗೆ ಮಾತ್ರ ಔದಾರ್ಯ ತೋರಿದವು. ಆದರೆ ಭಾರತ ನಮಗೂ ಸಹಾಯ ಮಾಡಿತು. ಸಿರಿಯಾ ರಾಯಭಾರಿ ಭಾಸಂ ಅಲ್ ಖತೀಜ ಇದು ವಿಕಾಸಶೀಲ ದೇಶಗಳ ಧ್ವನಿಯಾಗಿದೆ. ಈ ಧ್ವನಿಯನ್ನು ಭವಿಷ್ಯದಲ್ಲೂ ಕೇಳಲು ಬಯಸುತ್ತೇವೆ ಎಂದು ಉದ್ಗರಿಸಿದರು.

ಭಾರತದ ಮಾನವೀಯ ದೃಷ್ಟಿಕೋನ ಹೊಸದೇನಲ್ಲ

ವಿಶ್ವ ಸಮುದಾಯ ಕುರಿತಾದ ಭಾರತದ ಉದಾತ್ತ ದೃಷ್ಟಿಕೋನ ಹೊಸದೇನಲ್ಲ. 1970ರಲ್ಲಿ ಪೆರುವಿನಲ್ಲಿ ಸಂಭವಿಸಿದ ಅಂಕಷ್ ನಾಮದ ಭೂಕಂಪದಲ್ಲಿ 50 ಸಾವಿರ ಜನರು ಮೃತರಾಗಿ 20 ಸಾವಿರ ಜನರು ಕಾಣೆಯಾದಾಗ ಭಾರತ ನೆರವು ನೀಡಿತ್ತು. ಭಾರತದ ಈ ಮನೋಭಾವ ಜಿ–20 ರ ಅಧ್ಯಕ್ಷತೆಯ ಈ ಅವಧಿಯಲ್ಲಿ ಪ್ರಧಾನಿ ಮೋದಿಯವರು ಎಲ್ಲರೂ ಒಂದಾಗಿ ಮುಂದುವರಿಯಬೇಕೆಂಬ ದೃಷ್ಟಿಕೋನ ನೀಡಿದರು. 2015 ರಲ್ಲಿ ನೇಪಾಳದಲ್ಲಿ ಭೂಕಂಪವಾದಾಗ ನೆರವು ನೀಡಿತು. ಕೋವಿಡ್–19 ಸಂಕಷ್ಟದ ವೇಳೆ ಭಾರತವು 98 ದೇಶಗಳಿಗೆ 23.5 ಕೋಟಿ ಲಸಿಕೆಯನ್ನು ಉಚಿತವಾಗಿ ನೀಡಿತು. ಈ ಮೂಲಕ ಲಸಿಕೆ ನೀಡಿ ಲೂಟಿ ಹೊಡೆಯುವ ಸನ್ನಾಹದಲ್ಲಿದ್ದ ಶ್ರೀಮಂತ ದೇಶಗಳ ಬಹುರಾಷ್ಟ್ರೀಯ ಕಂಪನಿಗಳಿಂದ ಭಾರತವು ಜಗತ್ತಿನ ಬಡ ದೇಶಗಳನ್ನು ರಕ್ಷಿಸಿತು. ಪ್ರಸ್ತುತ ಭಾರತದ 'ಒಂದು ಭೂಮಿ ಒಂದು ಪರಿವಾರ' ಎಂಬುದು 'ವಸುದೈವ ಕುಟುಂಬಕ್ಕಂ' ಘೋಷಣೆಗೆ ಪರ್ಯಾಯವಾಗಿ ಜಗತ್ತನ್ನು ಆಕರ್ಷಿಸುತ್ತಿದೆ.

ನಶಿಸುತ್ತಿರುವ ಕಲೆಗಳ ಸಂರಕ್ಷಿಸುವ ಕಾರ್ಯವಾಗಬೇಕು

• ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಟಿ.ಎಸ್.ನಾಗಾಭರಣ ಸಲಹೆ • ಮೂಲ ಸಂಸ್ಕೃತಿ–ಕನ್ನಡ ಸಂಸ್ಕೃತಿ ಕಾರ್ಯಕ್ರಮ ಸಮಾರೋಪ

ಮೈಸೂರು, ಮಾ.3(ಜಿಎ)–ನಮ್ಮಲ್ಲಿ ಸಮೃದ್ಧವಾದ ಕಲಾಪ್ರಕಾರಗಳಿದ್ದು, ಕಲಾ ವಿಶ್ವವಿದ್ಯಾಲಯಗಳು ವಿಸ್ತರಿಸಿಕೊಳ್ಳುವುದರ ಜೊತೆಗೆ ನಶಿಸಿ ಹೋಗುತ್ತಿರುವ ಕಲೆಗಳನ್ನು ಉಳಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷರೂ, ರಂಗಭೂಮಿ ಹಾಗೂ ಚಲನಚಿತ್ರ ನಿರ್ದೇಶಕರಾದ ಟಿ.ಎಸ್.ನಾಗಭರಣ ಸಲಹೆ ನೀಡಿದರು.



ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ಮೂಲ ಸಂಸ್ಕೃತಿ–ಕನ್ನಡ ಸಂಸ್ಕೃತಿ' ಕಾರ್ಯಕ್ರಮದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕಲಿಕೆಗೆ ಸಮಾರೋಪವಿಲ್ಲ ನಾನು ಇದಿಗೂ ಸಿನಿಮಾ ಹಾಗೂ ರಂಗಭೂಮಿಯ ನಿರಂತರ ವಿದ್ಯಾರ್ಥಿಯಾಗಿದ್ದೇನೆ. ಶಿಬಿರಗಳಿಗೆ ಮಾತ್ರ ಸಮಾರೋಪ ಇರುತ್ತದೆ. ಶಿಬಿರಾರ್ಥಿಗಳು ಅರ್ಥ ಮಾಡಿಕೊಂಡು ಬೆಳೆಯುತ್ತ ಹೋಗಬೇಕಿದ್ದು, ಇಂದಿನ ಕಾಲಘಟ್ಟದಲ್ಲಿ ಜನರು ಬೇಗ ಎಂಬ ದರ್ಶಿನಿ ಸಂಸ್ಕೃತಿಗೆ ಒಳಪಟ್ಟಿದ್ದಾರೆ. ಬೇಗ ತಿಂಡಿ ತಿನ್ನಬೇಕು, ಬೇಗ ಓಡಿ ಹೋಗಬೇಕು, ಬೇಗ ಸಾಧನೆ ಮಾಡಬೇಕು ಹಾಗೂ ಬೇಗ ಜನರು ಗುರುತು ಹಿಡಿಯುವ ಹಂತಕ್ಕೆ ತಲುಪಬೇಕು ಎಂಬ ಆತುರದಲ್ಲಿ ಸಂಸ್ಕೃತಿಯನ್ನೆ ಮರೆಯುತ್ತಿದ್ದೇವೆ. ಹೀಗಾದರೆ ಸಂಸ್ಕೃತಿ ಉಳಿಸುವುದು ಕಷ್ಟವಾಗುವುದರ ಜೊತೆಗೆ, ಅದರ ಬೆಳವಣಿಗೆಯೂ ಕುಂಠಿತವಾಗುತ್ತದೆ ಎಂದರು.

ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆಯು ಮೊಬೈಲ್‌ಗೆ ದಾಸರಾಗುತ್ತಿದ್ದಾರೆ. ಇವುಗಳಿಂದ ನಮ್ಮ ನೆನಪಿನ ಶಕ್ತಿಯೇ ಕುಂದುತ್ತಿದೆ. ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಇಂದು ನಮ್ಮ ಬದುಕನ್ನೆ ತನ್ನ ನಿಯಂತ್ರಕ್ಕೆ ತೆಗೆದುಕೊಳ್ಳುತ್ತಿದೆ. ಇಂತಹ ಆರ್ಟಿಫಿಷಿಯಲ್ ಇಂಟಲಿಜೆನ್ಸ್‌ಗೆ ನಮ್ಮನ್ನು ನಾವೇ ಮಾರಿಕೊಳ್ಳುತ್ತಿದ್ದೇವೆ. ಹೀಗಾಗಿ ಯಂತ್ರಮಾನವರಾಗುವತ್ತ ಹೊರಟಿರುವ ಯುವ ಪೀಳಿಯನ್ನು ಇಂತಹ ಕಲೆಗಳಿಂದ ಜಾಗೃತಿ ಮೂಡಿಸಿ ಎಚ್ಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಸುಂದರ ಹಾಗೂ ಜನಪ್ರಿಯವಾದ ಎಷ್ಟೋ ಮಹಾ ಕಾವ್ಯಗಳು ಕನ್ನಡ ನಾಡಿನಲ್ಲಿ ಜನ್ಮ ಪಡೆದಿವೆ. ಹೀಗಾಗಿ ನಮ್ಮ ನಾಡಿನ ಬಗ್ಗೆ ಹೆಮ್ಮೆ ಇರಬೇಕು. ಹೆಮ್ಮೆ ಪಡುವುದರ ಜೊತೆಗೆ ಇಂತಹ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ. ಇಂತಹ ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವ ಕೆಲಸ ಕೇವಲ ಕಲಾವಿದರದ್ದಲ್ಲ. ಇದು ನಮ್ಮೆಲ್ಲರ ಕರ್ತವ್ಯವಾಗಿದ್ದು, ಕರ್ನಾಟಕದಲ್ಲಿ ಸುಮಾರು ನೂರಕ್ಕೂ ಹೆಚ್ಚು ಕಲೆಗಳಿವೆ. ಅವುಗಳಲ್ಲಿ ಪ್ರಮುಖವಾದ್ದದ್ದು ಸಾಮುದಾಯಿಕ ಕಲೆ ಹಾಗೂ ವೈಯಕ್ತಿಕ ಕಲೆ. ಸಾಮುದಾಯಿಕ ಕಲೆಯು ಸಾಂಘಿಕವಾದ ಕಲೆಯನ್ನು ನಿರೂಪಣೆ ಮಾಡುತ್ತದೆ. ಇಂತಹ ಸಾಮುದಾಯಿಕ ಅಥವಾ ಸಾಂಘಿಕ ಕಲೆಗೆ ಬಹಳ ದೊಡ್ಡದಾದ ಇತಿಹಾಸವಿದೆ. ಇದರ ಬಗ್ಗೆ ನೃಪತುಂಗನ ಕವಿರಾಜಮಾರ್ಗದಲ್ಲಿಯೂ ಉಲ್ಲೇಖವಿದೆ. ಅಂದಿನಿಂದ ಇಂದಿನವರೆಗೂ ಕೂಡ ನಮ್ಮ ಕನ್ನಡ ಸಾಂಸ್ಕೃತಿಕ ಲೋಕ ಇಂತಹ ಅದ್ಭುತವನ್ನು ತನ್ನದಾಗಿಸಿಕೊಂಡಿದೆ ಅಳಿವಿನ ಅಂಚಿಗೆ ಬಂದಿರುವ ಇಂತಹ ಕಲೆಗಳನ್ನು ಉಳಿಸಿಕೊಂಡು ಹೋಗಬೇಕು. ಇದಕ್ಕಾಗಿ ಕಲಾ ವಿಶ್ವವಿದ್ಯಾನಿಲಯ ಹಾಗೂ ಯಾವುದೇ ಕಲಾ ಶಾಲೆಗಳು ತನ್ನ ಕೆಲಸವನ್ನು ವಿಸ್ತರಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ.ಮೈಸೂರು ಗುರುರಾಜ್ ಅವರ ತಂಡದ ಕಲಾವಿದರು ಸಿದ್ದಾಪ್ಪಾಜಿ ಕುರಿತ ಧರೆಗೆ ದೊಡ್ಡವರು, ಮಹದೇವನ ಚೆಲ್ಲಿದರು ಮಲ್ಲಿಗೆಯಾ ಹಾಗೂ ಬೆಟ್ಟ ನುಡಿದಾವೋ ಬಿದಿರು ನುಡಿದಾವೋ ಹಾಡಿ ನೆರೆದಿದ್ದ ಜನರಿಗೆ ಸುಂದರವಾದ ಜನಪದ ಲೋಕಕ್ಕೆ ಕರೆದೊಯ್ದರು.

ಇದಕ್ಕೂ ಮುನ್ನ ನಾಟಕಗಳ ಆತ್ಮ ಎಂದೇ ಕರೆಸಿಕೊಳ್ಳುವ ಹಾಗೂ ಅಳಿವಿನ ಅಂಚಿಗೆ ಬಂದಿರುವ ರಂಗ ಗೀತೆಗಳಾದ ಜಯ ಜಯ ಶುಭಕರ ಜಯ ಸೃಜನಾಕಾರ, ಶ್ರೀಕೃಷ್ಣನ ಬಾಲ್ಯದ ಘಟನೆಗಳನ್ನು ವರ್ಣಿಸುವ ಯದುಬಾಲನ ಲೀಲೆ, ಸತ್ಯಭಾಮ ಪರಿಣಯದ ಗೋಪಾಲ ಮನಮೋಹನ ಗೋವಿಂದ ಮಧುಸೂದನ ರಂಗಗೀತೆಗಳು ಎಲ್ಲರ ಗಮನ ಸೆಳೆಯಿತು ಹಾಗೂ ಕಂಸವಧೆ ನಾಟಕದಲ್ಲಿ ರಜಕ ರಜಕಿಯರ ಸಂಭಾಷಣೆಯ ಕುರಿತ ಬಾರೆ ಹುಡ್ಗಿ ತಾರೆ ಬೆಡಗಿ ಎಂಬ ರಂಗ ಗೀತೆ ಹಾಡಿ ಸಭಿಕರನ್ನು ಮನರಂಜಿಸಿದರು.

ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ತರಬೇತಿ ನೀಡಿದ ಹಿರಿಯ ತಂಬೂರಿ ನೀಲಗಾರ ಕಲಾವಿದರಾದ ಮೈಸೂರು ಗುರುರಾಜು, ಹಿರಿಯ ರಂಗಕರ್ಮಿ ವೈ.ಎಂ.ಪುಟ್ಟಣ್ಣಯ್ಯ, ಹಿರಿಯ ಜಾನಪದ ಕಲಾವಿದರಾದ ಹೊನ್ನೇಗೌಡ, ಹಿರಿಯ ಸೋಬಾನೆ ಕಲಾವಿದರಾದ ಚಿಕ್ಕಮಂಚಮ್ಮ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ. ರೂಪ, ಮೈಸೂರು ವಿಭಾಗದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ. ಗೋವಿಂದರಾಜು, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕ ಡಾ. ಹೊಂಗನೂರು ನಂಜಯ್ಯ, ಮೂಲ ಸಂಸ್ಕೃತಿ ಕನ್ನಡ ಸಂಸ್ಕೃತಿ ತರಬೇತಿ ಶಿಬಿರದ ಜಿಲ್ಲಾ ಸಂಚಾಲಕ ಶರತ್ ಸತೀಶ್, ಡಾ.ಆರ್.ನಿಂಗರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಇದ್ದರು.

ಪೂರ್ವ ಪ್ರಾಥಮಿಕ, ಪ್ರೌಢಶಾಲೆ ಆರಂಭಕ್ಕೆ ಅನುಮತಿ ಪಡೆಯುವ ಪ್ರಕ್ರಿಯೆ ಈಗ ಸರಳ

ಬೆಂಗಳೂರು, ಮಾ.3(ಕೆಎಂಶಿ)– ಶಿಕ್ಷಣ ಇಲಾಖೆ ಮತ್ತು ಸಾಕ್ಷರತಾ ಇಲಾಖೆ ರಾಜ್ಯದಲ್ಲಿ ಖಾಸಗಿ ಪೂರ್ವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ಆರಂಭಿಸಲು ಅನುಮತಿ ನೋಂದಣಿ ಹಾಗೂ ಕೇಂದ್ರ ಪಠ್ಯಕ್ರಮ ಸಂಯೋಜನೆಗೆ ನಿರಕ್ಷೇಪಣಾ ಪತ್ರ ಪಡೆಯುವ ಸೇವೆಗಳ ಕುರಿತಂತೆ ಆನ್‌ಲೈನ್ ಪ್ರಕ್ರಿಯೆಗಳನ್ನು ಪರಿಷ್ಕರಿಸಿ, ಸರಳೀಕರಣಗೊಳಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಹೊಸ ಪದ್ಧತಿಯಲ್ಲಿ ಹೆಚ್ಚು ಪಾರದರ್ಶಕತೆಯೊಂದಿಗೆ ಅಲ್ಪ ಸಮಯದಲ್ಲಿ ಶಾಲಾ ನೋಂದಣಿ ಹಾಗೂ ಮತ್ತಿತರ ಸೇವೆಗಳನ್ನು ಆನ್‌ಲೈನ್‌ನಲ್ಲಿ ಇಲಾಖೆಯು ಒದಗಿಸಲಿದ್ದು, ಮಾರ್ಚ್ 3 ರಂದು ಪರಿಷ್ಕೃತ ತಂತ್ರಾಂಶ ಅನುಷ್ಠಾನಕ್ಕೆ ಚಾಲನೆಗೊಳಿಸಲಾಗುತ್ತಿದೆ. ಎಲ್ಲಾ ಆಸಕ್ತ ಆಡಳಿತ ಮಂಡಳಿಗಳು ಹೊಸ ಪ್ರಾಥಮಿಕ ಶಾಲಾ ಅಥವಾ ಪ್ರೌಢ ಶಾಲೆ ಆರಂಭಿಸಲು ನೋಂದಣಿಗಳಿಗೆ ಮಾನ್ಯತೆಗೆ ರಾಜ್ಯ ಪಠ್ಯಕ್ರಮದಿಂದ ಕೇಂದ್ರ ಪಠ್ಯಕ್ರಮದ ಸಂಯೋಜನೆಗಾಗಿ ನಿರಾಕ್ಷೇಪಣಾ ಪತ್ರ ಪಡೆಯಲು ಹೊಸ ಪರಿಷ್ಕೃತ ತಂತ್ರಾಂಶದ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿಗಳು ಜಿಲ್ಲಾ ಉಪಾಧ್ಯಕ್ಷರಿಗೆ ನೇರವಾಗಿ ಸಲ್ಲಿಕೆಯಾಗಲಿದ್ದು ಸದರಿ ಅಧಿಕಾರಿ ಮಂಜೂರಾತಿ ಪ್ರಾಧಿಕಾರಿಯಾಗಿದ್ದು, ನಿಗದಿತ ಅಲ್ಪಕಾಲದಲ್ಲಿ ಪ್ರಕ್ರಿಯೆಯನ್ನು ಹಮ್ಮಿಕೊಂಡು ಅರ್ಜಿ ಕುರಿತಂತೆ ನಿಯಮ ಅನುಸಾರ ಕ್ರಮ ವಹಿಸುತ್ತಾರೆ.

ಅರ್ಜಿದಾರ ಸಂಸ್ಥೆಗಳು ನೇರವಾಗಿ ತಂತ್ರಾಂಶದ ಮುಖಾಂತರ ಆದೇಶದ ಪ್ರಮಾಣ ಪತ್ರಗಳನ್ನು ಡೌನ್ಲೋಡ್ ಮಾಡಿಕೊಂಡು ಪಡೆದುಕೊಳ್ಳಬಹುದಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com







ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರು ಮೈಸೂರು ಸಿಟಿ ತಿಲಕ್‌ನಗರ ಬಡಾವಣೆ ಉಮರ್ ಖಾಯಂ ರಸ್ತೆ, ಮನೆ ನಂಬರ್ 130ರಲ್ಲಿ ವಾಸವಾಗಿರುವ ಮೊಹಮ್ಮದ್ ಲುಕ್‌ಘುಲ್ಲ ರವರ ಮಗನಾದ ಶ್ರೀ ಮೊಹಮ್ಮದ್ ಸೈಫುಲ್ಲಾರ ರವರಿಂದ ಷೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದು ಈ ಕ್ರಯದ ವ್ಯವಹಾರಕ್ಕೆ ಯಾರದಾದರೂ ಯಾವುದಾದರೂ ತಕರಾರು ಅಥವಾ ಈ ಆಸ್ತಿಯ ಬಗ್ಗೆ ಹಕ್ಕು ಬಾಧ್ಯತೆಗಳಿದ್ದಲ್ಲಿ ಈ ತಿಳುವಳಿಕೆ ಪತ್ರ ಪ್ರಕಟವಾದ ಹತ್ತು ದಿನಗಳೊಳಗಾಗಿ ಲಿಖಿತವಾಗಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಡನೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಕಾನೂನುಬದ್ಧ ತಕರಾರು ಬರದಿದ್ದಲ್ಲಿ ಈ ವ್ಯವಹಾರಕ್ಕೆ ಯಾರದೂ ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿದು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು ಮತ್ತು ನಂತರ ಬರುವ ಯಾವ ತಕರಾರಿಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ತಿಳಿಯುವುದು.

ಷೆಡ್ಯೂಲ್: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವರಕೋಡು ಗ್ರಾಮದ ಸರ್ವೇ ನಂ.182/5 ರಲ್ಲಿ ವಿಸ್ತೀರ್ಣ 39 ಗುಂಟೆ, ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ವ್ಯಸ್ಟಿ ಹಾಲ್ ಮಾರ್ಕ್ ಬಡಾವಣೆ, ಪಶ್ಚಿಮಕ್ಕೆ: ವ್ಯಸ್ಟಿ ಹಾಲ್ ಮಾರ್ಕ್ ಬಡಾವಣೆ, ಉತ್ತರಕ್ಕೆ: ಬಷೀರ್ ಅಹಮ್ಮದ್ ರವರ ಜಮೀನು, ದಕ್ಷಿಣಕ್ಕೆ: ಬಷೀರ್ ಅಹಮ್ಮದ್ ರವರ ಜಮೀನು

Sd/- O.Sham Bhat, B.A.,L.L.B.,,
Reg No: KAR 417/77,
O.Sathisha, B.Sc.,L.L.B.,Reg. No: KAR 721/89
Advocates, #20/C, 2nd Floor, Near Airlines Hotel, Jayalakshmi Vilas Road, Chamrajapuram, Mysuru-05, Ph: 0821-4262475,
Email: shamsathisha@gmail.com











ಮೈಸೂರು ಮಿತ್ರ ಶನಿವಾರ 4 ಮಾರ್ಚ್ 2023

ಇಂದಿನಿಂದ ಕೊಡಗು ಜಿಲ್ಲಾ 16 ನೇ ಕನ್ನಡ ಸಾಹಿತ್ಯ ಸಮ್ಮೇಳನ

ಮಡಿಕೇರಿ, ಮಾ.3– ಕೊಡಗು ಜಿಲ್ಲಾ 16ನೇ ಕನ್ನಡ ಸಾಹಿತ್ಯ ಸಮ್ಮೇಳನವು ಮಾ.4 ಮತ್ತು 5 ರಂದು ಗೋಣಿಕೊಪ್ಪದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನ(ಐ.ಮಾ.ಮುತ್ತಣ್ಣ ವೇದಿಕೆ) ದಲ್ಲಿ ನಡೆಯಲಿದೆ.

ಮಾ.4 ರಂದು ಬೆಳಗ್ಗೆ 8 ಗಂಟೆಗೆ ಗೋಣಿಕೊಪ್ಪಲು ಸರ್ಕಾರಿ ಪ್ರಾಥಮಿಕ ಶಾಲಾ ಮೈದಾನದ ಡಾ.ಪಿ.ಎಂ. ನಾಣಮ್ಮಯ್ಯ ಸಭಾ ಮಂಟಪದ ಮುಂಭಾಗದಲ್ಲಿ ಧ್ವಜಾರೋಹಣ ನಡೆಯಲಿದೆ. ಗೋಣಿಕೊಪ್ಪಲು ಗ್ರಾಪಂ ಅಧ್ಯಕ್ಷೆ ಮನ್ನಕಮನೆ ಸೌಮ್ಯ ಬಾಲು ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಲಿದ್ದಾರೆ. ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಂ.ಪಿ. ಕೇಶವ ಕಾಮತ್ ಕನ್ನಡ ಸಾಹಿತ್ಯ ಪರಿಷತ್ತು ಧ್ವಜಾರೋಹಣ ಮತ್ತು ಪೊನ್ನಂಪೇಟೆ ತಾಲೂಕು ಕಸಾಪ ಅಧ್ಯಕ್ಷ ಕೋಳೇರ ದಯಾ ಚಂಗಪ್ಪ ಅವರು ಕನ್ನಡ ಧ್ವಜಾರೋಹಣ ನೆರವೇರಿಸಲಿದ್ದಾರೆ. ಗೋಣಿಕೊಪ್ಪಲು ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳು ರಾಷ್ಟ್ರಗೀತೆ ಗಾಯನ ಹಾಗೂ ನಾಡಗೀತೆ ಹಾಡಲಿದ್ದಾರೆ.

ನಂತರ ಬೆಳಗ್ಗೆ 8.30 ಗಂಟೆಗೆ ನೆನಪಿನ ದ್ವಾರಗಳ ಉದ್ಘಾಟನೆ ನಡೆಯಲಿದೆ. ಬಳಿಕ ಬೆಳಗ್ಗೆ 8.45 ಗಂಟೆಗೆ ಗೋಣಿಕೊಪ್ಪಲು ಪಾಲಿಬೆಟ್ಟ ರಸ್ತೆ ತಿರುವಿನಿಂದ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಲಿದೆ. ಮೆರವಣಿಗೆಯು ಮುಖ್ಯ ರಸ್ತೆಯಿಂದ ಜಿಎಂಪಿ ಶಾಲಾ ಮೈದಾನದ ಡಾ.ಪಿ.ಎಂ.ನಾಣಮ್ಮಯ್ಯ ಸಭಾಂಗಣದವರೆಗೆ ನಡೆಯಲಿದೆ.

ಅಕ್ರಮ ಬಾಂಗ್ಲಾ ವಲಸಿಗ ಕಾರ್ಮಿಕರ ಮೇಲೆ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ



ಮಡಿಕೇರಿ, ಮಾ.3– ಅಕ್ರಮ ಬಾಂಗ್ಲಾ ವಲಸಿಗ ಕಾರ್ಮಿಕರು ಕೊಡಗು ಜಿಲ್ಲೆಯಲ್ಲಿ ನಡೆಸುತ್ತಿರುವ ಅಪರಾಧ ಪ್ರಕರಣಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ವಲಸಿಗರನ್ನು ಗಡಿಪಾರು ಮಾಡಬೇಕೆಂದು ಆಗ್ರಹಿಸಿ ಕೊಡಗು ಸುರಕ್ಷಾ ಸಮಿತಿ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಜಮಾಯಿಸಿದ ಸಮಿತಿಯ ಪ್ರಮುಖರು ಹಾಗೂ ಕಾರ್ಯಕರ್ತರು ಘೋಷಣೆಗಳನ್ನು ಕೂಗಿ ವಲಸೆ ಕಾರ್ಮಿಕರ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಒತ್ತಾಯಿಸಿದರು.

ಹಿಂದೂ ಜಾಗರಣ ಯುವ ಘಟಕ, ಹಿಂದು ಯುವ ವಾಹಿನಿಯ ಜಿಲ್ಲಾ ಸಂಚಾಲಕ ವಿನಯ್ ಮಾತನಾಡಿ, ಅಕ್ರಮ ಬಾಂಗ್ಲಾ ಮೂಲದ ವಲಸಿಗರು ಭಾರತದ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಕೊಡಗು ಜಿಲ್ಲೆಯ ಕಾಫಿ ತೋಟಗಳಲ್ಲಿ ಕೆಲಸ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಜಿಲ್ಲೆಯಲ್ಲಿ ನಡೆಯುತ್ತಿರುವ ಹಲವು ಅಪರಾಧ ಪ್ರಕರಣಗಳಲ್ಲಿ ಇವರುಗಳ ಪಾತ್ರ ಎದ್ದು ಕಾಣುತ್ತಿದ್ದು, ಪೊಲೀಸ್ ಇಲಾಖೆ ಕಠಿಣ ಕ್ರಮಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದರು.

ಅಧಿಕಾರಿಗಳು ಅಕ್ರಮ ವಲಸಿಗರ ಮೇಲೆ ನಿಗಾ ಇಡಬೇಕು ಮತ್ತು ಅವರ ಬಳಿ ಇರುವ ದಾಖಲೆಗಳನ್ನು ಪರಿಶೀಲಿಸಿ ಅಸಲಿಯೇ ಎಂದು ಖಾತ್ರಿ ಪಡಿಸಿಕೊಳ್ಳಬೇಕು. ನಿರ್ಲಕ್ಷ್ಯ ವಹಿಸಿದರೆ ಮುಂದಿನ ದಿನಗಳಲ್ಲಿ ಕೊಡಗಿಗೆ ಅನಾಹುತ ಕಾದಿದೆ ಎಂದು ಆತಂಕ ವ್ಯಕ್ತಪಡಿಸಿದರು. ತೋಟದ ಮಾಲೀಕರು, ಒಂಟಿ ಮಹಿಳೆಯರು, ವಯೋವೃದ್ಧರು ಹಾಗೂ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಪೊಲೀಸ್ ಇಲಾಖೆ ತಕ್ಷಣ ಅಕ್ರಮ ವಲಸೆ ಕಾರ್ಮಿಕರನ್ನು ಪತ್ತೆ ಹಚ್ಚಬೇಕು ಮತ್ತು ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ಹಿಂದೂ ಜಾಗರಣ ವೇದಿಕೆಯ ಕೊಡಗು ಜಿಲ್ಲಾ ಸಂಚಾಲಕ ಕುಕ್ಕೇರ ಅಜಿತ್, ಸಹ ಸಂಚಾಲಕ ಚೇತನ್, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಬಿ.ಬಿ.ಭಾರತೀಶ್, ನಗರಸಭಾ ಸದಸ್ಯ ಕವನ್ ಕಾವೇರಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷ ಉಮೇಶ್ ಸುಬ್ರಮಣಿ, ಪ್ರಚಾರ ಪ್ರಮುಖ್ ಕುಮಾರ್, ಮಾತೃ ಸುರಕ್ಷ ಪ್ರಮುಖ್ ಸುನೀಲ್, ಮಡಿಕೇರಿ ನಗರ ಸಂಚಾಲಕ ದುರ್ಗೇಶ್, ಪ್ರಮುಖರಾದ ಉಷಾ ದೇವಮ್ಮ, ಮಾದೇಟಿರ ತಿಮ್ಮಯ್ಯ, ಪಿ.ಎಂ.ರವಿ, ಪಿ.ಎ.ರವೀಂದ್ರ, ಶಾಂತೆಯಂಡ ತಿಮ್ಮಯ್ಯ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕಾಫಿ ತೋಟದ ರೈಟರ್ ಆತ್ಮಹತ್ಯೆ

ಮಡಿಕೇರಿ, ಮಾ.3– ಕಾಫಿ ತೋಟದ ರೈಟರ್‌ವೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಪೊನ್ನಂಪೇಟೆ ತಾಲೂಕಿನ ಬಾಳೆಲೆ ಹೋಬಳಿಯಲ್ಲಿ ನಡೆದಿದೆ. ಸ್ಥಳೀಯ ಕಾಫಿ ತೋಟ ಒಂದರಲ್ಲಿ ರೈಟರ್ ಆಗಿದ್ದ ಶಾಮ್ ರೈ(41) ಆತ್ಮಹತ್ಯೆಗೆ ಶರಣಾದವರು. ಕಾಫಿ ತೋಟದ ಲೈನ್ ಮನೆಯಲ್ಲಿ ಶುಕ್ರವಾರ ಬೆಳಗ್ಗೆ 6.30ಕ್ಕೆ ಈ ಘಟನೆ ನಡೆದಿದ್ದು, ಸ್ಥಳಕ್ಕೆ ಪೊನ್ನಂಪೇಟೆ ಪೊಲೀಸರು ಭೇಟಿ ನೀಡಿ, ಮಹಜರು ನಡೆಸಿದ್ದಾರೆ. ಮೃತರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದು, ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ.





ಹುಲಿ ದಾಳಿಗೆ ಕರು ಬಲಿ

ಗೋಣಿಕೊಪ್ಪ, ಮಾ.3– ಮಾಯಮುಡಿ ಗ್ರಾಮದಲ್ಲಿ ಹುಲಿ ದಾಳಿಯಿಂದ ಕೃಷಿಕ ನಂದೀಶ್ ಅವರಿಗೆ ಸೇರಿದ ಕರು ಬಲಿಯಾಗಿದೆ. ಸ್ಥಳಕ್ಕೆ ತಿತಿಮತಿ ಅರಣ್ಯ ವಲಯ ಅಧಿಕಾರಿಗಳ ತಂಡ ಬೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸ್ಥಳದಲ್ಲಿ ಬೋನ್ ಇಟ್ಟು ಕಾರ್ಯಾಚರಣೆ ಮುಂದುವರಿಸಿದ್ದಾರೆ.

ಶುಕ್ರವಾರ ಮುಂಜಾನೆ 3 ಗಂಟೆ ಸುಮಾರಿಗೆ ದಾಳಿ ನಡೆದಿದೆ ಎನ್ನಲಾಗಿದೆ. ಮನೆಯ ಸಮೀಪ ಕಟ್ಟಿದ್ದ ಕರುವನ್ನು ಹಿಡಿದು ತಿನ್ನುತ್ತಿದ್ದಾಗ ಮನೆಯವರು ಕೂಗಿಕೊಂಡಾಗ ಸ್ವಲ್ಪ ಭಾಗವನ್ನು ತಿಂದು ಸ್ಥಳದಿಂದ ಕಾಲ್ಕಿತ್ತಿದೆ. ಕರುವಿನ ಕಳೇಬರವನ್ನು ಬೋನ್‌ನಲ್ಲಿ ಇಟ್ಟು ಸೆರೆಗೆ ಕ್ರಮಕೈಗೊಳ್ಳಲಾಗಿದೆ.

ಭಾರೀ ಗಾಳಿಗೆ ಧರೆಗುರುಳಿದ ಮರಗಳು, ವಿದ್ಯುತ್ ಕಂಬಗಳು

ಮಡಿಕೇರಿ, ಮಾ.3– ಕರಿಕೆ ಗ್ರಾ.ಪಂ ವ್ಯಾಪ್ತಿಯ ವಿವಿಧೆಡೆ ಬೀಸಿದ ಭಾರೀ ಗಾಳಿಗೆ ಮರ ಹಾಗೂ ವಿದ್ಯುತ್ ಕಂಬಗಳು ಮುರಿದು ಬಿದ್ದಿರುವ ಘಟನೆ ನಡೆದಿದೆ.



ಗ್ರಾಪಂ ವ್ಯಾಪ್ತಿಯಲ್ಲಿ ಕಳೆದ 3 ದಿನಗಳಿಂದ ಭಾರೀ ಗಾಳಿ ಬೀಸುತ್ತಿದ್ದು, ಮರ ಹಾಗೂ ವಿದ್ಯುತ್ ಕಂಬಗಳು ಧರೆಗುರುಳಿವೆ. ಇದರಿಂದಾಗಿ ಗ್ರಾಮೀಣ ಭಾಗದ ಜನರು ಹಾಗೂ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ಮರ ಮುರಿದು ವಿದ್ಯುತ್ ಲೈನ್ ಮೇಲೆ ಬಿದ್ದ ಪರಿಣಾಮ ಹಲವಾರು ವಿದ್ಯುತ್ ಕಂಬಗಳು ಮುರಿದು ಬಿದ್ದಿದೆ. ಇದರಿಂದ ಬಾಳೆಬಳಪು ಕುಂಡತ್ತಿಕಾನ ಕಾಲೋನಿಯ 7 ಮನೆಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ತೊಂದರೆಯಾಗಲಿದ್ದು, ಸೆಸ್ಕ್ ಇಲಾಖೆ ಮರಗಳನ್ನು ತೆರವುಗೊಳಿಸಿ ಗ್ರಾಮಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸಂಕೇತ್ ಪೂವಯ್ಯ ಕೆಪಿಸಿಸಿ ವಕ್ತಾರ

ವಿರಾಜಪೇಟೆ, ಮಾ.3– ಕೊಡಗು ಜಿಲ್ಲೆಯ ಕಾಂಗ್ರೆಸ್ ಮುಖಂಡರಾದ ಮೇರಿಯಂಡ ಸಂಕೇತ್ ಪೂವಯ್ಯ ಅವರನ್ನು ಕೆಪಿಸಿಸಿ ವಕ್ತಾರರನ್ನಾಗಿ ನೇಮಕ ಮಾಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.



ಜಾತ್ಯಾತೀತ ಜನತಾದಳದ ರಾಜ್ಯ ವಕ್ತಾರರಾಗಿದ್ದ ಸಂಕೇತ್ ಪೂವಯ್ಯ ಅವರು ಇತ್ತೀಚೆಗೆ ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷವನ್ನು ಸೇರಿದ್ದರು. ಕೊಡಗು ಜಿಲ್ಲೆಯಲ್ಲಿ ಜಾತ್ಯಾತೀತ ಮತಗಳು ವಿಭಜನೆಯಾಗಿ ಅನ್ಯ ಪಕ್ಷಗಳಿಗೆ ಆಗುತ್ತಿದ್ದ ಅನುಕೂಲವನ್ನು ತಪ್ಪಿಸಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸದೃಢಗೊಳಿಸಿ ಗೆಲ್ಲಿಸುವ ಆಶಯದೊಂದಿಗೆ ಅವರು ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿದ್ದನ್ನು ಇಲ್ಲಿ ಸ್ಮರಿಸಬಹುದು.

ತಮ್ಮ ನೇಮಕಕ್ಕೆ ಕಾರಣರಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್. ಪೊನ್ನಣ್ಣ, ಕೆಪಿಸಿಸಿ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳ ಅಧ್ಯಕ್ಷ ಪ್ರಿಯಾಂಕ್ ಖರ್ಗೆ, ಕೊಡಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಸೇರಿದಂತೆ ಕೆಪಿಸಿಸಿ ಪದಾಧಿಕಾರಿಗಳು ಹಾಗೂ ಕೊಡಗು ಜಿಲ್ಲಾ ಕಾಂಗ್ರೆಸ್ ಮುಖಂಡರುಗಳಿಗೆ ಸಂಕೇತ್ ಪೂವಯ್ಯ ಅಭಿನಂದನೆ ಸಲ್ಲಿಸಿದ್ದಾರೆ.

ತಮಗೆ ಪಕ್ಷದಿಂದ ಮಹತ್ವದ ಮತ್ತು ಜವಾಬ್ದಾರಿಯುತ ಹುದ್ದೆಯನ್ನು ನೀಡಿದ್ದು, ಶೀಘ್ರದಲ್ಲೇ ಜಿಲ್ಲಾ ಕಾಂಗ್ರೆಸ್ ಮುಖಂಡರುಗಳು ಹಾಗೂ ರಾಜ್ಯ ಕಾಂಗ್ರೆಸ್ ಮುಖಂಡರುಗಳೊಂದಿಗೆ ಸಮಾಲೋಚನೆ ನಡೆಸಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಶ್ರಮಿಸುವುದಾಗಿ ಅವರು ತಿಳಿಸಿದ್ದಾರೆ.

ಸಿ.ಎಸ್.ಪುಟ್ಟರಾಜು ಪರಿಶ್ರಮದಿಂದ ಯೋಜನೆ ಕಾರ್ಯರೂಪಕ್ಕೆ

365 ದಿನವೂ ನಿಮ್ಮ ಕೆರೆಯಲ್ಲಿ ನೀರು ಸಿಗಲಿದೆ: ಸಿಎಸ್‌ಪಿ

ಮಂಡ್ಯ, ಮಾ.3– ಬರಪೀಡಿತ ಪ್ರದೇಶವಾದ ದುದ್ದ ಹೋಬಳಿ ಹಲವು ಗ್ರಾಮಗಳಲ್ಲಿ ವರ್ಷದ 365 ದಿನವೂ ಇನ್ಮುಂದೆ ನಿಮ್ಮ ಕೆರೆಯಲ್ಲಿ ನೀರು ಸಿಗಲಿದೆ ಎಂದು ಕ್ಷೇತ್ರದ ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ತಾಲೂಕಿನ ದುದ್ದ ಹೋಬಳಿಯ ಹುಲಿಕೆರೆ ಗ್ರಾಮದ ಮಹದೇಶ್ವರಸ್ವಾಮಿ ದೇಗುಲದ ಆವರಣದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆ ವತಿಯಿಂದ ಆಯೋಜಿಸಿದ್ದ ದುದ್ದ ಹೋಬಳಿಯ 54 ಕೆರೆ/ಕಟ್ಟೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಇಲ್ಲಿನ ಹಲವು ಗ್ರಾಮಗಳ ಜನರ ಬಹುದಿನದ ಕನಸಾಗಿದ್ದ ಯೋಜನೆಯನ್ನು 185 ಕೋಟಿ ರೂ. ವೆಚ್ಚದಲ್ಲಿ ಈಡೇರಿಸಲಾಗಿದೆ. ಈ ಯೋಜನೆ ನನ್ನದು ಎಂದು ಯಾರು ಎಷ್ಟೇ ಬಾರಿ ಹೇಳಿದರೂ ಈ ಕೊಡುಗೆ ಕೊಟ್ಟವರ್ಯಾರು ಎಂಬುದು ಇಲ್ಲಿನ ಜನರಿಗೆ ಹಾಗೂ ದೇವರಿಗೆ ಗೊತ್ತು ಎಂದರು.

ಇಲ್ಲಿನ ಜನ ಭಾರೀ ಅಂತರದಿಂದ ನನ್ನನ್ನು ಗೆಲ್ಲಿಸಿದರು. ಬಳಿಕ ಸರ್ಕಾರ ರಚನೆಯಾಗಿ ನಾನು ಸಣ್ಣ ನೀರಾವರಿ ಸಚಿವನಾಗುವ ಭಾಗ್ಯವೂ ದೊರೆಯಿತು. ಆದರೆ ನಮ್ಮ ಸರ್ಕಾರ ಹೋದ ಬಳಿಕವೂ ಯೋಜನೆಗೆ ಯಾವುದೇ ಅಡೆ ತಡೆ ಇಲ್ಲದೆ ಕೆಲಸ ಸುಸೂತ್ರವಾಗಿ ನೆರವೇರಿದೆ ಎಂದರು. ಈಗಾಗಲೇ 54 ಕೆರೆಗಳಿಗೆ ನೀರು ಭರ್ತಿಯಾಗಿದೆ. ಉಳಿದ ಇನ್ನು ಕೆಲ ಕೆರೆಗಳನ್ನು ಶೀಘ್ರ ಭರ್ತಿಯಾಗುವಂತೆ ಮಾಡಿ ಅವರಿಗೂ ಶಾಶ್ವತವಾಗಿ ಕುಡಿಯುವ ನೀರು ಸಿಗುವಂತೆ ಮಾಡುವುದಾಗಿ ಹೇಳಿದ ಅವರು, ಕುಮಾರಸ್ವಾಮಿ ಸರ್ಕಾರದಲ್ಲಿ ಯೋಜನೆ ಕಾರ್ಯಗತಕ್ಕೆ ಬಂದು ಬಳಿಕ ಅವರ ಮೊದಲ ಬಜೆಟ್‌ನಲ್ಲೇ ಹಣ ಮಂಜೂರಾಗಿ ನಂತರದ ಸರ್ಕಾರದಲ್ಲಿ ಹಂತ ಹಂತವಾಗಿ ಹಣ ಬಿಡುಗಡೆಯಾಗಿ ಇದೀಗ ಯೋಜನೆ ಸಂಪೂರ್ಣಗೊಂಡಿದೆ ಎಂದು ತಿಳಿಸಿದರು. ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ ಮೃತ್ಯುಂಜಯಸ್ವಾಮಿ ಮಾತನಾಡಿದರು.

ಬಹುನಿರೀಕ್ಷಿತ ಯೋಜನೆಗೆ ಚಾಲನೆ ನೀಡಿ ಸಚಿವ ಜೆ.ಸಿ.ಮಾಧುಸ್ವಾಮಿ ಬಣ್ಣನೆ



ಮಂಡ್ಯ, ಮಾ.3(ಮೋಹನ್‌ರಾಜ್/ಸಿ.ಎ.ಲೋಕೇಶ್)– ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಎಸ್.ಪುಟ್ಟರಾಜು ಪರಿಶ್ರಮದಿಂದ ಈ ಭಾಗದ 54 ಕೆರೆಗಳಿಗೆ ನೀರು ತುಂಬಿಸುವ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬಂದಿದೆಯೇ ಹೊರತು ಈ ಯೋಜನೆಗೆ ಪುಟ್ಟರಾಜು ಹೊರತುಪಡಿಸಿ ಕ್ಷೇತ್ರದ ಇನ್ಯಾರ ಕೊಡುಗೆಯೂ ಇಲ್ಲ ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ತಾಲೂಕಿನ ದುದ್ದ ಹೋಬಳಿ ಹುಲಿಕೆರೆ ಗ್ರಾಮದ ಮಹದೇಶ್ವರಸ್ವಾಮಿ ದೇಗುಲದ ಆವರಣದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆ ವತಿಯಿಂದ ಆಯೋಜಿಸಿದ್ದ ಶ್ರೀರಂಗಪಟ್ಟಣ ತಾಲೂಕಿನ ಶ್ರೀನಿವಾಸ ಅಗ್ರಹಾರ ಗ್ರಾಮದ ಬಳಿಯ ಲೋಕಪಾವನಿ ನದಿಯಿಂದ ನೀರನ್ನು ಎತ್ತಿ ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಂಡ್ಯ ತಾಲೂಕಿನ ದುದ್ದ ಹೋಬಳಿಯ 54 ಕೆರೆ/ಕಟ್ಟೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಯೋಜನೆಗೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು.

ರಾಜಕಾರಣವನ್ನು ಮೋಜಿಗಾಗಿ ಮಾಡುವುದಲ್ಲ. ರಾಜಕಾರಣ ಏಕೆ ಮಾಡಬೇಕು. ಜನಪ್ರತಿನಿಧಿಯಾದ ನನ್ನಿಂದ ಜನ ಏನನ್ನು ನಿರೀಕ್ಷೆ ಮಾಡುತ್ತಾರೆ. ಜನರಿಂದ ಆಯ್ಕೆಯಾದ ನಾನು ಏನು ಮಾಡಬಹುದೆಂಬ ಅರಿವು ಒಬ್ಬ ಜನಪ್ರತಿನಿಧಿಯಾದವನಿಗೆ ಇರಬೇಕು. ಮಂತ್ರಿಯಾಗುವುದು ಮುಖ್ಯವಲ್ಲ. ಮಂತ್ರಿಯಾಗಿ ಏನು ಮಾಡಿದೆ ಎಂಬುದಷ್ಟೇ ಮುಖ್ಯ. ಒಬ್ಬ ಜನಪ್ರತಿನಿಧಿಯಾಗಿ ಹಾಗೂ ಒಬ್ಬ ಮಂತ್ರಿಯಾಗಿ ತಾನು ಆಯ್ಕೆಯಾದ ಕ್ಷೇತ್ರಕ್ಕೆ ಏನೆಲ್ಲಾ ಮಾಡಬಹುದು ಅವೆಲ್ಲವನ್ನು ಜನರ ನಿರೀಕ್ಷೆಗೂ ಮೀರಿ ಪುಟ್ಟರಾಜು ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಪ್ರಸ್ತುತ ಸಣ್ಣ ನೀರಾವರಿ ಮಂತ್ರಿಯಾಗಿರುವ ನಾನು ಮಂಡ್ಯ ಜಿಲ್ಲೆ ಒಂದು ಅಚ್ಚುಕಟ್ಟಾದ ನೀರಾವರಿ ಪ್ರದೇಶ ಎಂದು ಭಾವಿಸಿದ್ದೆ. ಆದರೆ ನನ್ನ ಹಿಂದೆ ಸಣ್ಣ ನೀರಾವರಿ ಸಚಿವರಾಗಿದ್ದ ಪುಟ್ಟರಾಜು ತಮ್ಮ ಕ್ಷೇತ್ರಕ್ಕೆ ಕರೆತಂದು ತೋರಿಸಿದಾಗ ಇಲ್ಲಿನ ಬರ ಪೀಡಿತ ಪ್ರದೇಶಗಳ ಬಗ್ಗೆ ನನಗೆ ಅರಿವಾಯಿತು. ಈ ಪ್ರದೇಶಗಳನ್ನು ನೀರಾವರಿ ಪ್ರದೇಶವನ್ನಾಗಿಸಬೇಕೆಂಬುದು ಪುಟ್ಟರಾಜು ಅವರ ಗುರಿಯಾಗಿತ್ತು. ಅವರ ಪ್ರಯತ್ನಕ್ಕೆ ನಾನು ಸಹಕರಿಸಿದ ಪರಿಣಾಮ ಇಂದು 54 ಕೆರೆಗಳಿಗೆ ನೀರು ಸಿಕ್ಕಿದೆ ಎಂದರು.

ನಾವು ಚುನಾವಣೆ ಸಮಯದಲ್ಲಷ್ಟೇ ರಾಜಕಾರಣ ಮಾಡಬೇಕು. ಗೆದ್ದ ನಂತರ ನಮ್ಮ ಕ್ಷೇತ್ರದ ಅಭಿವೃದ್ಧಿಗೆ ಪಕ್ಷಬೇಧ ಮರೆತು ಶ್ರಮಿಸಬೇಕು. ಅದೇ ರೀತಿ ಪುಟ್ಟರಾಜು ಸಹ ಸಣ್ಣ ನೀರಾವರಿ ಮಂತ್ರಿಯಾದ ಬಳಿಕ ಹಿಂದಿನ ಸರ್ಕಾರದಲ್ಲಿ ಅವರ ನೇತೃತ್ವದಲ್ಲಿ ಚಾಲನೆ ಕೊಡಿಸಿದ್ದ ನೀರು ತುಂಬಿಸುವ ಕೆಲಸಕ್ಕೆ ನನ್ನ ಮುಖಾಂತರ ಯೋಜನೆ ಮುಂದುವರೆಸಿಕೊಂಡು ಹೋದರು. ಇದೀಗ ಯೋಜನೆ ಪೂರ್ಣಗೊಂಡಿರುವುದು ನನಗೂ ಸಹ ಸಂತಸ ತಂದಿದೆ ಎಂದು ಹೇಳಿದರು.

ಈ ಯೋಜನೆ ತಮ್ಮ ಕಾಲದಲ್ಲಿ ಆಗಿದೆ ಎಂದು ಯಾರೋ ನೂರು ಆರೋಪ ಮಾಡಬಹುದು. ಆದರೆ ಸಣ್ಣ ನೀರಾವರಿ ಸಚಿವನಾಗಿರುವ ನನಗೆ ಈ ಯೋಜನೆ ಯಾವಾಗ ಆರಂಭವಾಯಿತು. ಯಾವಾಗ ಅನುಷ್ಠಾನವಾಯಿತು ಎಂಬುದರ ಬಗ್ಗೆ ಇಂಚಿಂಚು ಮಾಹಿತಿ ಇದೆ. ಪುಟ್ಟರಾಜು ಸಣ್ಣ ನೀರಾವರಿ ಮಂತ್ರಿಯಾಗಿದ್ದಾಗ ಯೋಜನೆ ಕಾರ್ಯರೂಪಕ್ಕೆ ಬಂದು ಆರಂಭಿಕ ಹಣ ಮಂಜೂರಾಯಿತು. ಅವರ ನೇತೃತ್ವದಲ್ಲಿ ಮತ್ತು ನಾನು ಈ ಇಲಾಖೆ ಮಂತ್ರಿಯಾದ ಮೇಲೆ ಹಂತ ಹಂತವಾಗಿ ಹಣ ಬಿಡುಗಡೆಯಾಗಿ ಯೋಜನೆ ಪೂರ್ಣಗೊಂಡಿದೆ ಎಂದು ವಿವರಿಸಿದರು.

ನಾನು 2–3 ಬಾರಿ ಇಲ್ಲಿಗೆ ಬಂದು ಯೋಜನೆ ವೀಕ್ಷಣೆ ಮಾಡಿಕೊಂಡು ಹೋಗಿದ್ದೆ. ಈ ಯೋಜನೆಯನ್ನು ಮುಗಿಸಲೇಬೇಕೆಂಬ ಪುಟ್ಟರಾಜು ಅವರ ಹಠ, ಯೋಜನೆ ಸಂಪೂರ್ಣ ಮುಗಿಯುವ ಹಾಗೆ ಮಾಡಿದೆ. ಈ ಭಾಗಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ನೀಡಿದ ಕೀರ್ತಿ ಸಿ.ಎಸ್.ಪುಟ್ಟರಾಜು ಅವರಿಗೆ ಸಲ್ಲಬೇಕೆಂದರು.

ಶಾಸಕನಾಗಿ ಸಿ.ಎಸ್.ಪುಟ್ಟರಾಜು ಅವರ ಕ್ಷೇತ್ರಕ್ಕೆ ನೀರಾವರಿ ಯೋಜನೆ ತಂದಂತೆ. ಸಂಸದರಾಗಿದ್ದ ಅವಧಿಯಲ್ಲೂ ಅನೇಕ ನೀರಾವರಿ ಯೋಜನೆಯನ್ನು ಈ ಜಿಲ್ಲೆಗೆ ತಂದಿದ್ದಾರೆ. ನಾನು ಅನಾರೋಗ್ಯದ ನಡುವೆಯೂ ಕಾರ್ಯಕ್ರಮಕ್ಕೆ ಬಂದಿದ್ದು, ಅದು ಸಿ.ಎಸ್.ಪುಟ್ಟರಾಜು ಅವರ ಮೇಲಿನ ವಿಶ್ವಾಸಕ್ಕಾಗಿ ಎಂದ ಅವರು, ನಮ್ಮ ಸರ್ಕಾರದ ಅವಧಿ ಮುಗಿಯುವ ವೇಳೆಗೆ ಕ್ಷೇತ್ರಕ್ಕೆ ಮತ್ತಷ್ಟು ನೀರಾವರಿ ಯೋಜನೆಗಳನ್ನು ಕೊಡುವುದಾಗಿ ಘೋಷಿಸಿದರು.

ಈ ಭಾಗದ ರೈತರು ಈ ನೀರಾವರಿ ಯೋಜನೆಗಳನ್ನು ಬಳಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕೆಂದ ಅವರು, ಈ ಭಾಗಕ್ಕೆ ಜನಕ್ಕೆ ನಿರೀಕ್ಷೆ ಮಾಡಲಾಗದಷ್ಟು ಕೊಡುಗೆಗಳನ್ನು ಕೊಟ್ಟಿರುವವರನ್ನು ಇಲ್ಲಿನ ಜನ ಸ್ಮರಿಸಿಕೊಳ್ಳಬೇಕೆನ್ನುವ ಮೂಲಕ ಸಿ.ಎಸ್.ಪುಟ್ಟರಾಜು ಅವರಿಗೆ ಆಭಾರಿಗಳಾಗಿರಬೇಕೆಂದು ಮನವಿ ಮಾಡಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಪಾಂಡವಪುರ ತಾಲೂಕಿನ ಕಾಳೇನಹಳ್ಳಿ ಗ್ರಾಮದಲ್ಲಿ ನೀರಿನ ಯಂತ್ರಾಗಾರಕ್ಕೆ ಚಾಲನೆ ನೀಡಿದ ಸಚಿವರು ಬಳಿಕ ಹುಲಿಕೆರೆ ಗ್ರಾಮದ ಕೆರೆಗೆ ಬಾಗಿನ ಅರ್ಪಿಸಿದರು.

ವೇದಿಕೆಯಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು, ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಸಣ್ಣ ನೀರಾವರಿ ಇಲಾಖೆ ಕಾರ್ಯದರ್ಶಿ ಮೃತ್ಯುಂಜಯ ಸ್ವಾಮಿ, ಇಲಾಖೆ ಮುಖ್ಯ ಇಂಜಿನಿಯರ್ ರಾಘವನ್, ಇಲಾಖೆ ಸೂಪರಿಡೆಂಟ್ ಗೋಕುಲ್‌ರಾವ್, ಸುಂಕಾತೊಣ್ಣೂರು ಗ್ರಾಪಂ ಅಧ್ಯಕ್ಷ ಮಹೇಶ್, ಹುಳ್ಳೇನಹಳ್ಳಿ ಗ್ರಾಪಂ ಅಧ್ಯಕ್ಷೆ ಭಾರತಿ, ಜಿಪಂ ಮಾಜಿ ಸದಸ್ಯ ಮಾದೇಗೌಡ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಯೋಜನೆಯಿಂದ ಭರ್ತಿ ಆಗುವ ಕೆರೆಗಳ ವಿವರ

ನೀರು ತುಂಬಿಸುತ್ತಿರುವ ಮೊದಲ ಹಂತದ ಕೆರೆಗಳ ವಿವರ: ಕಾಳೇನಹಳ್ಳಿ ಕಟ್ಟೆ, ಪುಟ್ಟಣ್ಣನ ಕಟ್ಟೆ ಬುಕ್ಕಿಕಟ್ಟೆ ಕಾಳಯ್ಯನಕೊಳದ ಕೆರೆ, ಹುಲಿಕೆರೆ ಕೊಪ್ಪಲು ಹೊಸಕೇರಿ, ಪಟ್ಟಲದಮ್ಮ ದೇವಸ್ಥಾನ ಕೆರೆ, ಬೋರಪ್ಪನ ಕೆರೆ, ಹುಚ್ಚೇಗೌಡನ ಕೊಪ್ಪಲು ಕೆರೆ, ಮೋಟಪ್ಪನಕಟ್ಟೆ ಮಹದೇಶ್ವರ ದೇವಸ್ಥಾನ, ಬಾಯಿಬೀಗದ ಕಟ್ಟೆ, ಜೈಪುರ ಕೆರೆ, ಹುಲಿಕೆರೆಕೊಪ್ಪಲು ಕೆರೆ, ಜಿ.ಮಲ್ಲಿಗೆರೆ ಕೆರೆ, ಪುಟ್ಟಿಕೊಪ್ಪಲು ಕೆರೆ, ಮಾರಚಾಕನಹಳ್ಳಿ ಕೆರೆ, ಮಾರಚಾಕನಹಳ್ಳಿ ಉಪಹಳ್ಳ, ಮಾದೇಗೌಡನ ಕೊಪ್ಪಲು ಕೆರೆ, ಮಾದೇಗೌಡನ ಕೊಪ್ಪಲು ಚನ್ನಪ್ಪ ಕಟ್ಟೆ, ಮಾದೇಗೌಡನ ಕೊಪ್ಪಲು ಹೊಸಕೆರೆ.

ನೀರು ತುಂಬಿಸುತ್ತಿರುವ ಎರಡನೇ ಹಂತದ ಕೆರೆಗಳ ವಿವರ: ರಾಚಯ್ಯ ಕಟ್ಟೆ, ಅಗಸನಕಟ್ಟೆ, ಕೊಂತೇಗೌಡನ ಕೊಪ್ಪಲು ಕೆರೆ, ಛತ್ರನಹಳ್ಳಿ ಕೆರೆ, ಜವನಹಳ್ಳಿ ದೊಡ್ಡಕೆರೆ, ಬಂಡಪ್ಪನಕಟ್ಟೆ, ದೊಡ್ಡದನಗಳ ಕೆರೆ, ಬೇವುಕಲ್ಲು ಕೆರೆ, ಬೇವುಕಲ್ಲು ಹಳೆಯ ಕೆರೆ, ದುದ್ದ ಕೆರೆ, ಕನ್ನಟ್ಟಿ ಹಳೆಯ ಕೆರೆ, ಬಂಕನಹಳ್ಳಿ ಕೆರೆ, ಕನ್ನಟ್ಟಿ ಹೊಸ ಕೆರೆ, ಜವನಹಳ್ಳಿ ಕೆರೆ, ತಿಪ್ಪಾಪುರ ಕೆರೆ, ಚಿಕ್ಕಗಂಗವಾಡಿ ಕೆರೆ, ಚಾಮಯ್ಯನ ಕೆರೆ, ಬೆಟ್ಟಹಳ್ಳಿ ಹಳೇಕೆರೆ, ಕರಡೀಕೆರೆ, ಹರಿಸೇವೆಕಟ್ಟೆ, ಗುಳ್ಳೇಚಿಕ್ಕನಕೆರೆ, ಜವರೇಗೌಡನಕೊಪ್ಪಲು ಕೆರೆ, ಮುದಗಂದೂರು ಹಿರೇಕೆರೆ, ಚೋಕನಹಳ್ಳಿ ಕೆರೆ, ಕಣಿವೆಕಟ್ಟೆ, ಲಿಂಗಣ್ಣಯ್ಯಕೆರೆ, ಕೆಂಪನಕಟ್ಟೆ ಧನುಸ್ಸಕಟ್ಟೆ ಹುನುಗನಹಳ್ಳಿ ಕೆರೆ, ಬಣ್ಣರಪ್ಪನಕಟ್ಟೆ, ಹೊಡಾಘಟ್ಟ ಕೆರೆ, ಮುತ್ತೇಗೆರೆ ದಾಸನಕೆರೆ, ಮುದ್ದೇಗೌಡನಕೊಪ್ಪಲು ಕೆರೆ

ನಾಳೆ ಸಂತೇಮರಹಳ್ಳಿಯಲ್ಲಿ ಜೆಡಿಎಸ್ ಕಾರ್ಯಕರ್ತರ ಬೃಹತ್ ಸಮಾವೇಶ

ಚಾಮರಾಜನಗರ, ಮಾ.3– ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಜಾತ್ಯಾತೀತ ಜನತಾದಳ ಬಲವರ್ಧನೆ ಹಾಗೂ ತಳಮಟ್ಟದಿಂದ ಕಾರ್ಯಕರ್ತರನ್ನು ಉತ್ತೇಜಿಸಿ, ಪಕ್ಷದ ಸಂಘಟನೆ ಮಾಡುವ ಉದ್ದೇಶದಿಂದ ಕ್ಷೇತ್ರದ ಸಂತೇಮರಹಳ್ಳಿ ಹೋಬಳಿ ಕೇಂದ್ರದಲ್ಲಿ ಮಾ.5 ರಂದು ಭಾನುವಾರ ಕಾರ್ಯಕರ್ತರ ಬೃಹತ್ ಸಮಾವೇಶವನ್ನು ಅಯೋಜಿಸಲಾಗಿದೆ ಎಂದು ಕ್ಷೇತ್ರದ ಪಕ್ಷದ ಸಂಭಾವ್ಯ ಅಭ್ಯರ್ಥಿ ವಾಲೆ ಮಹಾದೇವ ತಿಳಿಸಿದರು.

ಸಂತೇಮರಹಳ್ಳಿಯ ಕುದೇರು ರಸ್ತೆಯಲ್ಲಿ ಅಂದು ಬೆಳಗ್ಗೆ 10.30ಕ್ಕೆ ಸಮಾವೇಶ ಉದ್ಘಾಟನೆಯಾಗಲಿದ್ದು, ಸಮಾವೇಶದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಅಶ್ವಿನ್‌ಕುಮಾರ್, ಮಂಜೇಗೌಡ, ಕೆ.ಅಂದಾನಿ, ಜಿಲ್ಲಾಧ್ಯಕ್ಷ ಮಂಜುನಾಥ್ ಸೇರಿದಂತೆ ಇತರ ನಾಯಕರು ಭಾಗವಹಿಸಲಿದ್ದಾರೆ. ಈ ಸಮಾವೇಶದಲ್ಲಿ ಸುಮಾರು 5 ರಿಂದ 10 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಇದೆ. ಈ ಸಮಾವೇಶದಲ್ಲಿ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ನಾನು ಕೊಳ್ಳೇಗಾಲ ಕ್ಷೇತ್ರದಿಂದ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಪಕ್ಷದ ವರಿಷ್ಠರು ನನಗೆ ಟಿಕೆಟ್ ಕೊಡುವ ಭರವಸೆ ನೀಡಿದ್ದಾರೆ. 4–5 ದಿನಗಳೊಳಗೆ ಅಧಿಕೃತವಾಗಿ ಟಿಕೆಟ್ ಘೋಷಣೆ ಆಗಲಿದೆ. ಈಗಾಗಲೇ ಪಕ್ಷವನ್ನು ಸಂಘಟಿಸುವ ನಿಟ್ಟಿನಲ್ಲಿ ಕೊಳ್ಳೇಗಾಲದಲ್ಲಿ ಪಕ್ಷದ ಕಚೇರಿಯನ್ನು ತೆರೆದು, ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡು ಪ್ರಚಾರದಲ್ಲಿ ತೊಡಗಿದ್ದೇನೆ. ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಕೊಳ್ಳೇಗಾಲದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಮಾಡಿದ ಮೇಲೆ ಜನರ ಆಶೀರ್ವಾದದಿಂದ ಇದೇ ಮೊದಲ ಬಾರಿಗೆ ರಾಜಕೀಯಕ್ಕೆ ಬಂದಿದ್ದೇನೆ ಎಂದರು. ಜೆಡಿಎಸ್ ರಾಜ್ಯ ಕಾರ್ಯದರ್ಶಿ ಗಳಾದ ಬಾಗಳಿರೇವಣ್ಣ, ಕಾರ್ಯದರ್ಶಿ ರಾಜು ಹೊಂಗನೂರು, ಅನಿಲ್, ಆನಂದ್ ಈ ವೇಳೆ ಹಾಜರಿದ್ದರು.

ಕೊಳ್ಳೇಗಾಲದಿಂದ ಟಿಕೆಟ್ ಖಚಿತಪಡಿಸಿಕೊಂಡು

ಬಿ. ಪುಟ್ಟಸ್ವಾಮಿ ಜೆಡಿಎಸ್ ಸೇರ್ಪಡೆ



ಕೊಳ್ಳೇಗಾಲ/ಚಾಮರಾಜನಗರ, ಫೆ.3– ಸರ್ಕಲ್ ಇನ್ಸ್‌ಪೆಕ್ಟರ್ ಹುದ್ದೆಗೆ ರಾಜೀನಾಮೆ ನೀಡಿ ರಾಜಕೀಯ ಪ್ರವೇಶಿಸಿರುವ ಬಿ. ಪುಟ್ಟಸ್ವಾಮಿ ಬೆಂಗಳೂರಿನಲ್ಲಿ ಶುಕ್ರವಾರ ಜಾತ್ಯಾತೀತ ಜನತಾದಳ (ಜೆಡಿಎಸ್) ಸೇರ್ಪಡೆಯಾಗಿದ್ದಾರೆ.

ಬೆಂಗಳೂರಿನ ಜೆಡಿಎಸ್‌ನ ಪ್ರಧಾನ ಕಾರ್ಯಾಲಯ ಜೆ.ಪಿ. ಭವನದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ. ರೇವಣ್ಣ ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರ ಸಮ್ಮುಖದಲ್ಲಿ ಬಿ. ಪುಟ್ಟಸ್ವಾಮಿ ಅವರು ಜೆಡಿಎಸ್ ಸೇರ್ಪಡೆಯಾದರು. ಇವರನ್ನು ಪಕ್ಷದ ವರಿಷ್ಠರು ಪಕ್ಷದ ಶಲ್ಯ ಹಾಕಿ ಪಕ್ಷಕ್ಕೆ ಬರ ಮಾಡಿಕೊಂಡರು.

ಬಿ. ಪುಟ್ಟಸ್ವಾಮಿ ಅವರು ಪೊಲೀಸ್ ಅಧಿಕಾರಿ ಆಗಿದ್ದರು. ಜನಸೇವೆ ಮಾಡಬೇಕು ಎಂಬ ಹಂಬಲದಿಂದ ಪೊಲೀಸ್ ಹುದ್ದೆಗೆ ರಾಜೀನಾಮೆ ನೀಡಿ ರಾಜಕೀಯ ಪ್ರವೇಶಿಸಿದ್ದರು. ಕೊಳ್ಳೇಗಾಲ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದ ಅವರು ಬಿಜೆಪಿಯಿಂದ ಸ್ಪರ್ಧಿಸಬೇಕು ಎಂಬ ಆಸೆ ಹೊತ್ತಿದ್ದರು. ಆದರೆ, ಆ ಪಕ್ಷದಿಂದ ಹಾಲಿ ಶಾಸಕ ಎನ್. ಮಹೇಶ್ ಅವರಿಗೆ ಟಿಕೆಟ್ ಖಚಿತವಾಗುತ್ತಿದ್ದಂತೆಯೇ ಬಿಜೆಪಿ ಸೇರುವುದನ್ನು ಕೈ ಬಿಟ್ಟರು.

ಯಾವುದೇ ಪಕ್ಷದೊಂದಿಗೆ ಗುರುತಿಸಿಕೊಳ್ಳದ ಪುಟ್ಟಸ್ವಾಮಿ ಇತ್ತೀಚೆಗಷ್ಟೇ ಸಂತೇಮರಹಳ್ಳಿಯಲ್ಲಿ ಬೆಂಬಲಿಗರ ಬೃಹತ್ ಸಮಾವೇಶ ನಡೆಸಿ ಬೆಂಬಲಿಗರ ಅಭಿಪ್ರಾಯ ಸಂಗ್ರಹಿಸಿದ್ದರು. ಈ ವೇಳೆ ಪುಟ್ಟಸ್ವಾಮಿ ಯಾವುದಾದರೂ ಪಕ್ಷದಿಂದ ಕೊಳ್ಳೇಗಾಲ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಘೋಷಿಸಿದ್ದರು. ಈಗ ಅವರು ಜೆಡಿಎಸ್ ಸೇರ್ಪಡೆ ಆಗಿರುವುದರಿಂದ ಟಿಕೆಟ್‌ನ್ನು ಖಚಿತ ಪಡಿಸಿಕೊಂಡೇ ಅವರು ಆ ಪಕ್ಷ ಸೇರಿದ್ದಾರೆ ಎನ್ನಲಾಗಿದೆ ಇದಕ್ಕೂ ಮೊದಲು ಕೊಳ್ಳೇಗಾಲ ಕ್ಷೇತ್ರದವರೇ ಆದ ವಾಲೆ ಮಹದೇವು ಅವರು ಜೆಡಿಎಸ್ ಅಭ್ಯರ್ಥಿ ಎಂದು ಹೇಳಲಾಗುತ್ತಿತ್ತು. ಆದರೆ, ಪುಟ್ಟಸ್ವಾಮಿ ಈಗ ಆ ಪಕ್ಷ ಸೇರಿರುವುದರಿಂದ ಟಿಕೆಟ್ ಯಾರಿಗೆ ದೊರೆಯಲಿದೆ ಎಂಬ ಪ್ರಶ್ನೆ ಆ ಪಕ್ಷದ ಮುಖಂಡರು, ಕಾರ್ಯಕರ್ತರು ಬೆಂಬಲಿಗರಲ್ಲಿ ಕುತೂಹಲ ಮೂಡಿಸಿದೆ.

ಜಾಗೃತಿ ಜಾಥಾ

ಚಾಮರಾಜನಗರ, ಮಾ.3– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಮೈಸೂರು ರವರ ಸಹಯೋಗದಲ್ಲಿ ಯಳಂದೂರು ತಾಲೂಕಿನ ಉಪ್ಪಿನಮೋಳೆ ಗ್ರಾಮದಲ್ಲಿ ಪೋಕ್ಸೋ ಕಾಯ್ದೆ, ಮಕ್ಕಳ ರಕ್ಷಣೆ, ಹಕ್ಕುಗಳು ಹಾಗೂ ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಗುರುವಾರ ಗ್ರಾಮದ ಶಾಲಾ ಮಕ್ಕಳು ಹಾಗೂ ಶಾಲಾ ಶಿಕ್ಷಕರ ವೃಂದದೊಂದಿಗೆ ಜಾಥಾ ಹಮ್ಮಿಕೊಳ್ಳಲಾಗಿತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಶ್ರೀಧರ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕಾರ್ಯಕರ್ತೆಯರು ಸಹಭಾಗಿತ್ವದಲ್ಲಿ ಉಪ್ಪಿನಮೋಳೆ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳೊಂದಿಗೆ ಗ್ರಾಮದ ಪ್ರಮುಖ ಬೀದಿಯಲ್ಲೂ ಜಾಥಾದಲ್ಲಿ ಪಾಲ್ಗೊಂಡಿದ್ದರು.



ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಕೆಆರ್‌ಐಡಿಎಲ್ ಅಧ್ಯಕ್ಷ ಎಂ. ರುದ್ರೇಶ್ ಅವರು ಭೇಟಿ ಮಾಡಿ ಹೂಗುಚ್ಛ ನೀಡಿ, ಶುಭಾಶಯ ಕೋರಿದರು.

ಉಡಿಗಾಲದಲ್ಲಿ ಬಾಬುಜಗಜೀವನ್‌ರಾಂ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

ಚಾಮರಾಜನಗರ ಮಾ.3– ತಾಲೂಕಿನ ಉಡಿಗಾಲ ಗ್ರಾಮದಲ್ಲಿ ಬಾಬು ಜಗಜೀವನ್‌ರಾಂ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿ ಪೂಜೆ ನೆರವೇರಿಸಿದರು.

ಇದೇ ವೇಳೆ ಮಾತನಾಡಿ, ಗ್ರಾಮದಲ್ಲಿ ಬಾಬು ಜಗಜೀವನ್‌ರಾಂ ಸಮುದಾಯ ಭವನವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾಗಿರುವ 12.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ನಿರ್ಮಿಸಿದ ಮೇಲೆ ಅದನ್ನು ಸದಾ ಚಟುವಟಿಕೆಗಳ ತಾಣವಾಗಿ ಮಾಡುವ ಜವಾಬ್ದಾರಿ ಸಮುದಾಯದವರ ಮೇಲಿದೆ. ಪ್ರತಿಯೊಂದು ಗ್ರಾಮಗಳಲ್ಲಿಯೂ ಸಮುದಾಯ ಭವನದ ಅಗತ್ಯವಿದ್ದು, ಇದರ ಸಮರ್ಪಕ ನಿರ್ವಹಣೆಗೆ ಆದ್ಯತೆ ನೀಡಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ಮಾಜಿ ಮುಖ್ಯಮಂತ್ರಿ, ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಟಿಕೆಟ್ ಕೊಡಿಸಿದರು. ಕಾಂಗ್ರೆಸ್ ನಾಯಕರು ಚುನಾವಣೆಯಲ್ಲಿ ತಮ್ಮ ಗೆಲುವಿಗೆ ಶ್ರಮಿಸಿದರು. ಅವರ ಪ್ರಯತ್ನ ನನ್ನ ಗೆಲುವಿಗೆ ಕಾರಣವಾಯಿತು. ಸಮುದಾಯದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಸಮಾಜದ ಉತ್ತಮ ಪ್ರಜೆಯಾಗಿ ರೂಪಿಸಬೇಕು ಎಂದರು.



ಗ್ರಾಪಂ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಉಪಾಧ್ಯಕ್ಷೆ ಪುಟ್ಟಮ್ಮ, ಸದಸ್ಯರಾದ ಮಹದೇವಮ್ಮ, ಮಂಗಳ, ಮಲ್ಲೇಶ್, ಮಾದಪ್ಪ, ಲೋಕೇಶ್, ಮುಖಂಡರಾದ ಮಹೇಶ್‌ಕುದರ್, ಉಡಿಗಾಲ ನಂಜಪ್ಪ, ಮಹದೇವು, ಡಾ.ಬಾಬುಜಗಜೀವನ್‌ರಾಂ ಯುವ ಜಾಗೃತಿ ವೇದಿಕೆ ಅಧ್ಯಕ್ಷ ರಾಮಸಮುದ್ರ ಶಿವಮೂರ್ತಿ, ಶಿವಪ್ರಕಾಶ್, ಶಂಭಪ್ಪ, ಎಸ್. ಗುರುಸ್ವಾಮಿ, ಶೇಖರಪ್ಪ, ಮಲ್ಲಿಕಾರ್ಜುನ್, ಮಹದೇವು, ಪಿಡಿಓ ಶೋಭಾ, ಗ್ರಾಮಸ್ಥರು ಹಾಜರಿದ್ದರು.

ಜನಪರ, ಮಹಿಳಾಪರ ಆಡಳಿತಕ್ಕೆ ಕಾಂಗ್ರೆಸ್ ಬೆಂಬಲಿಸಿ

● ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮನವಿ
● ಪಕ್ಷದ ಭರವಸೆ ಯೋಜನೆಗಳ ಗ್ಯಾರಂಟಿ ಕಾರ್ಡ್‌ಗಳ ವಿತರಣೆ



ಮೈಸೂರು, ಮಾ.3(ಪಿಎಂ)– ಐದು ವರ್ಷಗಳ ಕಾಲ ಸುಭದ್ರ ಆಡಳಿತ ನೀಡಿದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮಹಿಳಾ ಸಬಲೀಕರಣಕ್ಕಾಗಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿತು. ಅಂತೆಯೇ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಿ ಜನಪರ–ಮಹಿಳಾಪರ ಆಡಳಿತ ನೀಡಲು ಅವಕಾಶ ಕಲ್ಪಿಸಬೇಕೆಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮನವಿ ಮಾಡಿದರು.

ಮೈಸೂರಿನ ಕೆಆರ್ ಕ್ಷೇತ್ರದ ಕುವೆಂಪುನಗರದ ಎಂ.ಬ್ಲಾಕ್, ಹುಡ್ಕೊ ಬಡಾವಣೆಯಲ್ಲಿ ಶುಕ್ರವಾರ ಪಕ್ಷದ ಭರವಸೆ ಯೋಜನೆಗಳಾದ ಗೃಹಲಕ್ಷ್ಮೀ, ಗೃಹಜ್ಯೋತಿ ಮತ್ತು ಅನ್ನಭಾಗ್ಯ ಯೋಜನೆಗಳ ಗ್ಯಾರಂಟಿ ಕಾರ್ಡ್‌ಗಳನ್ನು ಬಡಾವಣೆಗಳ ಮಹಿಳೆಯರಿಗೆ ವಿತರಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಸ್ಥಾಪನೆಗೊಂಡ ಕಾಲದಿಂದಲೂ ಮಹಿಳಾ ಸಮುದಾಯದ ಸಬಲೀಕರಣಕ್ಕೆ ಹಲವು ಯೋಜನೆಗಳನ್ನು ನೀಡಿದೆ. ರಾಜಕೀಯ ಕ್ಷೇತ್ರ ಮಾತ್ರವಲ್ಲದೆ, ಸರ್ಕಾರಿ ಹುದ್ದೆಗಳಲ್ಲಿಯೂ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನದ ಆಶಯಗಳಿಗೆ ಪೂರಕವಾಗಿ ಕಾಂಗ್ರೆಸ್ ನಡೆದುಕೊಂಡಿದೆ ಎಂದು ಹೇಳಿದರು.

ಸಿದ್ದರಾಮಯ್ಯನವರ ಆಡಳಿತಾವಧಿಯಲ್ಲಿಯೂ ಮಹಿಳೆಯರ ಸ್ವಾವಲಂಬಿ ಬದುಕಿಗಾಗಿ ಹಲವು ಯೋಜನೆ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು. ಮನಸ್ವಿನಿ ಯೋಜನೆ, ಗ್ರಾಮೀಣ ಭಾಗದ ಹೆಣ್ಣು ಮಕ್ಕಳ ಶಿಕ್ಷಣ ಉತ್ತೇಜಿಸಲು ವಿದ್ಯಾಸಿರಿ ಯೋಜನೆ, ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಉಚಿತ ಶಿಕ್ಷಣ, ಲ್ಯಾಪ್‌ಟಾಪ್ ವಿತರಣೆ, ಮಹಿಳಾ ಸ್ವಸಹಾಯ ಸಂಘಗಳ ಸ್ವತ್ತುನಿಧಿ ಹೆಚ್ಚಳ ಸೇರಿದಂತೆ ನಾನಾ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಯಿತು ಎಂದು ತಿಳಿಸಿದರು.

ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಕೊಟ್ಟ 169 ಭರವಸೆಗಳಲ್ಲಿ 165 ಅನ್ನು ಈಡೇರಿಸಿದೆ. ಮುಂಬರುವ ಚುನಾವಣೆಯಲ್ಲಿ ರಾಜ್ಯದ ಜನತೆ ಸ್ಪಷ್ಟ ಬಹುಮತದೊಂದಿಗೆ ಕಾಂಗ್ರೆಸ್‌ಗೆ ಅಧಿಕಾರ ಕೊಟ್ಟರೆ ಕುಟುಂಬದ ನಿರ್ವಹಣೆಗಾಗಿ ಪ್ರತಿ ಮನೆ ಯಜಮಾನಿ ಖಾತೆಗೆ 2 ಸಾವಿರ ರೂ. (ಗೃಹಲಕ್ಷ್ಮಿ), ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ (ಗೃಹ ಜ್ಯೋತಿ) ಹಾಗೂ ತಲಾ 10 ಕೆಜಿ ಉಚಿತ ಅಕ್ಕಿ ಕೊಡುವ ಮೂಲಕ ಜನತೆಯ ಶ್ರೇಯೋಭಿವೃದ್ಧಿಗೆ ಪೂರಕ ಆಡಳಿತ ರಾಜ್ಯಕ್ಕೆ ಲಭ್ಯವಾಗಲಿದೆ ಎಂದು ಆಶ್ವಾಸನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಡಾ.ಸುಜಾತಾರಾವ್, ಶಾಂತ ರಾಮಕೃಷ್ಣ, ಜ್ಯೋತಿ, ಮಲ್ಲಾಜಮ್ಮ, ಶೃತಿ, ಮುಖಂಡರಾದ ಆನಂದ್, ಚೇತನ್, ಮನೋಜ್ ಮತ್ತಿತರರು ಮತ್ತಿತರರು ಹಾಜರಿದ್ದರು.

ಒಡಿಸ್ಸಾದಿಂದ ಗಾಂಜಾ ತಂದು ಮಾರುತ್ತಿದ್ದ ನಾಲ್ವರ ಬಂಧನ

5 ಲಕ್ಷ ರೂ. ಮೌಲ್ಯದ 10 ಕೆ.ಜಿ. ಗಾಂಜಾ, 2 ಬೈಕ್ ವಶ

ಮೈಸೂರು, ಮಾ.3(ಆರ್‌ಕೆ)–ಒಡಿಸ್ಸಾದಿಂದ ಗಾಂಜಾ ತಂದು ಮೈಸೂರಿನಲ್ಲಿ ಮಾರಾಟ ಮಾಡುತ್ತಿದ್ದ ನಾಲ್ವರನ್ನು ಸಿಸಿಬಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿನ ರಾಜೀವ್ ನಗರದ ರಾಜಿಕ್, ಉದಯಗಿರಿಯ ರಿಜ್ವಾನ್, ನಯಾಜ್ ಮತ್ತು ಎನ್.ಆರ್. ಮೊಹಲ್ಲಾದ ಜುಬೇರ್ ಬಂಧಿತ ಆರೋಪಿಗಳಾಗಿದ್ದು, ಮಾರ್ಚ್ 2ರಂದು ರಾಜೀವ್‌ನಗರದ ಲಿಡ್ಕರ್ ಕಾಲೋನಿ ಬಳಿ ಆರೋಪಿಗಳನ್ನು ಬಂಧಿಸಿರುವ ಪೊಲೀಸರು, 5 ಲಕ್ಷ ರೂ. ಬೆಲೆ ಬಾಳುವ 10 ಕೆಜಿ. ಗಾಂಜಾ ಮತ್ತು 2 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಒಡಿಸ್ಸಾ ರಾಜ್ಯದ ಮಾಲ್ಕನ್ ಗಿರಿ ಜಿಲ್ಲೆಯ ಖಾಲಿ ಮೋಲಾದಿಂದ ಕಡಿಮೆ ಬೆಲೆಗೆ ತಂದು ಬೈಕ್‌ನಲ್ಲಿಟ್ಟುಕೊಂಡು ಮೈಸೂರಿನೆಲ್ಲೆಡೆ ಮಾರಾಟ ಮಾಡುತ್ತಿದ್ದರು ಎಂಬುದು ವಿಚಾರಣೆ ವೇಳೆ ತಿಳಿದಿದೆ ಎಲೆಕ್ಟ್ರಿಷಿಯನ್ ಜೊತೆಗೆ ಮಟನ್, ಚಿಕನ್ ಮಾರಾಟ ಮಾಡುವ ವೃತ್ತಿ ಮಾಡುತ್ತಿರುವ ಇವರು, ಹಣದ ಆಸೆಗಾಗಿ ಗಾಂಜಾ ಮಾರಾಟ ಮಾಡುವ ಕೆಲಸಕ್ಕಿಳಿದಿದ್ದರು ಎಂದು ಹೇಳಲಾಗಿದೆ.

ನಾಲ್ವರು ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಡಿಸಿಪಿ ಎಸ್.ಜಾಹ್ನವಿ ಅವರ ಮಾರ್ಗದರ್ಶನದಂತೆ ಸಿಸಿಬಿ ಎಸಿಪಿ ಸಂದೇಶ್ ಕುಮಾರ್ ನೇತೃತ್ವದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಸಿ.ಕೃಷ್ಣಕುಮಾರ್, ಸಬ್ ಇನ್ಸ್‌ಪೆಕ್ಟರ್ ಮಾರುತಿ ಅಂತರಗಟ್ಟಿ, ಎಎಸ್‌ಐ ಅಸ್ಗರ್ ಖಾನ್, ಸಿಬ್ಬಂದಿಗಳಾದ ಸಲೀಂ ಪಾಷ, ರಾಮಸ್ವಾಮಿ, ಉಮಾ ಮಹೇಶ್, ರವಿಶಂಕರ್, ಮೋಹನಾರಾಧ್ಯ, ನರಸಿಂಹರಾಜು, ಮಹೇಶ್ ಮತ್ತು ಕೆ.ಎಸ್.ರವಿ ಪಾಲ್ಗೊಂಡಿದ್ದರು.



ಮಾ.8ರಂದು ಬಾಲಕಿಯರ ಕ್ರಿಕೆಟ್ ಪಂದ್ಯಾವಳಿ



ಮೈಸೂರು,ಮಾ.3(ಪಿಎಂ)– ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಮಾ.8ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ 14ರಿಂದ 19 ವರ್ಷದೊಳಗಿನ ಬಾಲಕಿಯರ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ. ಜಿಲ್ಲೆಯ ಎಲ್ಲಾ ತಾಲೂಕಿನ ಆಸಕ್ತ ಅರ್ಹ ಬಾಲಕಿಯರ ಕ್ರಿಕೆಟ್ ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರನ್ನು ಕಚೇರಿಯ ದೂ.ಸಂ. 0821–2564179 ಮೂಲಕ ಸಂಪರ್ಕಿಸಬಹುದೆಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಮೈಸೂರು ಮಿತ್ರ ಶನಿವಾರ 4 ಮಾರ್ಚ್ 2023

ಮೂರನೇ ಪುಟದಿಂದ

ಆರು ಆರೋಪಿಗಳಿಗೆ ನ್ಯಾಯಾಂಗ ಬಂಧನ

ಪೊಲೀಸರು ಎಫ್ಐಆರ್ ದಾಖಲಿಸಿದ್ದಾರೆ. ಗುರುವಾರ ಸಂಜೆ 40 ಲಕ್ಷ ರೂ. ಲಂಚ ಸ್ವೀಕರಿಸುತ್ತಿದ್ದ ವೇಳೆ ಶಾಸಕರ ಪುತ್ರ ಪ್ರಶಾಂತ್ ಸೇರಿದಂತೆ ಎಲ್ಲಾ ಐವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ತಮ್ಮ ಮೇಲೆ ಎಫ್ಐಆರ್ ದಾಖಲಾಗುತ್ತಿದ್ದಂತೆಯೇ ಬಂಧನದ ಭೀತಿಯಿಂದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ತಲೆಮರೆಸಿಕೊಂಡಿದ್ದು, ನಿರೀಕ್ಷಣಾ ಜಾಮೀನಿಗಾಗಿ ಕಸರತ್ತು ನಡೆಸುತ್ತಿದ್ದಾರೆ ಎಂದು ಹೇಳಲಾಗಿದೆ. ಇಂದು ಮತ್ತು ನಾಳೆ ನ್ಯಾಯಾಲಯ ರಜೆ ಇರುವುದರಿಂದಾಗಿ ಶಾಸಕರು ತಲೆಮರೆಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ಮೂಲಗಳು ತಿಳಿಸಿವೆ. ಮತ್ತೊಂದು ಮೂಲದ ಪ್ರಕಾರ ಮಾಡಾಳ್ ವಿರೂಪಾಕ್ಷಪ್ಪ ಅವರಿಗಾಗಿ ಲೋಕಾಯುಕ್ತ ಪೊಲೀಸರ 3 ತಂಡಗಳು ಹುಡುಕಾಟ ನಡೆಸುತ್ತಿವೆ ಎಂದು ಹೇಳಲಾಗಿದೆ. ಈ ಪ್ರಕರಣ ಕುರಿತು ಇಂದು ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಲೋಕಾಯುಕ್ತ ಮುಖ್ಯ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಕರೆದು ವಿಚಾರಣೆ ನಡೆಸುತ್ತೇವೆ ಎಂದು ಹೇಳಿರುವುದು ಶಾಸಕರ ಬಂಧನವಾಗಬಹುದು ಎಂಬುದಕ್ಕೆ ಪುಷ್ಟಿ ನೀಡಿದೆ.

ಮಾಡಾಳ್ ವಿರೂಪಾಕ್ಷಪ್ಪ ರಾಜೀನಾಮೆ

ಕೆಎಸ್‌ಡಿಎಲ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿರುವುದಾಗಿ ತಿಳಿಸಿದ್ದಾರೆ. ಎಲ್ಲರೂ ಕಾನೂನಿಗೆ ತಲೆಬಾಗಬೇಕೆಂಬುದು ಗೊತ್ತಿದೆ. ಆ ಕಾರಣಕ್ಕಾಗಿ, ಪಕ್ಷ ಮತ್ತು ಸರ್ಕಾರಕ್ಕೆ ಮುಜುಗರ ಆಗಬಾರದು ಎಂಬ ಉದ್ದೇಶದಿಂದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ತಿಳಿಸಿದ್ದಾರೆ. ಲೋಕಾಯುಕ್ತ ದಾಳಿ ನಡೆದ ಬಳಿಕ ಮುಖ್ಯಮಂತ್ರಿ ಅವರನ್ನು ಸಂಪರ್ಕಿಸಿದ ಮಾಡಾಳ್, ಒಬ್ಬ ಜವಾಬ್ದಾರಿಯುತ ಜನಪ್ರತಿನಿಯಾಗಿ ದೇಶದ ಕಾನೂನಿಗೆ ತಲೆಬಾಗುವುದಾಗಿ ಹೇಳಿದ್ದಾರೆ ಎನ್ನಲಾಗಿದೆ. ಈ ವೇಳೆ, ಕೂಡಲೇ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲು ಮುಖ್ಯಮಂತ್ರಿ ಸೂಚಿಸಿದ್ದು, ಅದರಂತೆ ಅವರು ಇಂದು ರಾಜೀನಾಮೆ ಸಲ್ಲಿಸಿದ್ದಾರೆ.

ಅಗತ್ಯ ಬಿದ್ದರೆ ವಿರೂಪಾಕ್ಷಪ್ಪ ವಿಚಾರಣೆ

ವೇಳೆ 2 ಕೋಟಿ 2 ಲಕ್ಷ ರೂ. ವಶಪಡಿಸಿಕೊಳ್ಳಲಾಗಿದೆ. ಅವರ ನಿವಾಸದಲ್ಲಿ 6 ಕೋಟಿ 10 ಲಕ್ಷ ರೂ. ಸಿಕ್ಕಿದೆ. ಒಟ್ಟಾರೆ 8 ಕೋಟಿ ರೂ.ಗೂ ಅಧಿಕ ನಗದು ಪತ್ತೆಯಾಗಿದೆ. ಈ ಪ್ರಕರಣದ ತನಿಖೆ ಮುಂದುವರೆದಿದ್ದು, ಅಗತ್ಯ ಬಿದ್ದರೆ, ಎ–1 ಆರೋಪಿ ಶಾಸಕ ವಿರೂಪಾಕ್ಷಪ್ಪ ಅವರನ್ನು ಕರೆದು ವಿಚಾರಣೆ ಮಾಡುತ್ತೇವೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕಿದ್ದು, ಈ ಪ್ರಕರಣದಲ್ಲಿ ದೂರು ಕೊಟ್ಟವರನ್ನು ಗೌರವಿಸುತ್ತೇವೆ. ಅವರ ಧೈರ್ಯಕ್ಕೆ ನಮ್ಮ ಮೆಚ್ಚುಗೆ ಇದೆ ಎಂದರು. ಕಾನೂನು ಎಲ್ಲರಿಗೂ ಒಂದೇ. ಯಾರೇ ಆಗಲೀ ಭ್ರಷ್ಟಾಚಾರ, ಲಂಚಗುಳಿತನ ಗಮನಕ್ಕೆ ಬಂದರೆ ದೂರು ನೀಡಬೇಕು. ನಮ್ಮ ಕೆಲಸವಾಗಬೇಕಾದರೆ ಲಂಚ ಕೊಡಬೇಕಾಗುತ್ತದಲ್ಲ ಎಂದು ಸುಮ್ಮನಿರಬಾರದು. ಸಾರ್ವಜನಿಕರು ಯಾವುದೇ ಅಧಿಕಾರಿಗಳ ಬಗ್ಗೆ ಭೀತಿಗೊಳಗಾಗಬಾರದು ಎಂದರಲ್ಲದೇ, ಬೆಂಗಳೂರಿನಲ್ಲಿ ಲೋಕಾಯುಕ್ತ ಕಚೇರಿಯಿದೆ. ಜಿಲ್ಲಾ ಮಟ್ಟದಲ್ಲೂ ನಮ್ಮ ತಂಡ ಇದೆ ಎಂದ ಅವರು, ಈ ರೀತಿಯ ಅಕ್ರಮ ನಡೆದಾಗ ನಮಗೆ ದೂರು ನೀಡಿದರೆ, ಎಂತಹ ತಿಮಿಂಗಿಲಗಳನ್ನೂ ಹಿಡಿದು ಹಾಕಬಹುದು ಎಂಬುದಕ್ಕೆ ಈ ಪ್ರಕರಣ ಸಾಕ್ಷಿ. ಹೀಗಾಗಿ ಯಾರೂ ಲಂಚ ಕೊಟ್ಟು ಕೆಲಸ ಮಾಡಿಕೊಳ್ಳಬೇಡಿ ಎಂದರು. ಈ ಪ್ರಕರಣದಲ್ಲಿ 6 ಮಂದಿ ವಿರುದ್ಧ ಎಫ್ಐಆರ್ ದಾಖಲಾಗಿದೆ. ಪ್ರಶಾಂತ್ ಎಂಬ ಬಿಡಬ್ಲ್ಯೂಎಸ್ಎಸ್‌ಬಿ ಮುಖ್ಯ ಲೆಕ್ಕಾಧಿಕಾರಿ ಜೊತೆ 3 ಮಂದಿ ಲಂಚ ಕೊಡುವವರು ಇದ್ದರು. ಯಾರು ಲಂಚದ ಹಣ ಸ್ವೀಕರಿಸಿದ್ದಾರೆ ಎಂಬ ಮಾಹಿತಿಯನ್ನೂ ದೂರುದಾರರು ನೀಡಿದ್ದರು ಎಂದು ಲೋಕಾಯುಕ್ತ ಮುಖ್ಯ ನ್ಯಾಯಮೂರ್ತಿಗಳು ತಿಳಿಸಿದರು.

ನಿಷ್ಪಕ್ಷಪಾತ ತನಿಖೆ: ಸಿಎಂ

ಈ ವಿಚಾರದಲ್ಲಿಯೂ ಲೋಕಾಯುಕ್ತ ಸರ್ವ ಸ್ವತಂತ್ರವಾಗಿರುವ ಸಂಸ್ಥೆ. ಮಾಹಿತಿ ಹಾಗೂ ಹಣ ದೊರೆತಿರುವುದರ ಮೇಲೆ ಲೋಕಾಯುಕ್ತ ಮುಕ್ತವಾಗಿ, ನಿಷ್ಪಕ್ಷಪಾತವಾದ ತನಿಖೆ ಮಾಡಲಿದೆ. ಹಣ ಯಾರಿಗೆ ಸೇರಿದ್ದು, ಯಾರಿಗೋಸ್ಕರ ಸಂಗ್ರಹವಾಗಿದ್ದು ಎನ್ನುವುದೆಲ್ಲಾ ಹೊರಬರಬೇಕು. ಸತ್ಯ ಹೊರಗಡೆ ಬರಲಿ ಎನ್ನುವುದು ನಮ್ಮ ಉದ್ದೇಶ. ಯಾರು ತಪ್ಪು ಮಾಡಿದ್ದಾರೋ ಅವರು ಶಿಕ್ಷೆ ಅನುಭವಿಸುತ್ತಾರೆ ಎನ್ನುವುದು ನಮ್ಮ ಅಭಿಪ್ರಾಯ ಎಂದರು. ಕಾಂಗ್ರೆಸ್ ಮಂತ್ರಿಗಳು ಹಾಗೂ ಶಾಸಕರ ಮೇಲೆ 59 ಆರೋಪವಿತ್ತು. ಎಸಿಬಿ ಇದದ್ದಕ್ಕೆ ಅವರು ಪ್ರಕರಣ ಮುಚ್ಚಿಹಾಕಿದರು. ಈಗ ಲೋಕಾಯುಕ್ತ ತನಿಖೆಯಾದಾಗ ಅವರದ್ದು ಸಹ ಹೊರಗಡೆ ಬರುತ್ತೆ. ಕಾಂಗ್ರೆಸ್ ಲೋಕಾಯುಕ್ತ ಮುಚ್ಚಿಹಾಕಿರೋದಕ್ಕೆ ಇದೇ ಸಾಕ್ಷಿ. ಇವೆಲ್ಲ ಬಹಿರಂಗವಾಗಲಿದೆ. ನಾವು ಏನನ್ನೂ ಮುಚ್ಚಿಡುವ ಪ್ರಶ್ನೆಯೇ ಇಲ್ಲ. ಬಹಳ ಸ್ಪಷ್ಟವಾಗಿ ಮಾಜಿ ಮಂತ್ರಿ ಜಾರ್ಜ್ ಅವರು ಎಸಿಬಿನೇ ಮುಂದುವರಿಸಿ ಎಂದು ವಿಧಾನಸಭೆಯಲ್ಲಿ ಹೇಳುತ್ತಾರೆ. ಅವರು ಯಾರ ಪರವಾಗಿದ್ದಾರೆ ಎಂದು ಪ್ರಶ್ನಿಸಿದ ಮುಖ್ಯಮಂತ್ರಿಗಳು, ಈಗ ಈ ಘಟನೆ ಇಟ್ಟುಕೊಂಡು ತಾವು ದೊಡ್ಡ ಸ್ವಚ್ಛ ಪಕ್ಷ ಅಂತ ಹೇಳಿಕೊಳ್ಳಲು ಸಾಧ್ಯವಿಲ್ಲ. ಅವರು ಬಹಳ ಹಿಂದೆಯೂ ಭ್ರಷ್ಟಾಚಾರ ಮಾಡಿದ್ದಾರೆ. ಹಲವಾರು ಜನರ ಮೇಲೆ ಪ್ರಕರಣ ಸಹ ದಾಖಲಾಗಿದೆ. ತನಿಖೆ ಸಹ ಆಗುತ್ತಿದೆ. ಅವರು ಮುಚ್ಚಿ ಹಾಕಿದ್ದ ಎಲ್ಲಾ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ಕೊಟ್ಟು ತನಿಖೆ ಮಾಡಿಸಲಾಗುವುದು ಎಂದರು.

15 ದಿನ ಅವಕಾಶ

ವಾಹನದ ಮೇಲೆ ಬಾಕಿ ಉಳಿದಿದ್ದ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಸಿದ್ದರಾದರೂ, ಆ ಅವಧಿಯಲ್ಲಿ ಹಣ ಪಾವತಿಸಲು ಸಾಧ್ಯವಾಗದವರು, ರಿಯಾಯಿತಿ ಅವಧಿ ವಿಸ್ತರಿಸುವಂತೆ ಮನವಿ ಮಾಡಿದ್ದರು. ಶೇ.50 ರಿಯಾಯ್ತಿ ಅಡಿ ಈ ಹಿಂದೆ ಮೈಸೂರು ನಗರ ವ್ಯಾಪ್ತಿಯಲ್ಲಿ 12,30,58,650 ರೂ. ದಂಡ ಸಂಗ್ರಹವಾಗಿತ್ತು. ಪೊಲೀಸ್ ಇಲಾಖೆಯ ಸಂಚಾರ ಇ–ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಮತ್ತೊಂದು ಬಾರಿಗೆ ಶೇ.50 ರಷ್ಟು ರಿಯಾಯಿತಿ ನೀಡಿ ಸರ್ಕಾರ ಆದೇಶ ನೀಡಿರುವುದರಿಂದ ಮೈಸೂರಿನ ಕಮಿಷ ನರೇಟ್ ವ್ಯಾಪ್ತಿಯ ದೇವರಾಜ, ಕೃಷ್ಣರಾಜ, ನರಸಿಂಹರಾಜ, ವಿ.ವಿ. ಪುರಂ ಹಾಗೂ ಸಿದ್ಧಾರ್ಥ ನಗರ ಸಂಚಾರ ಠಾಣೆಗಳಲ್ಲಿ ಶೇ.50ರ ರಿಯಾಯಿತಿಯೊಂದಿಗೆ ವಾಹನ ಮಾಲೀಕರಿಂದ ದಂಡದ ಹಣ ಪಾವತಿಸಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರು ದಂಡದ ಹಣ ಪಾವತಿಸಲು ಅನುಕೂಲವಾಗುವಂತೆ ಸಂಚಾರ ಠಾಣೆಗಳಲ್ಲಿ ಕೌಂಟರ್‌ಗಳನ್ನು ತೆರೆಯಲಾಗುತ್ತಿದೆ. ವಾಹನಗಳ ಆರ್‌ಸಿ ಮಾಲೀಕರು ಈಗ ಮತ್ತೆ ರಿಯಾಯಿತಿ ಅವಕಾಶ ಬಳಸಿಕೊಂಡು ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಿಕೊಳ್ಳುವಂತೆ ಮೈಸೂರು ನಗರ ಸಂಚಾರ ಎಸಿಪಿ ಪರಶುರಾಮಪ್ಪ ಮನವಿ ಮಾಡಿದ್ದಾರೆ.

ಕಳೆದ ಬಾರಿ ಅವಕಾಶ ನೀಡಿದ್ದಾಗ 4,98,265 ಪ್ರಕರಣಗಳಲ್ಲಿ 12,30,58,650 ರೂ. ದಂಡದ ಹಣ ಸಂಗ್ರಹವಾಗಿದ್ದು, ಈ ಭಾರಿ 15 ದಿನಗಳ ಕಾಲಾವಕಾಶವಿರುವುದರಿಂದ ಅಧಿಕ ಸಂಖ್ಯೆಯ ಬಾಕಿ ಇರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಮುಕ್ತಾಯವಾಗುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಉಚಿತ ಬಸ್ ಪ್ರಯಾಣ

ಬಸ್ ಚಾಲಕರಿಗೆ ವಿದ್ಯಾರ್ಥಿಗಳ ಪರೀಕ್ಷಾ ಕೇಂದ್ರಗಳ ಮುಂದೆ ನಿಲುಗಡೆ ನೀಡುವಂತೆ ಸೂಚಿಸಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯನ ಮಂಡಳಿಯ ಅಧ್ಯಕ್ಷರು ಪರೀಕ್ಷೆ ಬರೆಯಲು ತೆರಳುವ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಉಚಿತವಾಗಿ ಪ್ರಯಾಣದ ವ್ಯವಸ್ಥೆ ಮಾಡುವಂತೆ ಕೆಎಸ್ಆರ್‌ಟಿಸಿಗೆ ಮನವಿ ಸಲ್ಲಿಸಿದ್ದರು. ಇದನ್ನು ಪುರಸ್ಕರಿಸಿರುವ ಕೆಎಸ್ಆರ್‌ಟಿಸಿ, ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರಗಳಿಗೆ ಮತ್ತು ಅಲ್ಲಿಂದ ವಾಪಸಾಗಲು ವಿದ್ಯಾರ್ಥಿಗಳಿಗೆ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಿದೆ.

ಯಾವೆಲ್ಲಾ ಬಸ್‌ಗಳಲ್ಲಿ ಉಚಿತ ಪ್ರಯಾಣ: ಕೆಎಸ್ಆರ್‌ಟಿಸಿಯ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶವಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಕೋರಿಕೆ ಮೇರೆಗೆ ನಿಲುಗಡೆ ನೀಡಬೇಕು ಎಂದು ಚಾಲಕ ಮತ್ತು ನಿರ್ವಾಹಕರಿಗೂ ಸೂಚನೆ ನೀಡಿದೆ.

ಈ ಮಧ್ಯೆ, ಮಾರ್ಚ್ 8ಕ್ಕೆ ಮಹಿಳಾ ದಿನಾಚರಣೆಯಂದು ಮಹಿಳೆಯರು ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಬಹುದು ಎಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ತಿಳಿಸಿದೆ. ಆ ದಿನ ಮಹಿಳೆಯರು ನಗರದ ಎಲ್ಲಿಂದ ಎಲ್ಲಿಗೆ ಬೇಕಾದರೂ ಉಚಿತವಾಗಿ ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಸಬಹುದಾಗಿದೆ.

ಅಧಿಕಾರಿಗಳ ಹದ್ದಿನ ಕಣ್ಣು

ಹಿಂದೇಟು ಹಾಕಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಧಾರಾಳವಾಗಿ ಹಣ ಖರ್ಚು ಮಾಡುವ, ಮತ್ತೊಂದೆಡೆ ಕಪ್ಪು ಹಣದ ಥೈಲಿ ಹರಿಸದಂತೆ ತಡೆಯುವ ಉದ್ದೇಶವಿದೆ ಎಂದು ಮೂಲಗಳು ಹೇಳಿವೆ. ಆಡಳಿತಪಕ್ಷದಲ್ಲಿದ್ದೂ ಅಥವಾ ಗುರುತಿ ಸಿಕೊಂಡಿದ್ದರೂ ಭಿನ್ನಮತ ಲಕ್ಷಣಗಳು ಕಂಡು ಬಂದರೆ ಅಂಥವರ ಮೇಲೂ ದಾಳಿಯಾಗಲಿದೆ ಎಂಬ ಪರೋಕ್ಷ ಸಂದೇಶ ರವಾನಿಸಲಾಗಿದೆ. ವಿಶೇಷವಾಗಿ ಬ್ಯಾಂಕ್‌ಗಳ ವಹಿವಾಟಿನ ಮೇಲೆ ನಿಗಾ ಇಡಲಾಗಿದೆ. ಭಾರೀ ಪ್ರಮಾಣದಲ್ಲಿ ಗೃಹ ಬಳಕೆ ವಸ್ತುಗಳ ಖರೀದಿಯ ಮೇಲೂ ಗಮನ ಹರಿಸಲಾಗುತ್ತಿದೆ. ಇದುವರೆಗಿನ ಸಮೀಕ್ಷೆಗಳ ವರದಿಗಳು, ಪದೇ ಪದೆ ಪ್ರಧಾನಿ ಸೇರಿದಂತೆ ರಾಷ್ಟ್ರದ ಮಟ್ಟದ ನಾಯಕರು ರಾಜ್ಯಕ್ಕೆ ಭೇಟಿ ಕೊಟ್ಟರೂ ಆಡಳಿತ ಪರವಾದ ಅಲೆ ಸೃಷ್ಟಿಸಲು ಸಾಧ್ಯವಾಗಿಲ್ಲ. ಮತ್ತೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕಾದರೆ ಪ್ರತಿಪಕ್ಷಗಳಿಗೆ ಆರ್ಥಿಕ ಸಂಪನ್ಮೂಲ ಸಿಗದಂತೆ ತಡೆಯುವುದೇ ಉಳಿದ ಮಾರ್ಗ. ಹಾಗಾಗಿ ಈ ಸಂಸ್ಥೆಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂಬುದು ವಿರೋಧ ಪಕ್ಷಗಳ ಆರೋಪವಾಗಿದೆ. ಒಟ್ಟಾರೆ ಮೂರೂ ರಾಜಕೀಯ ಪಕ್ಷಗಳು ಬಹುಮತ ಗಳಿಸಿ ಅಧಿಕಾರಕ್ಕೆ ಬರಬೇಕು ಎಂಬ ಗುರಿ ಹೊಂದಿವೆ. ಇದಕ್ಕಾಗಿ ಈಗಾಗಲೇ ತಮ್ಮದೇ ತಂತ್ರ, ಪ್ರತಿತಂತ್ರಗಾರಿಕೆ ಮೂಲಕ ಪ್ರಚಾರ ಆರಂಭಿಸಿ ಮತದಾರರನ್ನು ಸೆಳೆಯುವ ಯತ್ನ ಮಾಡುತ್ತಿವೆ. ಹಣವಿಲ್ಲದೆ ಚುನಾವಣೆ ಗೆಲ್ಲುವುದು ಗಗನಕುಸುಮ ಎಂಬುದು ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳಿಗೆ ಅರಿವಿದೆ. ಈ ಹಿನ್ನೆಲೆಯಲ್ಲಿ ಹಣದ ಹೊಂದಾಣಿಕೆ ಯಾವ ರೀತಿ ಮಾಡುತ್ತಾರೆಂಬುದನ್ನು ಕಾದುನೋಡಬೇಕು.

ಪರಿಶಿಷ್ಟರು, ಹಿಂದುಳಿದ ವರ್ಗ ಬಿಜೆಪಿ ಬೆನ್ನಿಗಿವೆ; ಗೆಲುವು ನಮ್ಮದೇ

- ಮಾಜಿ ಸಚಿವ ಈಶ್ವರಪ್ಪ ಅತೀವ ವಿಶ್ವಾಸ
- ವಿಜಯ ಸಂಕಲ್ಪ ಯಾತ್ರೆಗೆ ನಾವು ಕಾಂಗ್ರೆಸ್ಸಿಗರಂತೆ ಹಣ ಕೊಟ್ಟು ಜನ ಸೇರಿಸುತ್ತಿಲ್ಲ
- ನಮಗೆ ರಾಷ್ಟ್ರೀಯವಾದಿ ಮುಸ್ಲಿಂರ ಓಟು ಮಾತ್ರ ಸಾಕು
- ಭ್ರಷ್ಟಾಚಾರ ಕಾಂಗ್ರೆಸ್, ಜೆಡಿಎಸ್‌ನವರಿಗೂ ಅನ್ವಯವಾಗುತ್ತೆ!

ಮೈಸೂರು, ಮಾ.3(ಎಂಟಿವೈ)– ಪರಿಶಿಷ್ಟ ಜಾತಿ ಮತ್ತು ಪಂಗಡದೊಂದಿಗೆ ಹಿಂದುಳಿದ ವರ್ಗಗಳೂ ಬಿಜೆಪಿ ಬೆಂಬಲಿಸುತ್ತಿರುವುದರಿಂದ ಮುಂಬರುವ ಚುನಾವಣೆಯಲ್ಲಿ ಬಿಜೆಪಿ 150 ಸ್ಥಾನ ಗೆದ್ದು ಸ್ವತಂತ್ರವಾಗಿ ಅಧಿಕಾರದ ಗದ್ದುಗೆ ಏರುವುದು ನಿಶ್ಚಯ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಭವಿಷ್ಯ ನುಡಿದಿದ್ದಾರೆ.



ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದ ನಾಲ್ಕು ದಿಕ್ಕುಗಳಲ್ಲಿ ನಡೆಸುತ್ತಿರುವ ವಿಜಯ ಸಂಕಲ್ಪ ಯಾತ್ರೆಗೆ ನಿರೀಕ್ಷೆಗೂ ಮೀರಿದ ಜನ ಬೆಂಬಲ ವ್ಯಕ್ತವಾಗುತ್ತಿದೆ. ಎಲ್ಲಾ ಯಾತ್ರೆಗಳಲ್ಲೂ ದಲಿತ ಸಮುದಾಯ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಜನರು ಸ್ವಯಂಪ್ರೇರಣೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇದರಿಂದ ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ ನಿಚ್ಚಳ ಬಹುಮತ ಲಭಿಸುವುದು ಖಚಿತ ಎಂಬಂತಾಗಿದೆ ಎಂದರು.

ಎಸ್ಸಿ, ಎಸ್ಟಿ ಮೀಸಲಾತಿ ಹೆಚ್ಚಳದಲ್ಲಿ ಬಿಜೆಪಿ ಸರ್ಕಾರ ದಿಟ್ಟ ಕ್ರಮ ಕೈಗೊಂಡಿದೆ. ಕೇವಲ ಭರವಸೆಗೆ ಮಾತ್ರ ಸೀಮಿತವಾಗದೆ, ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ. ತಳವಾರ, ಪರಿವಾರ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿದೆ. ಡಿ.ವಿ.ಸದಾನಂದ ಗೌಡ ಮುಖ್ಯಮಂತ್ರಿಯಾಗಿದ್ದಾಗ ದಲಿತ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಾಯಿತು. ಇದೀಗ ಬಸವರಾಜ ಬೊಮ್ಮಾಯಿ ಸರ್ಕಾರ ಹೆಚ್ಚಿನ ಅನುದಾನ ನೀಡಿದೆ. ಈ ಹಿನ್ನೆಲೆಯಲ್ಲಿ ಶೋಷಿತ ಸಮುದಾಯಗಳ ಒಲವು ಬಿಜೆಪಿಯತ್ತ ಇದೆ.

ನಾಲ್ಕು ಅಂಶ ಮುಂದಿಟ್ಟು ಮತಯಾಚನೆ: ಈ ಚುನಾವಣೆಯಲ್ಲಿ ಪ್ರಮುಖ ನಾಲ್ಕು ವಿಷಯ ಮುಂದಿಟ್ಟುಕೊಂಡು ಮತ ಯಾಚಿಸುತ್ತಿದ್ದೇವೆ. ಸಮರ್ಥ ನಾಯಕರ ನೇತೃತ್ವ, ಸಂಘಟನೆ, ಅಭಿವೃದ್ಧಿ ಹಾಗೂ ಸಂಸ್ಕೃತಿ ಉಳಿವಿನ ವಿಷಯ ಮುಂದಿಟ್ಟುಕೊಂಡು ಬೆಂಬಲ ಕೋರುತ್ತಿದ್ದೇವೆ. ಕಾಂಗ್ರೆಸ್ ಮತ್ತು ಜೆಡಿಎಸ್‌ನಲ್ಲಿ ನಾಯಕರೇ ಇಲ್ಲ. ಆದರೆ, ಬಿಜೆಪಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರದ ಸಚಿವ ಅಮಿತ್ ಶಾ, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪ, ಸಿಎಂ ಬಸವರಾಜ ಬೊಮ್ಮಾಯಿ ಸೇರಿದಂತೆ ನಾಯಕರ ದಂಡೇ ಇದೆ. ದಿಟ್ಟ ನಾಯಕರ ನೇತೃತ್ವ ಪಕ್ಷಕ್ಕೆ ಬೆನ್ನುಲುಬಾಗಿದೆ. ಬೂತ್ ಮಾತ್ರವಲ್ಲದೆ, ಮತದಾರರ ಪಟ್ಟಿಯ ಪೇಜ್ ಪ್ರಮುಖರನ್ನು ನಿಯೋಜಿಸಲಾಗಿದ್ದು, ಪ್ರತಿಯೊಬ್ಬ ಮತದಾರರನ್ನು ವಾರಕ್ಕೆ ಎರಡು ಬಾರಿ ಖುದ್ದಾಗಿ ಭೇಟಿ ಮಾಡಿ ಪಕ್ಷದ ತತ್ವ ಸಿದ್ಧಾಂತವನ್ನು ಮನವರಿಕೆ ಮಾಡಿಕೊಟ್ಟು ಬೆಂಬಲ ಯಾಚಿಸುತ್ತಿದ್ದಾರೆ. ಎರಡೂ ಸರ್ಕಾರದ ಅಭಿವೃದ್ಧಿ ಕಾರ್ಯವನ್ನು ಮನೆ ಮನೆಗೆ ತಿಳಿಸಲಾಗುತ್ತಿದೆ. ಸಂಸ್ಕೃತಿ ಹಾಗೂ ಧರ್ಮ ರಕ್ಷಣೆ ಅಜೆಂಡಾವನ್ನು ಮುಂದಿಟ್ಟುಕೊಂಡು ಬೆಂಬಲ ಕೋರುತ್ತಿದ್ದೇವೆ ಎಂದರು.

ತಿಹಾರ್ ಜೈಲಿಂದ ಬಂದವರ ಪ್ರಶ್ನೆಗೆ ಉತ್ತರಿಸಲ್ಲ: ದಾವಣಗೆರೆಯ ಚನ್ನಗಿರಿ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ 40 ಲಕ್ಷ ರೂ. ಲಂಚ ಪಡೆಯುವಾಗ ಸಿಕ್ಕಿಬಿದ್ದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ರಾಜ್ಯದ ಬಿಜೆಪಿ ಸರ್ಕಾರ ಶೇ.40 ಪರ್ಸೆಂಟ್ ಸರ್ಕಾರ ಎಂಬುದು ಖಚಿತವಾಗಿದೆ ಎಂದು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಈಶ್ವರಪ್ಪ ತಿಹಾರ್ ಜೈಲಿನಿಂದ ಬಂದ ವ್ಯಕ್ತಿಯ ಮಾತಿಗೆ ನಾನು ಪ್ರತಿಕ್ರಿಯಿಸಲ್ಲ. ಅವರ ಮನೆಯಲ್ಲಿ ಬಂಡಲ್ ಗಟ್ಟಲೇ ಹಣ ಸಿಕ್ಕಿತ್ತು. ಇಂದಿಗೂ ಬೇಲ್ ಮೇಲೆ ಇದ್ದಾರೆ. ಅವರ ಪ್ರಕರಣ ಇನ್ನೂ ಮುಕ್ತಾಯವಾಗಿಲ್ಲ. ಯಾವಾಗ ಬೇಕಾದರೂ ಜೈಲಿಗೆ ಹೋಗುತ್ತಾರೆ. ಅಂತಹ ವ್ಯಕ್ತಿ ಹೇಳಿಕೆಗೆ ಮಹತ್ವ ನೀಡಲ್ಲ ಎಂದು ಕಿಡಿಕಾರಿದರು.

ಲಂಚ ಪಡೆಯುವಾಗ ಲೋಕಾಯುಕ್ತರ ದಾಳಿಗೆ ಸಿಲುಕಿದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಪ್ರಕರಣದ ತನಿಖೆಗೆ ಸರ್ಕಾರ ಸೂಚಿಸಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಯಾರನ್ನೂ ರಕ್ಷಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರು.

ಸಿದ್ದರಾಮಯ್ಯ ಜೈಲಿಗೆ ಗ್ಯಾರಂಟಿ: ಅರ್ಕಾವತಿ ರೀಡು ಪ್ರಕರಣದಲ್ಲಿ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ 8 ಸಾವಿರ ಕೋಟಿ ಅವ್ಯವಹಾರ ನಡೆದಿದೆ ಎಂದು ವರದಿ ಬಂದಿದೆ. ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಜೈಲಿಗೆ ಹೋಗುವುದು ಗ್ಯಾರಂಟಿ ಎಂದು ಹೇಳಿದ ಅವರು, ಸಿದ್ದರಾಮಯ್ಯ ಪಟಾಕಿ ಹೊಡೆಯುವುದರಲ್ಲಿ ನಿಸ್ಸೀಮ. ಈ ಹಿಂದೆಯೂ ನಾನೇ ಮುಖ್ಯಮಂತ್ರಿ ಎಂದಿದ್ದರು. ಈಗ 150 ಸ್ಥಾನ ಗೆಲ್ಲುತ್ತೇವೆ ಎಂದು ಪಟಾಕಿ ಹೊಡೆಯುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಚಾಮರಾಜನಗರದಲ್ಲಿ ನಡೆದ ವಿಜಯ ಸಂಕಲ್ಪ ಯಾತ್ರೆಯಲ್ಲಿ ಸಚಿವ ವಿ.ಸೋಮಣ್ಣ ಅವರ ಗೈರು ಹಾಜರಿಗೆ ಮಹತ್ವ ನೀಡಬೇಕಿಲ್ಲ. ಅವರು ಬೆಂಗಳೂರಿನ ಮೂರು ಕ್ಷೇತ್ರಗಳಲ್ಲಿ ತನ್ನದೇ ನಾಯಕತ್ವದಲ್ಲಿ ನಡೆದ ಕೆಲ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು. ಇದನ್ನು ಮುಂದಿಟ್ಟುಕೊಂಡು ಅಸಮಾಧಾನ ಎಂದು ಹೇಳುವುದು ಸರಿಯಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ದತ್ತಾತ್ರೇಯ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಮುಖಂಡರಾದ ಎಂ.ರಾಜೇಂದ್ರ ಮೈ.ವಿ.ರವಿಶಂಕರ್, ಕಾಪು ಸಿದ್ದಲಿಂಗಸ್ವಾಮಿ, ವಸಂತ್‌ಕುಮಾರ್ ಹಾಗೂ ಇನ್ನಿತರರು ಇದ್ದರು.

ಹೆಚ್‌ಡಿಕೆ ಕುಟುಂಬವೇ ಜೈಲು ಸೇರಬೇಕಾಗುತ್ತದೆ

ಬಿಜೆಪಿ ಸರ್ಕಾರ ಅವಧಿಯಲ್ಲಾಗಿರುವ ಭ್ರಷ್ಟಾಚಾರದ ತನಿಖೆ ನಡೆಸಿದರೆ, 10 ಪರಪ್ಪನ ಅಗ್ರಹಾರ ಜೈಲು ಬೇಕಾಗುತ್ತದೆ ಎಂದು ಹೇಳಿಕೆ ನೀಡಿರುವ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದ ಕೆ.ಎಸ್.ಈಶ್ವರಪ್ಪ, ಜೆಡಿಎಸ್ ಸರ್ಕಾರದ ಅವಧಿಯಲ್ಲಿ ಆಗಿರುವ ಭ್ರಷ್ಟಾಚಾರ ತೆರೆದಿಟ್ಟರೆ ಹೆಚ್.ಡಿ.ಕುಮಾರಸ್ವಾಮಿ ಪೂರ್ಣ ಕುಟುಂಬವೇ ಜೈಲಿನಲ್ಲಿರಬೇಕಾದ ಸ್ಥಿತಿ ಒದಗಿ ಬರುತ್ತದೆ. ಹಾಗಾಗಿ ಆರೋಪ ಮಾಡುವ ಮುನ್ನ ದಾಖಲೆಯೊಂದಿಗೆ ಮಾಡಬೇಕು ಎಂದು ಕಿಡಿಕಾರಿದರು.

ರಾಷ್ಟ್ರವಾದಿ ಮುಸ್ಲಿಮರು ಮಾತ್ರ ಬೇಕು

ಬಿಜೆಪಿಗೆ ರಾಷ್ಟ್ರವಾದಿ ಮುಸ್ಲಿಮರು ಮಾತ್ರ ಬೇಕು. ಎಸ್‌ಡಿಪಿಐ, ಪಿಎಫ್ಐ, ಭಯೋತ್ಪಾದಕ ಮುಸ್ಲಿಮರ ಮತ ಈಗಲೂ ಬೇಡ, ಮುಂದೆಯೂ ಬೇಡ ಎಂದು ಪುನರುಚ್ಚರಿಸಿದರು.

ಮೈಸೂರು ಜಿಲ್ಲಾ ಸವಿತಾ ಸಮಾಜದ ನೂತನ ಅಧ್ಯಕ್ಷರಾಗಿ ಹರೀಶ್ ರೆಡ್ಡಿ ಆಯ್ಕೆ

ಮೈಸೂರು, ಮಾ.3(ಎಂಟಿವೈ)– ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಸಭಾಂಗಣದಲ್ಲಿ ಶುಕ್ರವಾರ ನಡೆದ ಸವಿತಾ ಸಮಾಜದ ಮುಖಂಡರ ಸಭೆಯಲ್ಲಿ ಮೈಸೂರು ಜಿಲ್ಲಾ ಸವಿತಾ ಸಮಾಜದ ನೂತನ ಅಧ್ಯಕ್ಷರಾಗಿ ಹರೀಶ್ ರೆಡ್ಡಿ ಆಯ್ಕೆಯಾಗಿದ್ದಾರೆ. ಮೈಸೂರು ನಗರ ಹಾಗೂ ತಾಲೂಕು ಕೇಂದ್ರ ಮತ್ತು ನಗರದ ವಿವಿಧ ಘಟಕಗಳ ಅಧ್ಯಕ್ಷರು ಸಭೆಯಲ್ಲಿ ಪಾಲ್ಗೊಂಡು ಸಂಘದ ನೂತನ ಅಧ್ಯಕ್ಷ ಹರೀಶ್ ರೆಡ್ಡಿ ಅವರಿಗೆ ಬೆಂಬಲ ನೀಡಿದರು. ಸಂಘದ ಮಾಜಿ ಅಧ್ಯಕ್ಷ ನಾಗೇಶ್ ನೂತನ ಅಧ್ಯಕ್ಷರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ತಾಲೂಕು ಘಟಕಗಳ ಅಧ್ಯಕ್ಷರುಗಳಾದ ನಾಗೇಂದ್ರ ಕೃಷ್ಣರಾಜ್, ರಾಜೇಶ್, ರಮೇಶ್, ಮಹಿಳಾ ಅಧ್ಯಕ್ಷ ಸೌಮ್ಯ ರಾಣಿ ಮುರುಳೀಧರ್, ನಗರದ ತೆಲುಗು ರೆಡ್ಡಿ ಸಂಘದ ಜಿ.ಗುರುಪ್ರಸಾದ್, ಬೋಗಾದಿ ಮಹೇಶ್, ಹೂಟಗಳ್ಳಿ ಶ್ರೀನಿವಾಸ್, ನಾಡನಹಳ್ಳಿ ಮಹೇಶ್, ಸಿದ್ದಲಿಂಗಪುರ ಪ್ರೇಮ್ ಕುಮಾರ್. ಸ್ವಾಭಿಮಾನಿ ಸದಾ ಇನ್ನಿತರರು ಪಾಲ್ಗೊಂಡಿದ್ದರು.



ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ

ಮೈಸೂರು,ಮಾ.3(ಪಿಎಂ)– ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಹೆಬ್ಬಾಳು 2ನೇ ಹಂತದಲ್ಲಿ ಶ್ರೀ ಲಕ್ಷ್ಮೀಕಾಂತ ವಿವಿಧೋದ್ದೇಶ ಸಹಕಾರ ಸಂಘದ ಕಟ್ಟಡ ನಿರ್ಮಾಣ ಹಾಗೂ ಪಡುವಾರಹಳ್ಳಿಯಲ್ಲಿ ಆಟೋ ನಿಲ್ದಾಣದ ಮೇಲ್ಛಾವಣಿ ನಿರ್ಮಾಣ ಕಾಮಗಾರಿಗಳಿಗೆ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಗುರುವಾರ ಭೂಮಿ ಪೂಜೆ ನೆರವೇರಿಸಿದರು.



ಹೆಬ್ಬಾಳು 2ನೇ ಹಂತದಲ್ಲಿರುವ ಶ್ರೀ ಲಕ್ಷ್ಮೀಕಾಂತ ವಿವಿಧೋದ್ದೇಶ ಸಹಕಾರ ಸಂಘದ ನಿವೇಶನದಲ್ಲಿ (ಪಾಲಿಕೆ ವಾರ್ಡ್ ನಂ.1) ಸರ್ಕಾರದ ಅನುದಾನದ 5 ಲಕ್ಷ ರೂ. ವೆಚ್ಚದಲ್ಲಿ ಸಂಘದ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು.

ಪಾಲಿಕೆ ವಾರ್ಡ್ 1ರ ಸದಸ್ಯೆ ಲಕ್ಷ್ಮೀ ಶಿವಣ್ಣ ವಾರ್ಡ್ 22ರ ಸದಸ್ಯೆ ನಮ್ರತಾ ರಮೇಶ್, ನಾಮನಿರ್ದೇಶಿತ ಸದಸ್ಯ ಚಿಕ್ಕವೆಂಕಟು, ಬಿಜೆಪಿ ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪುನೀತ್, ನಗರ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ, ಮಹಿಳಾ ಮೋರ್ಚಾ ಅಧ್ಯಕ್ಷೆ ತನುಜಾ ಮಹೇಶ್, ಮುಖಂಡರಾದ ಕಿರಣ್ ಸುಖಧಾರೆ, ಜಯಪ್ಪ, ಶಿವು, ಛಾಶ್, ಮನು, ಗುರು, ಶರತ್, ಶ್ರೀಧರ್, ಗೀತಾ, ಸೌಮ್ಯ, ಶುಭಂ ಮತ್ತಿತರರು ಹಾಜರಿದ್ದರು.

ಬಳಿಕ ಕ್ಷೇತ್ರದ ವಾರ್ಡ್ 22ರ ವ್ಯಾಪ್ತಿಯ ಹುಣಸೂರು–ಮೈಸೂರು ರಸ್ತೆಯ ಪಡುವಾರಹಳ್ಳಿ ಸಿಗ್ನಲ್ ಬಳಿಯ ಆದಿ ಚುಂಚನ ಗಿರಿ ಹಾಸ್ಟೆಲ್ ಕಾಂಪೌಂಡ್ ಪಕ್ಕದಲ್ಲಿ ಆಟೋ ನಿಲ್ದಾಣದ ಮೇಲ್ಛಾವಣಿ ನಿರ್ಮಾಣದ 5 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಶಾಸಕರು ಭೂಮಿ ಪೂಜೆ ನೆರವೇರಿಸಿದರು. ಬಿಜೆಪಿ ವಾರ್ಡ್ ಅಧ್ಯಕ್ಷ ಮಂಜು ಪಡುವಾರಹಳ್ಳಿ, ಮುಖಂಡರಾದ ಬಸವರಾಜು, ಸಂತೋಷ್, ಸಿ.ಡಿ. ಕುಮಾರ್, ಸ್ವಾಮಿ, ವೇಣು, ಗೋಪಾಲ, ಚೆಲುವ, ಕಾಂತ, ಮರೀಗೌಡ, ಕುಮಾರ್, ಮಹದೇವ, ಚಂದ್ರ, ಛಾಯಾ, ಸುಧಾ ಮತ್ತಿತರರು ಹಾಜರಿದ್ದರು.

ಹೋಟೆಲ್ ಉದ್ಯಮಿ ಹಯವದನ ಆಚಾರ್ ನಿಧನ

ಮೈಸೂರು, ಮಾ.3– ಕರ್ನಾಟಕ ಪ್ರದೇಶ ಹೋಟೆಲು ಸಂಘದ ಪ್ರತಿಷ್ಠಿತ 'ಆತಿಥ್ಯ ರತ್ನ' ಪ್ರಶಸ್ತಿ ಪುರಸ್ಕೃತರಾದ ಮೈಸೂರಿನ ಯಾದವಗಿರಿ ನಿವಾಸಿ ಮತ್ತು ಹೋಟೆಲ್ ಉದ್ಯಮಿಯಾದ ಹಯವದನ ಆಚಾರ್ (76) ಶುಕ್ರವಾರ ನಿಧನರಾದರು. ಮೃತರು ಪತ್ನಿ ವಿಜಯಲಕ್ಷ್ಮೀ, ಪುತ್ರರಾದ ಸುಧೀರ್ ಆಚಾರ್, ಸುಜಯ್ ಆಚಾರ್, ಪುತ್ರಿ ಸರಿತಾ ಶಿವಶಂಕರ್ ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡರು ಸಂತಾಪವನ್ನು ಸೂಚಿಸಿದ್ದಾರೆ. ಮೈಸೂರಿನ ಯಾದವಗಿರಿಯ ಅವರ ಮನೆಯಲ್ಲಿ ನಾಳೆ (ಮಾ.4)ಬೆಳಗ್ಗೆ 9.30ರವರೆಗೂ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಅಂತ್ಯಕ್ರಿಯೆ 10.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಲಿದೆ.



ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಮತದಾನದ ಬಗ್ಗೆ ಅರಿವು



ಮೈಸೂರು, ಮಾ.3–ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ವಿಭಾಗದ ವಿದ್ಯಾರ್ಥಿಗಳಿಗೆ ಮತದಾನ ಕುರಿತು ಜಾಗೃತಿ ಮೂಡಿಸಲಾಯಿತು.

ನಗರದ ದಿಶಾ ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಫೌಂಡೇಶನ್‌ನ ಡಾ. ಸೀತಾರಾಮ್ ಮತ್ತು ಡಾ.ಸುದರ್ಶನ್ ಮತದಾನ ಕುರಿತು ಅರಿವು ಮೂಡಿಸಿದರು.

ಮತದಾನ ಮಾಡುವುದು ಬರಿ ಹಣ ಮತ್ತು ಯಾವುದೇ ಆಮಿಷಕ್ಕೆ ಅಲ್ಲ ಅದು ನಮ್ಮ ಅಧಿಕಾರ ಹಾಗೂ ಹಕ್ಕು. ನಮ್ಮನ್ನು ಪ್ರತಿನಿಧಿಸುವ ಪ್ರತಿನಿಧಿಗಳನ್ನು ನಾವು ಆಯ್ಕೆ ಮಾಡುವ ಪ್ರಕ್ರಿಯೆ. ಪ್ರಜಾಪ್ರಭುತ್ವದಲ್ಲಿ ಇದು ಬಹಳ ಮಹತ್ವವಾದ ಸ್ಥಾನವನ್ನು ಪಡೆದುಕೊಂಡಿದೆ. ಒಂದು ಮತ ಕೂಡ ಎಷ್ಟು ಮುಖ್ಯವಾಗುತ್ತದೆ ಎಂದರೆ ಅದರ ಮೇಲೆ ನಮ್ಮನ್ನು ಪ್ರತಿನಿಧಿಸುವ ಪ್ರತಿನಿಧಿಗಳು ಹಾಗೂ ಸಮಾಜದ ಭವಿಷ್ಯ ನಿಂತಿರುತ್ತದೆ, ನಾವು ಯಾವಾಗಲೂ ಸರ್ಕಾರ ಮತ್ತು ವ್ಯವಸ್ಥೆಯನ್ನು ದೂಷಿಸುತ್ತೇವೆ. ಆದರೆ, ನಾವು ನಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿದ್ದೇವೆಯೇ ಎಂದು ಮೊದಲು ನಾವು ನಮಗೆ ಪ್ರಶ್ನಿಸಿಕೊಳ್ಳಬೇಕಿದೆ ಎಂದು ಸವಿರವಾಗಿ ಮತದಾನದ ಬಗ್ಗೆ ಅರಿವು ಮೂಡಿಸಿದರು.

ಕಾರ್ಯಕ್ರಮದಲ್ಲಿ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎಸ್.ಸಪ್ನ, ದಿಶಾ ಫೌಂಡೇಶನ್‌ನ ಡಾ.ಶ್ರುತಿ, ಪಿಎಚ್‌ಡಿ ಸಂಶೋಧನಾ ವಿದ್ಯಾರ್ಥಿ ಡಾ ರಾಕೇಶ್, ಅತಿಥಿ ಉಪನ್ಯಾಸಕ ಡಾ.ನವೀನ್, ಆಡಳಿತ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಾಳೆ ಸೋಮನಾಥನಗರ ಬಡಾವಣೆಯಲ್ಲಿ ಕಬಿನಿ ಕುಡಿಯುವ ನೀರಿನ ಜಲಧಾರೆ ಪೂಜೆ

ಮೈಸೂರು, ಮಾ. 3– ಸೋಮನಾಥನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಮತ್ತು ಚಂದನವನ ಪಾರ್ಕ್ ಸಮಿತಿ ಸಹಯೋಗದೊಂದಿಗೆ ಮಾ. 5 ರಂದು ಬೆಳಗ್ಗೆ 8 ಗಂಟೆಗೆ ಸೋಮನಾಥನಗರದ ವಾಟರ್ ಟ್ಯಾಂಕ್ ವರ್ಕ್ ಬಳಿ ಸೋಮನಾಥನಗರ ಬಡಾವಣೆಯ ಕಬಿನಿ ಕುಡಿಯುವ ನೀರಿನ ಜಲಧಾರೆ ಪೂಜೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶಾಸಕ ಜಿ.ಟಿ. ದೇವೇಗೌಡ ಗಂಗಾ ಪೂಜೆ ನೆರವೇರಿಸಲಿದ್ದು, ಸೋಮನಾಥನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪುಟ್ಟೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಘದ ಗೌರವ ಅಧ್ಯಕ್ಷ ರಮೇಶ್ ಕಳ್ಳಿಪಾಳ್ಯ ಪ್ರಾಸ್ತಾವಿಕ ನುಡಿಗಳನ್ನಾಡುವರು. ಮುಖ್ಯ ಅತಿಥಿಗಳಾಗಿ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷ ಅಣ್ಣೇಗೌಡ, ಬೋಗಾಧಿ ಪ.ಪಂ. ಮುಖ್ಯಾಧಿಕಾರಿ ಸಿ. ಶ್ಯಾಮಸುಂದರ್, ಕಂದಾಯ ಅಧಿಕಾರಿ ಡಿ.ಎನ್. ವಿಜಯಕುಮಾರ್, ಪಾಲಿಕೆ ಸಹಾಯಕ ಕಾರ್ಯಪಾಲಕ ಅಭಿಯಂತರ ಧನುಷ್ ಭಾಗವಹಿಸುವರು.

ಇದೇ ವೇಳೆ ಬಡಾವಣೆಯ ಸಹಕಾರ ಇಲಾಖೆ ಅಪರ ನಿಬಂಧಕ ಪ್ರಕಾಶ್‌ರಾವ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೆ.ಎಸ್. ಸುಂದರರಾಜು, ಬಡಾವಣೆ ನಿವಾಸಿಗಳಾದ ಬಿ.ಎಸ್. ಮಹದೇವಪ್ಪ ಭಾರದ್ವಾಜ್, ಡಾ. ಪಿ. ಮಾಲೇಗೌಡ, ಡಾ. ಸಿ.ಜಿ. ಕೃತಿಕರಾಜ್ ಅವರನ್ನು ಸನ್ಮಾನಿಸಲಾಗುವುದು.

ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಮಾರಾಟ: ಇಬ್ಬರ ವಿರುದ್ಧ ಕೇಸ್

ಫೋರ್ಜರಿ ದಾಖಲೆ ಆಧರಿಸಿಯೇ ಖಾತೆ ಮಾಡಿ, ಕಂದಾಯ ಕಟ್ಟಿಸಿಕೊಂಡ 'ಮುಡಾ'

ಮೈಸೂರು, ಮಾ.3–ಫೋರ್ಜರಿ ದಾಖಲೆ ಸೃಷ್ಟಿಸಿ ಕೆಪಿಟಿಸಿಎಲ್ ಸಹಾಯಕ ಎಂಜಿನಿಯರ್‌ಗೆ ನಿವೇಶನ ಮಾರಾಟ ಮಾಡಿರುವ ಆರೋಪದ ಮೇರೆಗೆ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದ್ದು, ವಿಚಿತ್ರವೆಂದರೆ ಮುಡಾ ಅಧಿಕಾರಿಗಳು ಪೋರ್ಜರಿ ದಾಖಲೆಗಳನ್ನಾಧರಿಸಿಯೇ ನಿವೇಶನ ಖರೀದಿ ಮಾಡಿದವರಿಗೆ ಖಾತೆ ಮಾಡಿಕೊಟ್ಟು ಬರೋಬ್ಬರಿ ಐದು ವರ್ಷ ಕಾಲ ಕಂದಾಯ ಪಾವತಿಸಿಕೊಂಡಿದ್ದಾರೆ.

ಹನೂರು ತಾಲೂಕು ಕೌದಳ್ಳಿ ಗ್ರಾಮದವರಾಗಿದ್ದು, ರಾಯಚೂರು ಕೆಪಿಟಿಸಿಎಲ್‌ನಲ್ಲಿ ಇಂಜಿನಿಯರ್ ಆಗಿರುವ ಆರ್.ಸೋಮರಾಜು(40) ವಂಚನೆಗೊಳಗಾದವರಾಗಿದ್ದು, ಇದೀಗ ಇವರ ಖಾತೆ ಹಾಗೂ ಕಂದಾಯ ನೋಂದಾವಣೆಯನ್ನು ಮುಡಾ ರದ್ದುಪಡಿಸಿದ ಹಿನ್ನೆಲೆಯಲ್ಲಿ ಅವರು ತಮಗೆ ನಿವೇಶನ ಮಾರಾಟ ಮಾಡಿದ ಮೈಸೂರಿನ ಖಿಲ್ಲೆ ಮೊಹಲ್ಲಾದ ಎಂ.ವಿ. ಗಣೇಶ್ ಬಾಬು ಹಾಗೂ ಮಧ್ಯವರ್ತಿಯಾಗಿದ್ದ ಶಾರದಾದೇವಿ ನಗರದ ರಾಮಗೋಪಾಲ್ ವಿರುದ್ಧ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ವಿವರ: ಎಂ.ವಿ.ಗಣೇಶ್ ಬಾಬು ಎಂಬುವರು ಬೋಗಾದಿ ಸರ್ವೆ ನಂ.268/4 ಮತ್ತು 268/5ರ ಒಟ್ಟು 4 ಎಕರೆ ವಿಸ್ತೀರ್ಣದಲ್ಲಿ ಬಡಾವಣೆ ನಿರ್ಮಿಸಿದ್ದರು ಎಂದು ಹೇಳಲಾಗಿದ್ದು, ಅಲ್ಲಿನ ನಿವೇಶನ ಸಂಖ್ಯೆ 50 ಅನ್ನು ಖರೀದಿಸುವಂತೆ ರಾಮಗೋಪಾಲ್ ಅವರು ಎಂಜಿನಿಯರ್ ಸೋಮರಾಜು ಅವರಿಗೆ ತಿಳಿಸಿದ್ದಾರೆ. ನಿವೇಶನ ಕಾನೂನುಬದ್ಧವಾಗಿದ್ದು, ಮುಡಾದಿಂದ ಅನುಮೋದನೆ ಪಡೆದಿದೆ ಎಂದು ಅವರು ತಿಳಿಸಿದ ಹಿನ್ನೆಲೆಯಲ್ಲಿ ಸೋಮರಾಜು 2015ರ ಜ.14ರಂದು 7.60 ಲಕ್ಷ ರೂ. ನೀಡಿ ನೋಂದಾವಣಿ ಮಾಡಿಸಿಕೊಂಡಿದ್ದು, ನಂತರ ಬಡಾವಣೆ ಅಭಿವೃದ್ಧಿಗಾಗಿ 5.50 ಲಕ್ಷ ರೂ. ನೀಡಿ, ಒಟ್ಟಾರೆ 13.10 ಲಕ್ಷ ರೂ.ಗಳಿಗೆ ನಿವೇಶನವನ್ನು ಖರೀದಿ ಮಾಡಿದ್ದಾರೆ.

ಈ ವೇಳೆ ಎಂ.ವಿ.ಗಣೇಶ್ ಬಾಬು ನೀಡಿದ ಬಡಾವಣೆ ನಕ್ಷೆ, ಅಳತೆಪಟ್ಟಿ (ಸಿಡಿ) ಇತರೆ ದಾಖಲೆಗಳೊಂದಿಗೆ ಕ್ರಯಪತ್ರವನ್ನು ಲಗತ್ತಿಸಿ ಖಾತೆ ಬದಲಾವಣೆಗಾಗಿ ಮುಡಾ ಕಚೇರಿಗೆ ಸೋಮರಾಜು ಅರ್ಜಿ ಸಲ್ಲಿಸಿದ್ದರು. ದಾಖಲೆಗಳನ್ನು ಪರಿಶೀಲಿಸಿದ ಮುಡಾ ಅಧಿಕಾರಿಗಳು 2015ರ ಆ.3ರಂದು ಸೋಮರಾಜು ಅವರ ಹೆಸರಿಗೆ ನಿವೇಶನದ ಖಾತೆ ಮಾಡಿಕೊಟ್ಟು ಕಂದಾಯವನ್ನು ನಿಗದಿಪಡಿಸಿದ್ದಾರೆ. ಆಗಿನಿಂದಲೂ ಸೋಮರಾಜು ತಾವು ಖರೀದಿಸಿದ ನಿವೇಶನಕ್ಕೆ ಮುಡಾಗೆ ಕಂದಾಯ ಪಾವತಿಸುತ್ತಾ ಬಂದಿದ್ದಾರೆ.

ಈ ಮಧ್ಯೆ 2022ರ ಅ.1ರಂದು ಎಂ.ವಿ.ಗಣೇಶ್ ಬಾಬು ಅಳತೆಪಟ್ಟಿ (ಸಿಡಿ)ಯನ್ನು ಪೋರ್ಜರಿ ಮಾಡಿ ನಿವೇಶನ ಮಾರಾಟ ಮಾಡಿರುವುದು ಕಾನೂನುಬಾಹಿರ ಎಂದು ಮುಡಾ ಅಧಿಕಾರಿಗಳು ನಿವೇಶನ ಖರೀದಿಸಿದ್ದ ಸೋಮರಾಜು ಅವರಿಗೆ ನೋಟೀಸ್ ಜಾರಿ ಮಾಡಿದ್ದಾರೆ. ಈ ನೋಟೀಸ್‌ಗೆ ಉತ್ತರಿಸಿದ್ದ ಸೋಮರಾಜು, ಈ ಪ್ರಕರಣದಲ್ಲಿ ತನ್ನದೇನೂ ತಪ್ಪಿಲ್ಲ. ಸರ್ಕಾರಕ್ಕೆ ಮುದ್ರಾಂಕ ಶುಲ್ಕ ಕಟ್ಟಿ ನಿವೇಶನವನ್ನು ನೋಂದಾವಣೆ ಮಾಡಿಸಿಕೊಂಡಿದ್ದೇನೆ. ಎಂ.ವಿ.ಗಣೇಶ್ ಬಾಬು ನೀಡಿದ್ದ ಸಿಡಿ ಆಧಾರದ ಮೇರೆಗೆ ಮುಡಾ ನನಗೆ ಖಾತೆ ವರ್ಗಾವಣೆ ಮಾಡಿಕೊಟ್ಟಿದೆ. ಕಾಲ ಕಾಲಕ್ಕೆ ಕಂದಾಯ ವಗೈರೆಗಳನ್ನೂ ಕೂಡ ಪಾವತಿಸುತ್ತಾ ಬಂದಿದ್ದೇನೆ ಎಂದು ನೋಟೀಸ್‌ಗೆ ಉತ್ತರಿಸಿದ್ದರು. ಆದರೂ 2023ರ ಜ.5ರಂದು ಮುಡಾ ಅಧಿಕಾರಿಗಳು ನಿವೇಶನದ ಕಂದಾಯ ನೋಂದಾವಣೆಯನ್ನು ರದ್ದುಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸೋಮರಾಜು ತನಗೆ ನಿವೇಶನ ಮಾರಾಟ ಮಾಡಿದ ಎಂ.ವಿ.ಗಣೇಶ್ ಬಾಬು ಮತ್ತು ಮಧ್ಯವರ್ತಿ ರಾಮಗೋಪಾಲ್ ವಿರುದ್ಧ ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಟೆಲಿಕಾಮ್ ಲೇಔಟ್ 30x40 ಸೈಟು N/F @ Rs. 25 ಲಕ್ಷ
ತಕ್ಷಣ ಮನೆ ಕಟ್ಟಬಹುದು, ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರೋಡ್, ಮೈಸೂರು
9538583377

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್ ವೈಸರ್ – PUC Pass / Fail
2) ಸೆಕ್ಯೂರಿಟಿ ಗಾರ್ಡ್ಸ್ – SSLC Pass / Fail
3) ಸೆಕ್ಯೂರಿಟಿ ಮ್ಯಾನೇಜರ್ – Any Degree (Marketing)
ಸೆಕ್ಯೂರಿಟಿ ಫೀಲ್ಡ್‌ನಲ್ಲಿ 02 ವರ್ಷ ಅನುಭವ ಹೊಂದಿರಬೇಕು. ಸಂಪರ್ಕಿಸಿ:
9844235981
9739199355

ಮನೆ ಮಾರಾಟಕ್ಕಿದೆ
ಅಳತೆ 11x40 ರಲ್ಲಿ ಆಲ್ಟ್ರೇಷನ್ ಆಗಿರುವ ಶುದ್ಧ ಕ್ರಯಪತ್ರವುಳ್ಳ ಪಶ್ಚಿಮ ದಿಕ್ಕಿನ ಶೀಟಿನ ಮನೆ ಬನ್ನಿಮಂಟಪ ಹುಡ್ಕೋದಲ್ಲಿ ಮಾರಾಟಕ್ಕಿದೆ. ಬೆಲೆ : 24 ಲಕ್ಷ. (ಸ್ವಲ್ಪ ಮಟ್ಟಿನ ನೆಗೋಷಿಯೇಶನ್ ಇದೆ)
9141050266
9343242054

ಮುಡಾ ಸೈಟು ಬೇಕಾಗಿದೆ
ಟಿ.ನರಸೀಪುರ ಅಥವಾ ಬನ್ನೂರು ರಸ್ತೆಗೆ ಸಮೀಪದಲ್ಲಿರುವ 30x40 E/N Face ಹೊಂದಿರುವ ಮುಡಾ ಸೈಟು ಬೇಕಾಗಿದೆ. ಸಂಪರ್ಕಿಸಿ. ರಾಜು:
8105306507

ತಕ್ಷಣ ಡ್ರೈವರ್‌ಗಳು ಬೇಕಾಗಿದ್ದಾರೆ
Ashoka Leyland (Dost)
9538555511
8884666543

HOTEL ITEMS FOR SALE / RENT
Running Hotel Near Trinethra Circle, Gokulam 3rd Stage.
9342125540

SPACIOUS 2 BHK HOUSE AVAILABLE FOR RENT In Kanakanagar, Near NPS School
Specifications: 1. East Facing Door (2) Modular Kitchen (3) Own Borewell (4) Spacious parking (5) CCTV, Solar , Gas Geyser (6) 2 Bedroom with Attached bathroom
9008328891, 9606272959, 9945458956

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed. ವಿವಾಹ ನೋಂದಣಿಗೆ ಕರೆ ಮಾಡಿ (2nd Marriage also)
9164743059

ಜಮೀನು ಮಾರಾಟಕ್ಕಿದೆ
1 ಎಕರೆ, ಲಲಿತಮಹಲ್ ಪ್ಯಾಲೇಸ್ ಹತ್ತಿರ, (ದಯವಿಟ್ಟು ಖರೀದಿದಾರರು ಸಂಪರ್ಕಿಸಿ)
8618572064

COMMERCIAL SPACE FOR RENT
G Floor - 1700 Sq.ft Area
F First - 2250 Sq.ft Area
Location : IPC Nagar Police Layout
Call : 9535216060, 7899559090
* Cellar also available for Rent
* Lift Facility Available

CONSTRUCTION AT MYSORE
Are you Planning for Construction of Residential or Commercial Building ? We have Experienced Team to take care of your dreams
Call : 9535216060, 7899559090
* Loan Facilities Available
* Home Interiors are also Available

Website DESIGNING
Starting From Rs. 5000
8867774447

S.K. Constructions
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Loan ಸಹಿತ ಹೊಸ ಮನೆ ಕಟ್ಟಿಕೊಡುತ್ತೇವೆ. Plan, 3D Elevation ಉಚಿತವಾಗಿ ಮಾಡಿಕೊಡುತ್ತೇವೆ.
Mob: 9620528490

HOUSE FOR RENT
2BHK (Broker excuse) First Floor, Saraswathipuram (Near JSS Womens College,) Mysore
9342593130

10 ಲಕ್ಷ ಪಾವತಿಸಿ MUDA APPROVED ಸೈಟ್ BOOK ಮಾಡಿ
30x40, 30x50, 40x60, 22 Acres 346 Sites, Gated Community, L&T & Infosys Just 1 km. ಹೆಬ್ಬಾಳು Ring Road 3km. Bank Loan ಸೌಲಭ್ಯವಿದೆ.
7892603991

ಮಾಂಗಲ್ಯಂ ವಧು ವರರ ಸಂಗಮ
ಕುರುಬ, ನಾಯಕ, ತೆಲುಗು ಬಣಜಿಗ, ತೆಲುಗು ಆರ್ಯ ವೈಶ್ಯ, ಲಿಂಗಾಯತ, ಬ್ರಾಹ್ಮಣ ವಧು–ವರರ ಮಾಹಿತಿಗಾಗಿ ಸಂಪರ್ಕಿಸಿ. ವಿಧುರ, ವಿಧವೆಯರು, ಎರಡನೇ ವಿವಾಹ ಬಯಸುವವರೂ ಸಂಪರ್ಕಿಸಬಹುದು.
8296514367

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

SITES AVAILABLE
20 x 30 26.20 within Ring Road
30 X 40 E/F - 18 Lakhs, Hunsur Road
40 X 60 N/F - 36 Lakhs, Hunsur Road
40 X 60 N/F - 48 Lakhs, Shanthaveri Gopal Gowda Nagar
98800 65122 / 77956 09173

HOUSE FOR RENT
30x40 ಸಾರಿಗೆ ನಗರ, ಶ್ರೀರಾಂಪುರ, 3ನೇ ಹಂತ, ಪಾರ್ಕಿಂಗ್ ಸೌಲಭ್ಯವಿದೆ.
9731931591
9448720100

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು, ಕಡಕೊಳ ಏರಿಯಾದ ಟಿವಿಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಬಳ: 15,600/– (8Hours, 26 days), ವಯೋಮಿತಿ 45 ವರ್ಷದೊಳಗೆ, ವಿದ್ಯಾರ್ಹತೆ SSLC ಮೇಲ್ಪಟ್ಟು, ESI, PF ಮತ್ತು ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9538567819 / 9620777819

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಸೈಟು ಮಾರಾಟಕ್ಕಿದೆ ಮೂಡ ಅಪ್ರೂವ್ಡ್
30x40 - East, North, West
40x60 - N/F, 40x60 - W/F
30x60 - North East Corner
58x60 - North East Corner ರಿಂಗ್ ರೋಡ್ ಹತ್ತಿರ ಯುನಿವರ್ಸಿಟಿ ಲೇಔಟ್ ಎದುರು, 30x50 - E/F ATME Engineering ಕಾಲೇಜ್ ಪಕ್ಕ, 40x60 - East Face ವರುಣ ಹತ್ತಿರ
9900372792

SC ಆದಿ ಕರ್ನಾಟಕ (ಬಲಗೈ)
36 ವರ್ಷದ MBBS, MD ಮಾಡಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿರುವ ಸುಂದರ ವಧುವಿಗೆ MBBS, MS, MD or BE, M.Tech ಮಾಡಿರುವ ವರ ಬೇಕಾಗಿದ್ದಾರೆ. ಸಂಪರ್ಕಿಸಿ: "ನವಿಲೂರು ರಂಗಸ್ವಾಮಿ" ಮೈಸೂರು ಸಿಟಿ, ವಧು ವರರ ಮಾಹಿತಿ ಕೇಂದ್ರ, ಎನ್.ಆರ್.ಮೊಹಲ್ಲಾ, ಮೈಸೂರು.
8711974172

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಮತ್ತು ಹೆಬ್ಬಾಳ್ ಏರಿಯಾದಲ್ಲಿ ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: Supervisor 18,500+W/o (8hrs), ಗಾರ್ಡ್: 17,000+W/o (8hrs), ಸಂಪರ್ಕಿಸಬೇಕಾದ ಸಂಖ್ಯೆಗಳು
9880727819 / 9620667819

HOME LOAN / MORTGAGE LOANS
House, Site, Commercial site and Buildings School - Colleges and Educational Trusts and Function Hall Loans. MUDA, KHB, Nagarasabhe, Purasabhe Katha and 9 & 11a, 11B Revenue Property and Ext. Loan Services. Unnathi Financial Services. Raghavendra :
9986977667

ಬೋಳು ತಲೆಯ ಸಮಸ್ಯೆಯೇ?

ಕಿಡೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

HOUSE FOR RENT
2 BHK house with car garage, parking area and garden in the front is available for Vegetarians only, near Olive Residency, Vijayanagar 2nd Stage, Mysore.
Contact: 9986843250

ಹೊಸ ಮನೆ ಮಾರಾಟಕ್ಕಿದೆ
ಮೈಸೂರಿನ ಸಿದ್ಧಿ ವಿನಾಯಕ ಬಡಾವಣೆ ಡಾ|| ರಾಜ್‌ಕುಮಾರ್ ರೋಡ್, ಜೆ.ಎಸ್.ಎಸ್ ಪಬ್ಲಿಕ್ ಸ್ಕೂಲ್ ಹಿಂಭಾಗ, 1560 ಅಡಿ ಅಳತೆಯ ನಿವೇಶನದಲ್ಲಿ ನೂತನವಾಗಿ ಕಟ್ಟಿರುವ ನೆಲ ಅಂತಸ್ತು (2BHK) ಹಾಗೂ ಮೊದಲ (2BHK) ಅಂತಸ್ತಿನ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ. ಶಿವಕುಮಾರ್.ಎಂ.ಎಸ್
9448275540 / 9449823540

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗರು / ಹುಡುಗಿಯರು, ನೋ ಫೋನ್ ಎನ್‌ಕ್ವೆರಿ.
Vandana Fashions
#51, 7th Main, 5th Cross, Saraswathipuram, Mysore.
7676761007

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಮತ್ತು ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಮಹಿಳೆಯರು / ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 8,000 ದಿಂದ 10,000 ದವರೆಗೆ (ಅನುಭವದ ಆಧಾರದ ಮೇಲೆ) ಸಮಯ: ಬೆಳಿಗ್ಗೆ 09.30 ರಿಂದ ರಾತ್ರಿ 9.00 ರವರೆಗೆ. ಸ್ಥಳ: ಹೆಬ್ಬಾಳ್, ಅಗ್ರಹಾರ, ನಜರ್‌ಬಾದ್ ಹಾಗೂ ಕೆ.ಜಿ.ಕೊಪ್ಪಲ್, ಮೈಸೂರು. ಸ್ಥಳೀಯರಿಗೆ ಆದ್ಯತೆ. ಸಂಪರ್ಕಿಸಿ:
9986322444 / 9986311444

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

SITE FOR SALE
30x50 East face site sale at University Layout.
Call: 98802 73834

ಬೇಕಾಗಿದ್ದಾರೆ
ನ್ಯೂ ಶಾರದ ಅನೆಕ್ಸ್ ವಿಕ್ರಾಂತ್ ರೇಡಿಯಲ್ ಪ್ಲಾಂಟ್ ಎದುರು ನಿಯರ್ ರಿಂಗ್ ರೋಡ್ 1)ಕ್ಯಾಪ್ಟನ್ 2)ಸ್ಟೀವರ್ಡ್, 3)ಹೆಡ್ ಕುಕ್ 4)ಕ್ಲೀನರ್‌ಅನುಭವ ಉಳ್ಳವರಿಗೆ ಮಾತ್ರ ಆದ್ಯತೆ, ಸಂಪರ್ಕಿಸಿ:-
+9198801 85785

ಕೆಲಸಕ್ಕೆ ಬೇಕಾಗಿದ್ದಾರೆ
ಸೆರಾಕೇರ ಮೈಸೂರು ಹೆಲ್ತ್ ಸೆಂಟರ್, ವಿದ್ಯಾರ್ಹತೆ: 2nd PUC & ಯಾವುದೇ ಪದವಿ (ಹುಡುಗಿಯರು, ವಯಸ್ಸು: 18 ರಿಂದ 30 ವರ್ಷ) ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು.
8296366894
7996011692

ಅನಾಥರಿಗೆ ಕೆಲಸ
ಅಡುಗೆ ಕುರುಕಲು ತಿಂಡಿ, ಟೀ – ಕಾಫಿ ಮಾಡಲು ಮತ್ತು ಆಸ್ಪತ್ರೆ / ಫ್ಯಾಕ್ಟರಿಗಳಿಗೆ ಮಾರಾಟ ಮಾಡಲು ವಿಧವೆ – ವಿಧುರ – ಅನಾಥರು ಬೇಕಾಗಿದ್ದಾರೆ. (ಊಟ – ವಸತಿ ಇರುತ್ತದೆ)
7406847717

SITE FOR SALE
40x60 North Road facing site with clear documents Mysore-Madikeri Main Road, near Old MMC Factory. Price Rs. 53 Lakhs. (BROKERS EXCUSE).
8310008208, 9379888558

ಕಳೆದಿದೆ
ಪುಲ್ಲಾಂತೊಲಿಲ್ ಪುರುಷೋತ್ತಮನ್, ನಂ. 232, ಮೇಟಗಳ್ಳಿ ಬಡಾವಣೆ, ದೇವರಾಜ ಮೊಹಲ್ಲಾ, ಮೈಸೂರು–570 016, ಇಲ್ಲಿ ವಾಸವಾಗಿದ್ದು, ನನ್ನ ಮನೆಯ ಒರಿಜಿನಲ್ ಅಲಾಟ್‌ಮೆಂಟ್ ಲೆಟರ್ (ದಿನಾಂಕ 22–06–1973), ಸ್ವಾಧೀನ ಪತ್ರ (ದಿನಾಂಕ 10–03–1975), ಒರಿಜಿನಲ್ ಕ್ರಯ ಪತ್ರ (ಸಿಐಟಿಬಿ ಮೈಸೂರು ಇವರಿಂದ ಸಿ. ಚಿನ್ನಪ್ಪ ದಿನಾಂಕ 22–02–1975) ಗಳು ಕಳೆದುಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ:
Mob: 7306777873

ಉದ್ಯೋಗವಕಾಶ
ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ವಯೋವೃದ್ಧರೂ, ರೋಗಿಗಳು ಮತ್ತು ವಿಶೇಷ ಚೇತನರನ್ನು ನೋಡಿಕೊಳ್ಳಲು ಶ್ರದ್ಧೆ, ನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಲು ಯುವಕ, ಯುವತಿಯರು ಮತ್ತು ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ವಿದ್ಯಾರ್ಹತೆ 7 / 10 / PUC, ANM, GNM ಪಾಸ್ / ಫೇಲ್. ತಿಂಗಳ ಸಂಬಳ Rs. 9000 to Rs. 18,000.
Mob: 9606514441, 0821-4242351, 7349278501

ನಿವೃತ್ತ ನೌಕರರಿಗೆ ಉದ್ಯೋಗ ಅವಕಾಶದ ಸೆಮಿನಾರ್
ಕೇಂದ್ರ / ರಾಜ್ಯ / ಸ್ವಯಂ ನಿವೃತ್ತ ಸರಕಾರಿ ನೌಕರರಿಗೆ / ಸಾರ್ವಜನಿಕ ಖಾಸಗಿ ಸಂಸ್ಥೆಯ ನೌಕರರಿಗೆ ಉದ್ಯೋಗ ಅವಕಾಶದ ಸೆಮಿನಾರ್ ನಿರ್ದಿಷ್ಟ ಸಂಬಳ ಮತ್ತು ಇತರೆ ಭತ್ಯೆಗಳು ಲಭ್ಯವಿರುತ್ತದೆ ಈ ಕೆಳಕಂಡ ದಾಖಲಾತಿಗಳು ಕಡ್ಡಾಯ. (1) ವಿದ್ಯಾರ್ಹತೆ SSLC ಮೇಲ್ಪಟ್ಟು, (2) ಪಾನ್ ಕಾರ್ಡ್, (3) ಫೋಟೋ 2, (4) ಆಧಾರ್ ಕಾರ್ಡ್, (5) ಬ್ಯಾಂಕ್ ಪಾಸ್‌ಬುಕ್ (1st Page) Age 35 years to 66 years, ಸೆಮಿನಾರ್ ನಡೆಯುವ ಸ್ಥಳ, ದಿನಾಂಕ ಮತ್ತು ಗಂಟೆಗೆ ಸಂಪರ್ಕಿಸಿ. Followed by lunch.
9449068132, 9480055885

ಬೇಕಾಗಿದ್ದಾರೆ
ಸ್ಟಿಕ್ಕರ್ ಪೇಸ್ಟ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ ಸಂಬಳ 10000/-
Ph.9380142144
ಶಿವರಾಂಪೇಟೆ, ಮೈಸೂರು

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಆಧುನಿಕ ವಿನ್ಯಾಸದ ಹೊಗೆ ರಹಿತ ಸೂರ್ಯ ಸೌದೆ ಒಲೆ ಗೃಹಬಳಕೆಗೆ ಹಾಗೂ ಹೋಟೆಲ್ ಕ್ಯಾಟರಿಂಗ್‌ಗಳಿಗೆ

ಕಡಿಮೆ ಖರ್ಚಿನಲ್ಲಿ ಬಳಸಬಹುದಾದ ಸೌದೆ ಒಲೆಗಳು ದೊರೆಯುತ್ತದೆ.
7019660686 / 8217329938

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

Sudarshan Saur SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳ್‌ನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 12,000/ pm
9886430901

FOR SALE
New Apartment flat 1100 Sqft, 2BHK, North Face Car Parking and lift facility available, M Block, Near Shanthi Sagar Complex, Kuvempunagar, Mysuru. for More Details Contact:
9449601309

ಕೇರಳ ಶ್ರೀಭಗವತಿ ಮಹಾಮಾಂತ್ರಿಕ ಜ್ಯೋತಿಷ್ಯರು ಪಂಡಿತ್ ಎಸ್.ಮಣಿಕಂಠನ್
ಮೊ. 9480743991
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು, ನಿಮ್ಮ ಸಮಸ್ಯೆಗಳಾದ ಪ್ರೇಮ ವಿವಾಹ, ಪತಿ – ಪತ್ನಿ ಕಲಹ, ವ್ಯಾಪಾರ, ಡೈವರ್ಸ್, ಸಾಲಬಾಧೆ ಶತ್ರುಕಾಟ, ಲೈಂಗಿಕ ಸಮಸ್ಯೆ, ಸಂತಾನ ಫಲ, ಮದುವೆ ಕಾರ್ಯದಲ್ಲಿ ವಿಘ್ನ, ಅತ್ತೆ ಸೊಸೆ, ಕಲಹ ನಿಮ್ಮ ಮನದಾಳದ ಯಾವುದೇ ಗುಪ್ತ ಸಮಸ್ಯೆ ಇದ್ದರೆ ಜೀವನದಲ್ಲಿ ಜಿಗುಪ್ಸೆ ಹೊಂದಿದ್ದರೆ ಕೂಡಲೇ ಸಂಪರ್ಕಿಸಿ 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ನಿಮ್ಮ ಸಮಸ್ಯೆಗಳಿಗೆ ಫೋನಿನ ಮೂಲಕ ಸಂಪರ್ಕಿಸಿ. ವಿಳಾಸ: ಅಶೋಕ ರೋಡ್, ಈಸ್ಟ್ ಕ್ರಾಸ್ 36 ಮೈಸೂರು.

ತಕ್ಷಣ ಬೇಕಾಗಿದ್ದಾರೆ
RBI ಮೇಟಗಳ್ಳಿ ಮತ್ತು ಹೆಬ್ಬಾಳು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಬಳ: 15,500/– (8Hours, 26 days), ವಿದ್ಯಾರ್ಹತೆ: SSLC ಮೇಲ್ಪಟ್ಟು, ವಯೋಮಿತಿ : 45 ವರ್ಷದೊಳಗೆ. ESI, PF ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು
9620777819 / 9620667819

HOUSE FOR RENT
Newly Constructed 30x40 Semi Furnished 2BHK House with attached bathroom and all modern amenities for Rent in Railwaylayout, Bogadi, Broker's Excuse. Contact:
8861953636 / 9481261253

SITES FOR SALE
Near Ramanahalli, Mahadevapura Road, Mysore. 30x40, 30x50, 40x60, 40x75. Features:- Gated Community, Swimming Pool, Club House, Gym. Contact No.:
8660834347
9945592753

ಪಿ ಜಿ ಬಾಡಿಗೆಗಿದೆ
1) ಮೈಸೂರಿನ ಅಪಲೋ ಆಸ್ಪತ್ರೆ ರಸ್ತೆಯಲ್ಲಿ ಪೂರ್ವಾಭಿಮುಖವಾಗಿ 10x20 ಅಳತೆಯ 9 ರೂಂವುಳ್ಳ (35 ಜನರಿಗೆ) ಎಲ್ಲಾ ಸಲಕರಣೆ ಹಾಗೂ ಅಡುಗೆ ಸಿಬ್ಬಂದಿ ಸಮೇತ ಬಾಡಿಗೆಗಿದೆ.
2) ಅವಿವಾಹಿತ ಸಸ್ಯಹಾರಿ ವ್ಯಕ್ತಿಗೆ ರೂ.2000/– ದಲ್ಲಿ 1 ರೂಂ, ಅಗ್ರಹಾರ, ಲಕ್ಷ್ಮಿಪುರ, ಕೆ.ಎಂ.ಪುರ, ದೇವರಾಜದಲ್ಲಿ ಬಾಡಿಗೆಗೆ ಬೇಕಾಗಿದೆ.
8197609290

ಜಮೀನು ಮಾರಾಟಕ್ಕಿದೆ
ಪಿರಿಯಾಪಟ್ಟಣ ಟೌನ್‌ನಿಂದ ಸಿದ್ದಾಪುರ ಮಾರ್ಗವಾಗಿ ಮಡಿಕೇರಿ ಮೈನ್ ರೋಡ್ ಟೌನ್‌ನಿಂದ 2 ಕಿ.ಮೀ ಒಳಗೆ 2 ಎಕರೆ ಕಮರ್ಷಿಯಲ್ ಸ್ವತ್ತು (Multipurpose) ತಕ್ಷಣದಲ್ಲಿ ಮಾರಾಟಕ್ಕೆ ಇದೆ.
9611881603

FULLY FURNISHED COMMERCIAL SPACE FOR RENT / LEASE
600 Sq.ft (Suitable for Showrooms) @ B.N.Street, Mandi Mohalla, Mysuru
6363210535

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (Cold Pressed) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಂಯೋ – ನೀಮ್
ನಂ.203, ಬನ್ನಿಮಂಟಪ ಬಡಾವಣೆ, ಮೈಸೂರು – 570015
8088887802

ಬೇಕಾಗಿದ್ದಾರೆ
(AAL) ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC and ITI (Any Trade)
7019380847 / 7090309148
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC and PUC
8105651601 / 6362491336

WANTED
1) ITI, Diploma or Mechanical Male candidate for factory machine operator, Fresher or one Two year's Experience.
2) Accountant Male or Female candidate with compulsory Tally Knowledge. Fresher or Experienced. Contact
9591511227 / 9448056492
Send resume to manas_industries@outlook.com

PREMIUM RESIDENTIAL LAYOUT VINYAS "GREEN VALLEY"
MUDA Approved KRS Bypass Road, Yelwala, Mysore. 30x50 - odd Sites
9980628991
9964441122

SITE FOR SALE
26x28 North Face Siddhalingeshwara Layout Bogadhi 2nd Stage Near Nirmithi Kendra
Rate : 42 Lakhs
8197997137

SITE FOR RENT
4000 Sqft Vacant Site Ring Road Face University Layout Shrirampura
9900349987

ಬೇಕಾಗಿದ್ದಾರೆ WANTED
ಮೈಸೂರಿನಲ್ಲಿ ಕೆ.ಡಿ.ರೋಡ್‌ನಲ್ಲಿ ಇರುವ ಶುದ್ಧ ಸಸ್ಯಾಹರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ, (1) ಅಸಿಸ್ಟೆಂಟ್ ಕುಕ್ (ಸಹಾಯಕ ಕುಕ್), (2) ಕೌಂಟರ್– ಪಾರ್ಸೆಲ್ (Counter, Parcel) ಮತ್ತು (3) ಸಪ್ಲೈಯರ್, ವೈಟರ್ (Supplier, Waiter), (4) ಟೀ ಕಾಫಿಗೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗೂ ಉತ್ತಮ ಸೌಲಭ್ಯಗಳನ್ನು (ESI, PF) ನೀಡಲಾಗುತ್ತದೆ. ಸಂಪರ್ಕಿಸಿ:
8884066266

ಬೇಕಾಗಿದ್ದಾರೆ
ಮೈಸೂರಿನ ಸಸ್ಯಹಾರಿ ಹೋಟೆಲ್ ಒಂದಕ್ಕೆ
* ಅಡುಗೆ ಭಟ್ಟರು (ಸೌತ್) –2 (5–10 ವರ್ಷ)
* ಕೌಂಟರ್ ಬಾಯ್ – 4
* ಆಲ್‌ರೌಂಡರ್ –1
* ದೋಸೆ ಭಟ್ಟರು – 1
9945059645

ಬೇಕಾಗಿದ್ದಾರೆ
ಮೈಸೂರು ಕೂರ್ಗಳ್ಳಿ ಕೈಗಾರಿಕಾ ಪ್ರದೇಶ ಇಲ್ಲಿ ಉನ್ನತ ಕಂಪನಿಗಳಲ್ಲಿ ಹಾಗೂ ತಾಂಡುಪುರ, ಶ್ರೀರಂಗಪಟ್ಟಣ ಹೋಟೆಲ್, ರೆಸಾರ್ಟ್‌ಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ, ಹೌಸ್‌ಕೀಪಿಂಗ್, ಸಹಾಯಕರು ಬೇಕಾಗಿದ್ದಾರೆ. 8th, 9th, 10th, PUC, Any Degree (ITI, Diploma, B.Com) ಪುರುಷರು / ಮಹಿಳೆಯರು. (ESI, PF). Networking Field Officer / Marketing Executive. ಫೀಲ್ಡ್ ಆಫೀಸರ್ (ಪುರುಷರು / ಮಹಿಳೆಯರು) ಬೇಕಾಗಿದ್ದಾರೆ. ಸಂಪರ್ಕಿಸಿ:
9036461347 / 8296280922

ಮನೆ ಮಾರಾಟಕ್ಕಿದೆ
25x30 ಅಳತೆಯ 4 ಬೆಡ್ ರೂಂವುಳ್ಳ ಡೂಪ್ಲೆಕ್ಸ್ ಮನೆ ಕಾರ್ನರ್, ಇಂಡಿಪೆಂಡೆಂಟ್ ಮತ್ತು ಪೂರ್ವ ದಿಕ್ಕಿನ ಮನೆ #86, ಎ ಬ್ಲಾಕ್, 3ನೇ ತಿರುವು, 3ನೇ ಹಂತ, ಕನಕದಾಸನಗರ (ದಟ್ಟಗಳ್ಳಿ) ಮೈಸೂರು.
9611881603

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ.
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.

40X60 Ft SITE FOR SALE
Near Ring Road, Vijayanagar 4th Stage
7899214181

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು ವಿಧುರರು ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಡಾ.ಗುರೂಜಿ ಮೈಸೂರು.
9448229184
7899625268

ಬೇಕಾಗಿದ್ದಾರೆ
ವಿನಾಯಕ ಟ್ರಾಕ್ಟರ್ಸ್, ಮೈಸೂರು, ಜಾನ್ ಡೀರ್ ಟ್ರ್ಯಾಕ್ಟರ್ಸ್ ಅಧಿಕೃತ ಡೀಲರ್ ಟೆಕ್ನಿಷಿಯನ್– 05 ಪುರುಷರು ಮಾತ್ರ ಫೀಲ್ಡ್ ಆಫೀಸರ್ – 05, ಪುರುಷ ಮಾತ್ರ
9844269405
9743502602

ಮನೆ ಭೋಗ್ಯಕ್ಕಿದೆ
ಬಸವೇಶ್ವರ ನಗರ (ಶಾರದದೇವಿ ನಗರ) ನ್ಯೂ ಕಾಂತರಾಜ ಅರಸ್ ರಸ್ತೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಎದುರು ಉತ್ತರಾಭಿಮುಖವಾಗಿರುವ 2BHK ಮನೆ ಮೊದಲ ಮಹಡಿಯಲ್ಲಿ ಭೋಗ್ಯಕ್ಕೆ ಲಭ್ಯವಿದೆ. ಸಂಪರ್ಕಿಸಿ:
9448679146
7483824007

ಮನೆ ಮಾರಾಟಕ್ಕಿದೆ
20x30 NF ಶ್ರೀರಾಂಪುರ (Near Naidu Store) Workshop Near, ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9141915294 / 9379366388

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 12,000 ದಿಂದ 18,000) (ESI, PF ಸೌಲಭ್ಯ ಇರುತ್ತದೆ)
9845011609 / 7760043596

ಮುಡಾ ಸೈಟ್ ಮಾರಾಟಕ್ಕಿದೆ
ಈಸ್ಟ್ ಫೇಸಿಂಗ್, 24 ಲಕ್ಷ 30x40
9342123373

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ರಾಜಕೀಯ ಪಕ್ಷದ ಪ್ರತಿನಿಧಿಗಳು, ಮಾಧ್ಯಮದವರಿಗೆ ವಿದ್ಯುನ್ಮಾನ ಮತಯಂತ್ರಗಳ ಕಾರ್ಯವೈಖರಿ ಪ್ರಾತ್ಯಕ್ಷಿಕೆ

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರರಿಂದ ವಿವರಣೆ



ಮೈಸೂರು, ಮಾ.3(ಎಸ್‌ಬಿಡಿ)– ರಾಜ್ಯ ವಿಧಾನ ಸಭಾ ಸಾರ್ವತ್ರಿಕ ಚುನಾವಣೆಗೆ ಮೈಸೂರು ಜಿಲ್ಲಾಡಳಿತ ಸಜ್ಜಾಗುತ್ತಿದ್ದು, ಈ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಮಾಧ್ಯಮದವರಿಗೆ ವಿದ್ಯುನ್ಮಾನ ಮತಯಂತ್ರಗಳ ಕಾರ್ಯವೈಖರಿಯ ಬಗ್ಗೆ ಶುಕ್ರವಾರ ಪ್ರಾತ್ಯಕ್ಷಿಕೆ ಏರ್ಪಡಿಸಲಾಗಿತ್ತು.

ಜಿಲ್ಲಾ ಪಂಚಾಯಿತಿ ದೇವರಾಜ ಅರಸ್ ಸಭಾಂಗಣದಲ್ಲಿ ನಡೆದ ವಿದ್ಯುನ್ಮಾನ ಮತಯಂತ್ರ ತರಬೇತಿ ಹಾಗೂ ಜಾಗೃತಿ ಕಾರ್ಯಕ್ರಮದಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಬಳಕೆ ಹಾಗೂ ಮತದಾನ ಖಾತ್ರಿ ಯಂತ್ರ (ವಿವಿ ಪ್ಯಾಟ್) ಕಾರ್ಯವೈಖರಿಯನ್ನು ಪ್ರಾತ್ಯಕ್ಷಿಕೆ ಮೂಲಕ ತಿಳಿಸಿಕೊಡಲಾಯಿತು. ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಮಾಧ್ಯಮ ಪ್ರತಿನಿಧಿಗಳು ಅಣಕು ಮತ ಚಲಾಯಿಸಿ, ವಿವಿ ಪ್ಯಾಟ್‌ನಲ್ಲಿ ಖಾತ್ರಿಪಡಿಸಿಕೊಂಡರು. ಕಂಟ್ರೋಲಿಂಗ್ ಯೂನಿಟ್‌ನಲ್ಲಿ ಮತ ಚಲಾವಣೆ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿದ ಬಳಿಕ ಮತ್ತೆ ಮತದಾನಕ್ಕೆ ಅವಕಾಶವಾಗುವುದಿಲ್ಲ ಎನ್ನುವುದನ್ನು ಖಚಿತಪಡಿಸಲಾಯಿತು. ಕೊನೆಯಲ್ಲಿ ಇವಿಎಂನಲ್ಲಿ ದಾಖಲಾಗಿದ್ದ ಮತಗಳ ಒಟ್ಟು ಸಂಖ್ಯೆ ಹಾಗೂ ವಿವಿ ಪ್ಯಾಟ್‌ನಲ್ಲಿದ್ದ ಸ್ಲಿಪ್‌ಗಳ ಸಂಖ್ಯೆ ಒಂದೇ ಆಗಿರುವುದನ್ನೂ ಸ್ಪಷ್ಟಪಡಿಸಲಾಯಿತು. ನಿಗದಿತ ವಿದ್ಯುನ್ಮಾನ ಮತಯಂತ್ರಗಳ ಪ್ರಾತ್ಯಕ್ಷಿಕ ಕೇಂದ್ರಗಳಲ್ಲಿ ಯಾರಾದರೂ ಪಾರದರ್ಶಕತೆಯನ್ನು ಖಾತ್ರಿಪಡಿಸಿಕೊಳ್ಳಬಹುದಾಗಿದೆ. ಈ ವೇಳೆ ಮಾತನಾಡಿದ ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ ಕೆ.ವಿ.ರಾಜೇಂದ್ರ ಅವರು ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ವಿದ್ಯುನ್ಮಾನ ಮತಯಂತ್ರ ಬಳಕೆ ಹಾಗೂ ಮತದಾನ ಖಾತ್ರಿ ಕುರಿತಂತೆ ಪ್ರಾತ್ಯಕ್ಷತೆ ಮೂಲಕ ಮತದಾರರಲ್ಲಿ ವಿಶ್ವಾಸ ಮೂಡಿಸಲಾಗುವುದು. ಎಲೆಕ್ಟ್ರಾನಿಕ್ ಕಾರ್ಪೋರೇಷನ್ ಇಂಡಿಯಾ ಲಿಮಿಟೆಡ್‌ನಿಂದ ಎಂ–3 ಹೊಸ ವಿದ್ಯುನ್ಮಾನ ಮತಯಂತ್ರಗಳು ಜಿಲ್ಲೆಗೆ ಬಂದಿವೆ. ಮೊದಲ ಹಂತದ ಪರಿಶೀಲನೆ(ಎಫ್‌ಎಲ್‌ಸಿ) ಆಗಿರುವ 5,620 ಬ್ಯಾಲೆಟ್ ಯೂನಿಟ್, 3936 ಕಂಟ್ರೋಲ್ ಯೂನಿಟ್ ಹಾಗೂ 4,266 ವಿವಿ ಪ್ಯಾಟ್‌ಗಳಿದ್ದು, ಇದರಲ್ಲಿ ತರಬೇತಿ ಹಾಗೂ ಜಾಗೃತಿಗಾಗಿ 290 ಸೆಟ್‌ಗಳನ್ನು ಪ್ರತ್ಯೇಕವಾಗಿಡಲಾಗಿದೆ. ಡಿಸಿ ಕಚೇರಿ, ನಗರ ಪಾಲಿಕೆ ಕಚೇರಿ, ತಾಲೂಕು ಕೇಂದ್ರಗಳಿಗೆ ತರಬೇತಿ ಹಾಗೂ ಜಾಗೃತಿಗಾಗಿ ವಿದ್ಯುನ್ಮಾನ ಮತಯಂತ್ರಗಳ ಕಳುಹಿಸಿ, ಸಂಜೆ ಅವುಗಳನ್ನು ಉಪಖಜಾನೆಯಲ್ಲಿ ಭದ್ರವಾಗಿಡಲಾಗುವುದು. ಇದಕ್ಕಾಗಿ ಪ್ರತ್ಯೇಕ ತಂಡವನ್ನು ರಚಿಸಲಾಗಿದೆ ಎಂದು ತಿಳಿಸಿದರು.

> ವಿಕಲಚೇತನರು, ತುಂಬಾ ವಯಸ್ಸಾದವರು, ಹಾಸಿಗೆ ಹಿಡಿದವರು ಸೇರಿದಂತೆ ಓಡಾಡಲು ಸಾಧ್ಯವಾಗದ ಮತದಾರರಿಗೆ ಪೋಸ್ಟಲ್ ಬ್ಯಾಲೆಟ್ ಮಾದರಿ ವಿಶೇಷ ಮತದಾನದ ವ್ಯವಸ್ಥೆ ಮಾಡಲಾಗುವುದು. ಅಂತಹವರನ್ನು ಮತದಾರರ ಪಟ್ಟಿಯಲ್ಲಿ ಗುರುತಿಸುವ ಪ್ರಕ್ರಿಯೆ ನಡೆಸಲಾಗುವುದು.
> –ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ

ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ವಿದ್ಯುನ್ಮಾನ ಮತಯಂತ್ರಗಳ ಮೊದಲ ಹಂತದ ಪರಿಶೀಲನೆ ಈಗಾಗಲೇ ಆಗಿದೆ. ವೇರ್ ಹೌಸ್ ತೆರೆದು, ಬಂದ್ ಮಾಡುವವರೆಗೂ ಎಲ್ಲಾ ಚಟುವಟಿಕೆಯೂ ಸಿಸಿಟಿವಿ ಕ್ಯಾಮರಾದಲ್ಲಿ ರೆಕಾರ್ಡ್ ಆಗುತ್ತದೆ. ಎಲ್ಲಾ ಯಂತ್ರಗಳ ಸುಸ್ಥಿತಿ ಖಚಿತಪಡಿಸಿಕೊಂಡು ಡಮ್ಮಿ ಸಿಂಬಲ್ಸ್ ಲೋಡ್ ಮಾಡಿ ಕಾರ್ಯಕ್ಷಮತೆ ಪರೀಕ್ಷೆ ಮಾಡಲಾಗಿದೆ. ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಸಮ್ಮುಖದಲ್ಲೇ ತರಬೇತಿ ಹಾಗೂ ಜಾಗೃತಿಗೆ 290 ಸೆಟ್‌ಗಳನ್ನು ಪ್ರತ್ಯೇಕವಾಗಿಟ್ಟು ಅದರ ವಿವರ ಪಟ್ಟಿಯನ್ನೂ ನೀಡಲಾಗಿದೆ. ಜಿಲ್ಲೆಯ 1816 ಸ್ಥಳದಲ್ಲಿರುವ ಒಟ್ಟು 2905 ಮತಗಟ್ಟೆಗಳಿಗೆ ಅಗತ್ಯವಾದ ವಿದ್ಯುನ್ಮಾನ ಮತಯಂತ್ರಗಳನ್ನು ಸಿದ್ಧಪಡಿಸಿಕೊಳ್ಳಲಾಗಿದೆ. ಚುನಾವಣೆ ಘೋಷಣೆಯಾಗುವವರೆಗೂ ಮತದಾನ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಕ್ರಮ ವಹಿಸಲಾಗಿದೆ ಎಂದರು. ಎಲ್ಲಾ ಮತಗಟ್ಟೆಗಳೂ ಬಹುತೇಕ ವ್ಯವಸ್ಥಿತವಾಗಿದ್ದು, ಕುಡಿಯುವ ನೀರು, ವಿದ್ಯುತ್, ಫ್ಯಾನ್ ಇನ್ನಿತರ ವ್ಯವಸ್ಥೆ ಬಗ್ಗೆ ಅಧಿಕಾರಿಗಳು ಗಮನಹರಿಸಿದ್ದಾರೆ. ಕಾರಣಾಂತರಗಳಿಂದ 14 ಮತಗಟ್ಟೆಗಳ ಬದಲಾವಣೆಗೆ ಪ್ರಸ್ತಾವನೆ ಕಳುಹಿಸಿದ್ದು, ಅನುಮೋದನೆ ಆಗಬೇಕಿದೆ. ರಾಜಕೀಯ ಪಕ್ಷದವರು ಬೂತ್ ಮಟ್ಟದ ಏಜೆಂಟ್‌ಗಳನ್ನು ನಿಯೋಜಿಸಿ, ಸ್ಥಳೀಯ ಅಧಿಕಾರಿಗಳ ಭೇಟಿಗೆ ಸೂಚಿಸಬೇಕು. ಸಾರ್ವಜನಿಕರು ಪರಿಷ್ಕೃತ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿರುವುದನ್ನು ಖಚಿತಪಡಿಸಿಕೊಂಡು ಫೋಟೋ ಇನ್ನಿತರ ವಿವರವನ್ನು ಪರಿಶೀಲಿಸಿಕೊಳ್ಳಬೇಕು. ಇಲ್ಲವಾದರೆ ಫಾರಂ–6ರ ಮೂಲಕ ನೋಂದಣಿ ಮಾಡಿಸಿಕೊಳ್ಳಬೇಕು. ಮುಂಚಿತವಾಗಿ ನೋಂದಣಿ ಮಾಡಿಸಿದರೆ ಲೋಪದೋಷಗಳ ಸರಿಪಡಿಸಿಕೊಳ್ಳಲು ಅವಕಾಶವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಕವಿತಾ ರಾಜರಾಂ, ಮುಡಾ ಆಯುಕ್ತ ದಿನೇಶ್, ಜೆಡಿಎಸ್ ನಗರ ಹಿರಿಯ ಉಪಾಧ್ಯಕ್ಷ ಫಾಲ್ಕಾನ್ ಬೋರೇಗೌಡ, ಕಾಂಗ್ರೆಸ್ ಮುಖಂಡರಾದ ಉತ್ತನಹಳ್ಳಿ ಶಿವಣ್ಣ, ರಾಹುಲ್ ಕುಮರಳ್ಳಿ, ಬಿಜೆಪಿ ಪ್ರತಿನಿಧಿ ಪಾಪಣ್ಣ, ಬಿಎಸ್‌ಪಿಯ ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಮತಗಟ್ಟೆಗಳ ಪರಿವೀಕ್ಷಣೆಗೆ ನೋಡಲ್ ಅಧಿಕಾರಿಗಳಿಗೆ ಸೂಚನೆ

ಮೈಸೂರು,ಮಾ.3– ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023ಕ್ಕೆ ಸಂಬಂಧಿಸಿದಂತೆ ಚುನಾವಣಾ ನೋಡಲ್ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಮತಗಟ್ಟೆಗಳಿಗೆ ಭೇಟಿ ನೀಡಿ ಮೂಲಭೂತ ವ್ಯವಸ್ಥೆಯನ್ನು ಪರಿಶೀಲಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯಿತಿಯಲ್ಲಿ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಶಾಲೆ ಹಾಗೂ ಅಂಗನವಾಡಿಗಳಲ್ಲಿ ಬಹುತೇಕ ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತದೆ. ನೋಡಲ್ ಅಧಿಕಾರಿಗಳು ಪ್ರತಿ ಮತಗಟ್ಟೆಗೆ ಭೇಟಿ ನೀಡಿ ಟೇಬಲ್, ಚೇರ್, ವಿದ್ಯುತ್ ದೀಪಗಳು, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯನ್ನು ಪರಿಶೀಲಿಸಿ, ವ್ಯತ್ಯಾಸಗಳಿದ್ದರೆ ಸರಿಪಡಿಸಿಕೊಳ್ಳಿ ಎಂದು ತಿಳಿಸಿದರು.

ಚುನಾವಣಾ ಪ್ರಕ್ರಿಯೆಯನ್ನು ಸಮರ್ಥವಾಗಿ ನಿರ್ವಹಿಸುವ ಜವಾಬ್ದಾರಿ ಸರ್ಕಾರಿ ನೌಕರರಾದ ನಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಚುನಾವಣಾ ಮಾರ್ಗಸೂಚಿ ಪ್ರಕಾರ ಕಾರ್ಯ ನಿರ್ವಹಿಸಬೇಕು. ಸ್ವೀಪ್ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸಬೇಕು. ವಿಕಲಚೇತನರಿಗೆ ರ್‍ಯಾಂಪ್ ವ್ಯವಸ್ಥೆ, ವೀಲ್‌ಚೇರ್ ಇನ್ನಿತರೆ ವ್ಯವಸ್ಥೆಯ ಬಗ್ಗೆ ಖುದ್ದು ಪರಿಶೀಲಿಸಬೇಕು. 2018ರ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿರುವ ಮತಗಟ್ಟೆ ವ್ಯಾಪ್ತಿಗೆ ಭೇಟಿ ನೀಡಿ ಅದಕ್ಕೆ ಕಾರಣ ತಿಳಿದುಕೊಂಡು, ಜಾಗೃತಿ ಮೂಲಕ ಮತದಾನ ಪ್ರಮಾಣವನ್ನು ಹೆಚ್ಚಿಸಬೇಕು. ಮಾ.17, 18 ಹಾಗೂ 19 ರಂದು ಜಿಲ್ಲೆಗೆ ಉಪಲೋಕಾಯುಕ್ತರು ಭೇಟಿ ನೀಡುತ್ತಿದ್ದು, ಯಾವ ಇಲಾಖೆಗಳಲ್ಲಿ ಲೋಕಾಯುಕ್ತ ಪ್ರಕರಣಗಳಿವೆ ಎಂದು ಗುರುತಿಸಿಕೊಳ್ಳಿ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಾಯಿತ್ರಿ, ಅಪರ ಜಿಲ್ಲಾಧಿಕಾರಿ ಕವಿತಾ ರಾಜರಾಂ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

ಕೆ.ಶಿವರಾಮು ಅವರಿಗೆ ಅತ್ಯುತ್ತಮ ರೇಷ್ಮೆ ಕೃಷಿಕ ಪ್ರಶಸ್ತಿ



ಮೈಸೂರು, ಮಾ.3– ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲೂಕು, ಕಾಮಗೆರೆ ಕೊಂಗರಳ್ಳಿಯ ಕಾಮಶೆಟ್ಟಿ ಅವರ ಪುತ್ರ ಕೆ.ಶಿವರಾಮು ಅವರು ರೇಷ್ಮೆ ಕೃಷಿ ಇಲಾಖೆ ವತಿಯಿಂದ ಕೊಡಮಾಡುವ 'ಅತ್ಯುತ್ತಮ ರೇಷ್ಮೆ ಕೃಷಿಕ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ. 2020–21ನೇ ಸಾಲಿನ ರಾಜ್ಯ ಮಟ್ಟದ ಕಾಟೇಜ್ ಬೇಸಿನ್ ಘಟಕ ವಿಭಾಗದಲ್ಲಿ ದ್ವಿತೀಯ ಸ್ಥಾನ ಗಳಿಸುವ ಮೂಲಕ ಈ ಪ್ರಶಸ್ತಿಗೆ ಪಾತ್ರರಾಗಿರುವ ಇವರನ್ನು ಸರ್ಕಾರದಿಂದ 20 ಸಾವಿರ ನಗದು ಬಹುಮಾನದೊಂದಿಗೆ ಅಭಿನಂದಿಸಲಾಗಿದೆ.

ಶಾಲಾ ಮಕ್ಕಳಿಗೆ ಅರಣ್ಯ, ವನ್ಯಜೀವಿಗಳ ಸಂರಕ್ಷಣೆ ಪಾಠ



ಮೈಸೂರು, ಮಾ.3– ಬಂಡೀಪುರ ಯುವ ಮಿತ್ರ ಯೋಜನೆ ಅಡಿ ಶಾಲಾ ಮಕ್ಕಳಿಗೆ ಉಚಿತ ಸಫಾರಿ ಜೊತೆಗೆ ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆ ಕುರಿತು ಶಾಲಾ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು.

ಈ ಯೋಜನೆ ಅಡಿ ಶುಕ್ರವಾರ ಗುಂಡ್ಲುಪೇಟೆ ತಾಲೂಕಿನ ಮೇಲುಕಮ್ಮಹಳ್ಳಿಯ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ 55 ವಿದ್ಯಾರ್ಥಿಗಳು ಹಾಗೂ 3 ಶಿಕ್ಷಕರನ್ನು ಸಫಾರಿಗೆ ಕರೆದುಕೊಂಡು ಹೋಗಿ ಬಂಡೀಪುರದಲ್ಲಿರುವ ಪ್ರಾಣಿ, ಪಕ್ಷಿ ಹಾಗೂ ವೃಕ್ಷ ಪ್ರಭೇದಗಳ ಕುರಿತು ಮಾಹಿತಿ ನೀಡಲಾಯಿತು. ವಿದ್ಯಾರ್ಥಿಗಳು ಅರಣ್ಯ ಪ್ರದೇಶ ಮತ್ತು ಸಫಾರಿಯಲ್ಲಿ ಸಮಯವನ್ನು ಸಂತಸದಿಂದ ಕಳೆದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ ಎಲ್ಲಾ ಕಾಡಂಚಿನ ಗ್ರಾಮಗಳ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ಸಫಾರಿ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಜಿಲ್ಲಾ ಖನಿಜ ನಿಧಿಯಡಿ ಚಾಮರಾಜನಗರದ ಜಿಲ್ಲಾಧಿಕಾರಿಗಳು ಎರಡು ಬಸ್‌ಗಳನ್ನು ಕೊಡುಗೆಯಾಗಿ ನೀಡಿದ್ದು, ಈ ಬಸ್ ಮೂಲಕ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಗುಂಡ್ಲುಪೇಟೆ, ನಂಜನಗೂಡು, ಸರಗೂರು ಹಾಗೂ ಹೆಚ್.ಡಿ.ಕೋಟೆ ತಾಲೂಕುಗಳ ಸುಮಾರು 120 ಸರ್ಕಾರಿ ಶಾಲೆಯ 6ರಿಂದ7 ಸಾವಿರ ಮಕ್ಕಳಿಗೆ ಉಚಿತ ಸಫಾರಿ ವ್ಯವಸ್ಥೆ ಹಾಗೂ ನೈಸರ್ಗಿಕ ಶಿಕ್ಷಣವನ್ನು ನೀಡಲು ಯೋಜನೆ ರೂಪಿಸಲಾಗಿದ್ದು, ಅದರಂತೆ ಪ್ರಸಕ್ತ ಸಾಲಿನಲ್ಲಿ ಸಾವಿರಾರು ಮಕ್ಕಳನ್ನು ಉಚಿತವಾಗಿ ಸಫಾರಿಗೆ ಕರೆದುಕೊಂಡು ಹೋಗಲು ಆಲೋಚಿಸಲಾಗಿದೆ ಎಂದು ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಕ್ಷೇಪಣೆಗೆ ಆಹ್ವಾನ

ಮೈಸೂರು, ಮಾ.3– ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಭೂ ಒಡೆತನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಗಳಿಗೆ ಅನುಮೋದನೆ ಪಡೆಯಲಾಗಿದೆ. ಈ ಸಂಬಂಧ ಸಾರ್ವಜನಿಕರಿಂದ ಆಕ್ಷೇಪಣೆ, ತಕರಾರು ಇದ್ದಲ್ಲಿ ಫೆ.15 ರೊಳಗಾಗಿ ಜಿಲ್ಲಾ ಕಚೇರಿಗೆ ದೂರು ಸಲ್ಲಿಸುವಂತೆ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಾಫರ್ಡ್ ಹಾಲ್ ಆವರಣದ ಬ್ಯಾಂಕಿನಲ್ಲಿ ಪರೀಕ್ಷಾ ಶುಲ್ಕ ಪಾವತಿಸಲು

ವಿದ್ಯಾರ್ಥಿಗಳ ನೂಕು–ನುಗ್ಗಲು



ಮೈಸೂರು, ಮಾ.3(ಆರ್‌ಕೆ)– ಪದವಿ ಪರೀಕ್ಷೆಗಳ ಶುಲ್ಕ ಪಾವತಿಸಲು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಕ್ರಾಫರ್ಡ್ ಭವನದ ಆವರಣದಲ್ಲಿರುವ ಎಸ್‌ಬಿಐ ಶಾಖೆ ಮುಂದೆ ಸಾಲುಗಟ್ಟಿ ನಿಲ್ಲುವ ಸ್ಥಿತಿ ಎದುರಾಗಿದೆ.

ಬೆಳಗ್ಗೆಯೇ ಬ್ಯಾಂಕ್ ಶಾಖೆಗೆ ದೌಡಾಯಿಸುವ ವಿದ್ಯಾರ್ಥಿಗಳು ಚಲನ್ ಭರ್ತಿ ಮಾಡಿ ಪರೀಕ್ಷಾ ಶುಲ್ಕದ ಹಣ ಪಾವತಿಸಲು ತಾಸುಗಟ್ಟಲೆ ಸರತಿಯಲ್ಲಿ ನಿಲ್ಲುವಂತಾಗಿದೆ. ಏಕಕಾಲಕ್ಕೆ ನೂರಾರು ವಿದ್ಯಾರ್ಥಿಗಳು ಶುಲ್ಕ ಪಾವತಿಗೆ ನೆರೆಯುವುದರಿಂದ ಬ್ಯಾಂಕ್ ಸಿಬ್ಬಂದಿಯೂ ಹೈರಾಣಾಗುವುದಲ್ಲದೆ, ಇತರ ಗ್ರಾಹಕರಿಗೂ ತೀವ್ರ ತೊಂದರೆಯಾಗುತ್ತಿದೆ ಎನ್ನಲಾಗಿದೆ. ರಸ್ತೆ ಬದಿ ಸೊಪ್ಪು–ತರಕಾರಿ ಮಾರುವವರು, ಸಣ್ಣ ಪೆಟ್ಟಿಗೆ ಅಂಗಡಿ ವ್ಯಾಪಾರಿಗಳೂ ಕೂಡ ಗೂಗಲ್ ಪೇ, ಫೋನ್ ಪೇ ಇನ್ನಿತರ ಆನ್‌ಲೈನ್ ಪೇಮೆಂಟ್ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಆದರೆ ಶತಮಾನಗಳ ಇತಿಹಾಸ ಹೊಂದಿರುವ ಪ್ರತಿಷ್ಠಿತ ಮೈಸೂರು ವಿವಿಯಲ್ಲಿ ಈ ವ್ಯವಸ್ಥೆ ಇಲ್ಲ. ತರಗತಿಗೂ ಹೋಗಲಾಗದೆ ಗಂಟೆಗಳ ಕಾಲ ಸಾಲಿನಲ್ಲಿ ನಿಂತು ಪರೀಕ್ಷಾ ಶುಲ್ಕ ಪಾವತಿಸಬೇಕು. ನಂತರ ಅದರ ರಶೀದಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಬೇಕು. ಇದರಿಂದ ತರಗತಿ ಹಾಗೂ ಪರೀಕ್ಷೆ ಸಿದ್ಧತೆಗೆ ಅಡ್ಡಿಯಾಗುತ್ತದೆ ಎಂದು ತೀವ್ರ ಬೇಸರ ವ್ಯಕ್ತಪಡಿಸಿರುವ ವಿದ್ಯಾರ್ಥಿಗಳ ಪೋಷಕರು, ಯಾವ ಸಮಯದಲ್ಲೂ ಆನ್‌ಲೈನ್ ಮೂಲಕ ಶುಲ್ಕ ಪಾವತಿಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದ್ದಾರೆ. ಈ ಸಂಬಂಧ ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಡಾ.ಜ್ಞಾನಪ್ರಕಾಶ್ ಪ್ರತಿಕ್ರಿಯಿಸಿ, ಸರ್ಕಾರವೇ ಸಿದ್ಧಪಡಿಸಿರುವ ಯೂನಿಫೈಡ್ ಯೂನಿವರ್ಸಿಟಿ ಕಾಲೇಜ್ ಅಂಡ್ ಮ್ಯಾನೇಜ್‌ಮೆಂಟ್ ಸಿಸ್ಟಂ (UCC&MS) ಸಾಫ್ಟ್‌ವೇರ್ ಮೂಲಕ ಆನ್‌ಲೈನ್‌ನಲ್ಲೇ ಪರೀಕ್ಷಾ ಶುಲ್ಕ ಪಾವತಿಸಬೇಕು. ಆದರೆ ಆನ್‌ಲೈನ್ ಶುಲ್ಕ ಪಾವತಿಗೆ ನೀಡಲಾಗಿದ್ದ ಗಡುವು ಮುಗಿದು ವಾರವಾಗಿದ್ದು, ಈಗ ಅವಕಾಶವಿಲ್ಲ ಎಂದು ತಿಳಿಸಿದ್ದಾರೆ. ಬಹುತೇಕ ವಿದ್ಯಾರ್ಥಿಗಳು ನಿಗದಿತ ಅವಧಿಯಲ್ಲಿ ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸಿದ್ದಾರೆ. ನಿರ್ಲಕ್ಷ್ಯದಿಂದ ಕಡೇ ದಿನದವರೆಗೂ ಶುಲ್ಕ ಪಾವತಿಸದ ವಿದ್ಯಾರ್ಥಿಗಳು ಮನವಿ ಮಾಡಿದ್ದರಿಂದ ಅವರ ಹಿತ ದೃಷ್ಟಿಯಿಂದ ಬ್ಯಾಂಕ್ ಮೂಲಕ ದಂಡ ಸಹಿತ ಶುಲ್ಕ ಪಾವತಿಗೆ ಅವಕಾಶ ನೀಡಲಾಗಿದೆ. ಅಂತಹ ವಿದ್ಯಾರ್ಥಿಗಳು ಮಾತ್ರ ಈಗ ಹಣ ಪಾವತಿಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಈ ಕ್ರಮ ವಹಿಸಲಾಗಿದೆಯೇ ಹೊರತು ಅವರಿಗೆ ತೊಂದರೆ ನೀಡುವ ಉದ್ದೇಶವಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ..

ಶಾಸಕ ನಾಗೇಂದ್ರ ಸಮ್ಮುಖದಲ್ಲಿ ನೂರಾರು ಯುವ ಮುಖಂಡರು ಬಿಜೆಪಿ ಸೇರ್ಪಡೆ



ಮೈಸೂರು, ಮಾ.3(ಎಸ್‌ಬಿಡಿ)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ನೂರಾರು ಯುವ ಮುಖಂಡರು ಶುಕ್ರವಾರ ಬಿಜೆಪಿ ಯುವಮೋರ್ಚಾ ಘಟಕ ಸೇರಿದರು.

ನಗರದ ಒಂಟಿಕೊಪ್ಪಲಿನಲ್ಲಿರುವ ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಚೇರಿಯಲ್ಲಿ ಶಾಸಕ ಎಲ್.ನಾಗೇಂದ್ರ ಅವರ ಸಮ್ಮುಖದಲ್ಲಿ ಕ್ಷೇತ್ರದ 20 ವಾರ್ಡ್‌ನ ನೂರಾರು ಯುವಕರು ಬಿಜೆಪಿ ಯುವ ಮೋರ್ಚಾ ಸೇರ್ಪಡೆಯಾಗಿ, ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗುವ ವಾಗ್ದಾನ ಮಾಡಿದರು. ಬಿಜೆಪಿ ಸಿದ್ಧಾಂತ, ಪ್ರಧಾನಿ ನರೇಂದ್ರ ಮೋದಿಜಿಯವರ ಜನಪರ ಆಡಳಿತ, ಅವರ ದೇಶ ಪ್ರೇಮದ ನಡೆ, ನಿಷ್ಕಳಂಕ ಆಡಳಿತ, ದೇಶದ ಘನತೆ ಹೆಚ್ಚಿಸುವ ನಿಟ್ಟಿನಲ್ಲಿ ಕೈಗೊಂಡ ನಿರ್ಣಯಗಳು, ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿರವರ ಆಡಳಿತ ವೈಖರಿ, ಚಾಮರಾಜ ಕ್ಷೇತ್ರದ ಶಾಸಕರಾದ ಎಲ್.ನಾಗೇಂದ್ರ ಅವರ ಕ್ಷೇತ್ರದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು, ಎಲ್ಲರೊಂದಿಗೆ ಬೆರೆಯುವ ಗುಣ, ಸರಳತೆ, ಜನಸ್ಪಂದನೆ, ಕೊರೊನಾ ಸಂದರ್ಭದಲ್ಲಿ ನಿರಂತರ ಸೇವೆ ಮಾಡಿದ್ದನ್ನು ಮೆಚ್ಚಿ, ಕಾಂಗ್ರೆಸ್ ಹಾಗೂ ಜೆಡಿಎಸ್ ತೊರೆದು 200 ಯುವಕರು ಬಿಜೆಪಿ ಯುವ ಮೋರ್ಚಾ ಸೇರಿದ್ದಾರೆ ಎಂದು ಇದೇ ವೇಳೆ ನಗರ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ ತಿಳಿಸಿದರು.

ಕಾರ್ಯಕ್ರಮದಲ್ಲಿ ಚಾಮರಾಜ ಕ್ಷೇತ್ರದ ಬಿಎಲ್‌ಎ–1 ದಿನೇಶ್ ಗೌಡ, ಪ್ರಧಾನ ಕಾರ್ಯದರ್ಶಿಗಳಾದ ಪುನೀತ್, ರಮೇಶ್, ಎ.ಸಚಿನ್, ಪ್ರಧಾನ ಕಾರ್ಯದರ್ಶಿಗಳಾದ ಭರತ್ ಕುಮಾರ್, ಸಂತೋಷ್, ಕುಂಬಾರ ಕೊಪ್ಪಲಿನ ಅಭಿಷೇಕ್, ಮೇಟಗಳ್ಳಿಯ ಪೈವಿಜಯ್, ಮಹದೇಶ್ವರ ಬಡಾವಣೆಯ ಮಹೇಶ, ಬೃಂದಾವನದ ಮಧು, ಮಂಜು ನಾಥಪುರ ಗೋವಿಂದ, ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಸಚಿನ್, ಪ್ರಧಾನ ಕಾರ್ಯ ದರ್ಶಿಗಳಾದ ಅರ್ಜುನ್, ಪ್ರಜ್ವಲ್, ಶ್ರೀವತ್ಸ, ಮುಖಂಡರಾದ ನಿತಿನ್, ಯೋಗೇಶ್, ನಿಶಾಂತ್, ರಾಕೇಶ್, ಶಿವಕುಮಾರ್, ಜಯಣ್ಣ, ಅಶೋಕ, ಲೋಹಿತ್, ಸ್ವಾಮಿನಾಥ್ ಮತ್ತಿತರರು ಉಪಸ್ಥಿತರಿದ್ದರು.

ಮಾ.12ಕ್ಕೆ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಪ್ರಧಾನಿ ಮೋದಿ ಲೋಕಾರ್ಪಣೆ

ಗೆಜ್ಜಲಗೆರೆ ಬಳಿ ಕಾರ್ಯಕ್ರಮ ಸ್ಥಳ ಪರಿಶೀಲನೆ ನಡೆಸಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ನೇತೃತ್ವದ ತಂಡ

ಮಂಡ್ಯ, ಮಾ.3(ಮೋಹನ್‌ರಾಜ್)– ಪ್ರಧಾನಿ ನರೇಂದ್ರ ಮೋದಿ ಅವರು ಮಾ.12ರಂದು ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಲೋಕಾರ್ಪಣೆ ಮಾಡ ಲಿದ್ದಾರೆ. ಈ ಕಾರ್ಯಕ್ರಮ ಗೆಜ್ಜಲಗೆರೆ ಬಳಿ ನಡೆಯಲಿದ್ದು, ಕೇಂದ್ರ ಸಂಸದೀಯ ವ್ಯವಹಾರ ಹಾಗೂ ಗಣಿ ಸಚಿವ ಪ್ರಹ್ಲಾದ್ ಜೋಷಿ ನೇತೃತ್ವದಲ್ಲಿ ರಾಜ್ಯದ ಸಚಿವರು, ಸಂಸದರು ಹಾಗೂ ಅಧಿಕಾರಿಗಳ ತಂಡ ಇಂದು ಸ್ಥಳ ಪರಿಶೀಲನೆ ನಡೆಸಿತು.

ರಾಜ್ಯದ ಸಚಿವರಾದ ಕೆ.ಗೋಪಾಲಯ್ಯ, ಕೆ.ಸಿ.ನಾರಾಯಣಗೌಡ, ಸಂಸದರಾದ ಪ್ರತಾಪ್ ಸಿಂಹ, ಸುಮಲತಾ ಅಂಬರೀಷ್, ಮಂಡ್ಯ ಜಿಲ್ಲಾಧಿಕಾರಿ ಗೋಪಾಲಕೃಷ್ಣ, ಎಸ್ಪಿ ಯತೀಶ್ ಸೇರಿದಂತೆ ಹಲವು ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿದ ನಂತರ ಸಿದ್ಧತೆಗಳ ಕುರಿತು ಕೇಂದ್ರ ಸಚಿವರು ಮಾಹಿತಿ ಪಡೆದರು.



ನಂತರ ಸುದ್ದಿಗಾರರೊಂದಿಗೆ ಮಾತ ನಾಡಿದ ಪ್ರಹ್ಲಾದ್ ಜೋಷಿ, ಮಾ.12 ರಂದು ಬೆಳಗ್ಗೆ 11 ಗಂಟೆಗೆ ಪ್ರಧಾನಿ ಯವರು ದಶಪಥ ಹೆದ್ದಾರಿ ಲೋಕಾ ರ್ಪಣೆಗೊಳಿಸುವ ಜೊತೆಗೆ ಮೈಸೂರು–ಕುಶಾಲನಗರ ನಡುವಿನ 3550 ಕೋಟಿ ರೂ. ವೆಚ್ಚದ ಹೆದ್ದಾರಿ ನಿರ್ಮಾಣಕ್ಕೂ ಶಂಕು ಸ್ಥಾಪನೆ ನೆರವೇರಿಸುವರು. ದಶಪಥ ಹೆದ್ದಾರಿಯಿಂದ ಮೈಸೂರು–ಬೆಂಗ ಳೂರು ನಡುವಿನ ಸಂಚಾರ ಸುಗಮಗೊ ಳ್ಳುವ ಜೊತೆಗೆ ಈ ಭಾಗದ ಜನರ ಹಣ, ಅಮೂಲ್ಯ ಸಮಯ ಉಳಿಯ ಲಿದೆ. ಲಕ್ಷಕ್ಕೂ ಅಧಿಕ ಮಂದಿ ಕಾರ್ಯ ಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಹೀಗಾಗಿ ಸ್ಥಳೀಯ ಮುಖಂಡರು, ಸಚಿವರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸುವಂತೆ ಸೂಚಿಸಿದರು.

ಪ್ರಧಾನಿ ಮೋದಿ ಸಮಾರಂಭಕ್ಕೆ ಆಗಮಿಸುವ ವೇಳೆ ಯಾವುದೇ ಲೋಪ ವಾಗದಂತೆ ಎಚ್ಚರ ವಹಿಸಬೇಕೆಂದ ಅವರು, ಜಿಲ್ಲೆಯಲ್ಲಿ ಬಿಜೆಪಿ ಮುಂದಿನ ದಿನಗಳಲ್ಲಿ ಮತ್ತಷ್ಟು ಬಲಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಸದ ಪ್ರತಾಪ್‌ಸಿಂಹ ಮಾತನಾಡಿ, ಮಂಡ್ಯ ಜಿಲ್ಲೆ ಸರ್ವತೋಮುಖ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಗಳು ಬದ್ಧವಾಗಿವೆ. ದಶಪಥ ಹೆದ್ದಾರಿಗೆ ಮಂಡ್ಯ ಜನರ ಬಹುದೊಡ್ಡ ಕೊಡುಗೆ ಇದೆ. ಹೆದ್ದಾರಿಯಿಂದ ಜಿಲ್ಲೆಯ ಅಭಿ ವೃದ್ಧಿಗೆ ಪೂರಕ ವಾತಾವರಣ ಸೃಷ್ಟಿಯಾಗ ಲಿದೆ. ಈಗಾಗಲೇ ಜಿಲ್ಲೆಗೆ ಜಲಜೀವನ್ ಮಿಷನ್ ಯೋಜನೆಯಡಿ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಕಾಮಗಾರಿ ಪ್ರಗತಿ ಯಲ್ಲಿದೆ. ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಪಾಸ್ ಪೋರ್ಟ್ ಸೇವಾ ಕೇಂದ್ರ ಹಾಗೂ ಮುಂದಿನ ದಿನಗಳಲ್ಲಿ ಕಂಟೆನರ್ ಡಿಪೋ ಕೂಡ ಜಿಲ್ಲೆಗೆ ಕಾಲಿಡಲಿದೆ. ಹೀಗೆ ಇನ್ನು ಹಲವಾರು ಕೊಡುಗೆಗಳನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರ ನೀಡಿದೆ. ಕೆ.ಆರ್.ಪೇಟೆಯಲ್ಲಿ ನಾರಾಯಣಗೌಡರು ಈಗಾಗಲೇ ಬಿಜೆಪಿ ಬಾವುಟ ಹಾರಿಸಿದ್ದಾರೆ. ಜಿಲ್ಲೆಗೆ ನರೇಂದ್ರ ಮೋದಿ ಅವರು ಶಕ್ತಿ ತುಂಬಲು ಬರುತ್ತಿದ್ದಾರೆ. ಮುಂದಿನ ದಿನ ಗಳಲ್ಲಿ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರ ಗಳಲ್ಲೂ ಬಿಜೆಪಿ ಬಾವುಟ ಹಾರಿಸಲಿ ದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

1971ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ಮಂಡ್ಯಕ್ಕೆ ಆಗಮಿಸಿದ್ದನ್ನು ನೆನಪಿಸಿದ ಪ್ರತಾಪ್ ಸಿಂಹ ನಂತರದಲ್ಲಿ ಇಂದಿನ ಪ್ರಧಾನಿ ನರೇಂದ್ರಮೋದಿ ಅವರು ಮಂಡ್ಯಕ್ಕೆ ಆಗಮಿಸಲಿದ್ದು, ಹಬ್ಬದ ರೀತಿ ಸ್ವಾಗತಿಸೋಣ ಎಂದರು.

ಮೋದಿ ರೋಡ್ ಷೋ ಅಂತಿಮವಾಗಿಲ್ಲ

ಮಂಡ್ಯ, ಮಾ.3– ಬೆಂಗಳೂರು–ಮೈಸೂರು ದಶಪಥ ರಸ್ತೆ ಉದ್ಘಾಟನೆಗೆ ಮಾ.12ರಂದು ಮಂಡ್ಯಕ್ಕೆ ಆಗಮಿಸುವ ಪ್ರಧಾನಿ ಮೋದಿ ಅವರ ರೋಡ್ ಷೋ ಬಗ್ಗೆ ಇನ್ನೂ ಅಂತಿಮ ನಿರ್ಧಾರವಾಗಿಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಸ್ಪಷ್ಟಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಗ್ಗೆ ಎಸ್‌ಪಿಜಿ ಪರಿಶೀಲನೆ ಮಾಡುತ್ತಿದ್ದು, ಅವರು ತೀರ್ಮಾನಿಸಿದ ಮೇಲೆ ರೋಡ್ ಷೋ ಬಗ್ಗೆ ಅಂತಿಮ ನಿರ್ಧಾರ ಹೊರಬೀಳಲಿದೆ ಎಂದು ಸ್ಪಷ್ಟಪಡಿಸಿದರು.

ಅವಿಸ್ಮರಣೀಯ: ಸಂಸದೆ ಸುಮಲತಾ ಅಂಬರೀಷ್ ಮಾತನಾಡಿ, ಪ್ರಧಾನಿ ಮೋದಿ ಅವರ ಮಂಡ್ಯ ಭೇಟಿ ಅವಿಸ್ಮರಣೀಯ ಎಂದರು. ಜಿಲ್ಲೆಗೆ ನಮ್ಮ ಹೆಮ್ಮೆಯ ಪ್ರಧಾನಿ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಬೇರೆಡೆ ನಡೆದ ರೋಡ್ ಶೋಗಳಿಗಿಂತ ಬೆಸ್ಟ್ ಶೋ ಆಗಬೇಕು. ಇಡೀ ದೇಶವೇ ಮಂಡ್ಯ ಜಿಲ್ಲೆಯನ್ನು ತಿರುಗಿ ನೋಡು ವಂತೆ ಮಾಡಬೇಕು ಎಂದರು.

ಜಿಲ್ಲಾಧಿಕಾರಿ ಗೋಪಾಲಕೃಷ್ಣ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಜಿಪಂ ಸಿಇಓ ಶಾಂತ ಹುಲ್ಮನಿ, ತಹಸೀಲ್ದಾರ್ ಟಿ.ಎನ್.ನರಸಿಂಹಮೂರ್ತಿ, ವೃತ್ತ ನಿರೀಕ್ಷಕ ಸಂತೋಷ್, ಕಂದಾಯ ಇಲಾಖೆ ಅಧಿಕಾರಿಗಳು ಮಾ.12ರ ಕಾರ್ಯಕ್ರಮ ಸಂಬಂಧ ಸ್ಥಳದ ನಕ್ಷೆ ಯನ್ನು ಕೇಂದ್ರ ಸಚಿವರಿಗೆ ತೋರಿಸಿ ವಿವರಿಸಿದರು. ಗೆಜ್ಜಲಗೆರೆ ಕಾಲೋನಿ ಬಳಿಯ ವಿಶಾಲ ಪ್ರದೇಶದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಅಲ್ಲಿ ಬೃಹತ್ ವೇದಿಕೆ ಸ್ಥಳ ನಿಗದಿಪಡಿಸಲಾಯಿತು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಬಿಜೆಪಿಯದು ಅಭಿವೃದ್ಧಿ ಪೂರಕ ಪ್ರಣಾಳಿಕೆ : ಡಿ.ವಿ.ಸದಾನಂದಗೌಡ



"ಯಾವ ಸಮಯದಲ್ಲಾದರೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜೈಲಿಗೆ ಹೋಗಬಹುದು. ಪ್ರಧಾನಿ ಮೋದಿ ಹಾಗೂ ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ವಿರೋಧಿಸುತ್ತಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸುಳ್ಳಿನ ರಾಮಯ್ಯ ಇವರು ಸಹ 8 ಸಾವಿರ ಕೋಟಿ ಹಗರಣ ಮಾಡಿದ್ದು, ಇವರ ವಿರುದ್ಧವೂ ತನಿಖೆ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯ ಕೂಡ ಜೈಲಿಗೆ ಹೋಗಲು ರೆಡಿಯಾಗುತ್ತಿದ್ದಾರೆ.

-ಡಿ.ವಿ.ಸದಾನಂದಗೌಡ, ಸಂಸದ.

ಕೆ.ಆರ್.ನಗರ, ಮಾ.3– ಬಿಜೆಪಿ ಅಭಿವೃದ್ಧಿಗೆ ಪೂರಕವಾದ ಪ್ರಣಾಳಿಕೆ ಘೋಷಿಸಿದರೆ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಚುನಾವಣಾ ಪ್ರಚಾರಕ್ಕಾಗಿ ಪ್ರಣಾಳಿಕೆ ಘೋಷಣೆ ಮಾಡಿವೆ ಎಂದು ಸಂಸದ ಡಿ.ವಿ.ಸದಾನಂದಗೌಡ ಆರೋಪಿಸಿದರು.

ಪಟ್ಟಣದಲ್ಲಿ ನಡೆದ ವಿಜಯ ಸಂಕಲ್ಪ ಯಾತ್ರೆ ವೇಳೆ ಮುಖಂಡ ಹೊಸಹಳ್ಳಿ ವೆಂಕಟೇಶ್ ಮನೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ಜನತಾ ಪಕ್ಷ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಭಿವೃದ್ಧಿ ಕಾರ್ಯಗಳನ್ನು ಜನತೆಗೆ ತಿಳಿಸಲು ವಿಜಯಸಂಕಲ್ಪ ಯಾತ್ರೆ ಹಮ್ಮಿಕೊಂಡಿದ್ದು, ಚಾಮರಾಜನಗರ ಜಿಲ್ಲೆಯಿಂದ ಪ್ರಾರಂಭವಾದ ಈ ಯಾತ್ರೆ ಮೈಸೂರು, ಕೊಡಗು, ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಂಚರಿಸಲಿದೆ ಎಂದರು.

ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಕೊರೊನಾ ವೇಳೆ 120 ರಾಷ್ಟ್ರಗಳಿಗೆ ಲಸಿಕೆ ನೀಡುವ ಮೂಲಕ ಮಹಾನ್ ಸಾಧನೆ ಮಾಡಿದೆ. ದೇಶದ 9 ಕೋಟಿ ಮಹಿಳೆಯರಿಗೆ ಉಜ್ವಲ್ ಯೋಜನೆಯಡಿ ಉಚಿತ ಗ್ಯಾಸ್ ಸಿಲಿಂಡರ್ ವಿತರಿಸಿದ್ದು, ರಸ್ತೆ, ನೀರಾವರಿ, ವಿದ್ಯುತ್, ಆಹಾರ ಭದ್ರತೆಗೆ ಹೆಚ್ಚು ಒತ್ತು ನೀಡಿದೆ ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗಮನಾರ್ಹ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಅಲ್ಲದೇ ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ಸಾಕಷ್ಟು ಸೌಲಭ್ಯ ನೀಡಿದ್ದು, ಈ ಎಲ್ಲಾ ಯೋಜನೆಗಳನ್ನು ವಿಜಯ ಸಂಕಲ್ಪ ಯಾತ್ರೆ ಮೂಲಕ ಜನರಿಗೆ ಮನವರಿಕೆ ಮಾಡಿಕೊಡಲಾಗುವುದು ಎಂದರು.

ಕಾಂಗ್ರೆಸ್ ಲೂಟಿಕೋರರ ಪಕ್ಷ. ಅದರ ಅಧ್ಯಕ್ಷರೇ ಜಾಮೀನನ ಮೇಲೆ ಹೊರಗಿದ್ದಾರೆ. ವಿಪಕ್ಷ ನಾಯಕ ಸಿದ್ದರಾಮಯ್ಯ ಆಡಳಿತಾವಧಿಯಲ್ಲಿ ನಡೆದ ಅರ್ಕಾವತಿ ಹಗರಣ ತನಿಖೆಯಲ್ಲಿದ್ದು, ಈ ಇಬ್ಬರೂ ಯಾವುದೇ ಸಮಯದಲ್ಲೂ ಜೈಲು ಪಾಲಾಗಬಹುದು. ಇಂತಹವರಿಂದ ರಾಜ್ಯದ ಅಭಿವೃದ್ಧಿ ಸಾಧ್ಯವೇ ಎಂದ ಅವರು, ಕೇಂದ್ರ ಮತ್ತು ರಾಜ್ಯದಲ್ಲಿ ಹಗರಣಗಳಿಂದ ತುಂಬಿರುವ ನಾಯಕರೇ ಹೆಚ್ಚಿರುವಾಗ ದೇಶವನ್ನಾಳಲು ಇವರು ಅರ್ಹರೇ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಎಂ.ರಾಜೇಂದ್ರ, ವಿಧಾನ ಪರಿಷತ್ ಸದಸ್ಯ ತುಳಸಿ ಮುನಿರಾಮೇಗೌಡ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಜುಳ ಸೋಮಶೇಖರ್, ಉಪಾಧ್ಯಕ್ಷ ವೆಂಕಟೇಶ್, ಮಾಧ್ಯಮ ಪ್ರಮುಖ್ ಹೆಚ್.ಪಿ.ಗೋಪಾಲ್, ಮಂಡಲ ಅಧ್ಯಕ್ಷ ಕೆವೈ. ಮಂಜು, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಪ್ರಭಾಕರ್ ಜೈನ್, ಮುಖಂಡರಾದ ಎಸ್.ಜಿ.ಬಾಬು ಹನುಮಾನ್, ವರದರಾಜು, ಮಾರ್ಕಂಡೇಯ, ಅರವಿಂದ, ಎಸ್.ಮಹದೇವಯ್ಯ, ಗೋಪಾಲರಾಜು, ಚಿಕ್ಕೇಗೌಡ, ಎಂ.ಎನ್.ನಾಗೇಶ್, ಕೃಷ್ಣ ಭಟ್, ಚನ್ನರಾಜ್, ಅನಿಲ್, ಉಮಾಶಂಕರ್, ಮತ್ತಿತರರಿದ್ದರು.

ಮುಖಂಡರಿಗೆ ಅಭೂತಪೂರ್ವ ಸ್ವಾಗತ

ಕೆ.ಆರ್.ನಗರ: ವಿಜಯ ಸಂಕಲ್ಪ ಯಾತ್ರೆ ಹಿನ್ನಲೆಯಲ್ಲಿ ಸಾವಿರಾರು ಯುವ ಮುಖಂಡರು ಬೈಕ್ ರ್‍ಯಾಲಿ ನಡೆಸಿದರು. ಅಲ್ಲದೇ ಪಟ್ಟಣದ ಆದಿಶಕ್ತಿ ತೋಪಮ್ಮ ದೇವಾಲಯದ ಬಳಿ ಡಿ.ವಿ.ಸದಾನಂದಗೌಡ, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಎಂ.ರಾಜೇಂದ್ರ, ಎಂಎಲ್‌ಸಿ ತುಳಸಿ ಮುನಿರಾಮೇಗೌಡ, ಹೊಸಹಳ್ಳಿ ವೆಂಕಟೇಶ್, ಮಂಗಳ ಸೋಮಶೇಖರ್ ಸೇರಿದಂತೆ ಸ್ಥಳೀಯ ಬಿಜೆಪಿ ಮುಖಂಡರಿಗೆ ಹಾರ ಹಾಕುವ ಮೂಲಕ ಅಭೂತಪೂರ್ವ ಸ್ವಾಗತ ಕೋರಿದರು.

ಈ ಬಾರಿ ರಾಜ್ಯದಲ್ಲಿ ಬಿಜೆಪಿ ಅಧಿಕಾರ ಹಿಡಿಯುವುದು ಶತಸಿದ್ಧ



ಪಿರಿಯಾಪಟ್ಟಣ, ಮಾ.3– ನಾನು 1989ರಿಂದಲೂ ಕ್ಷೇತ್ರದೊಂದಿಗೆ ಒಡನಾಟ ಇಟ್ಟುಕೊಂಡಿದ್ದೇನೆ. ಯಾತ್ರೆಯಲ್ಲಿ ನಮ್ಮ ಕಾರ್ಯಕರ್ತರ ರಣೋತ್ಸಾಹ ನೋಡಿದರೆ ಕಾಂಗ್ರೆಸ್‌ನವರ ಎದೆ ಒಡೆದು ಹೋಗುತ್ತದೆ. ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಸದಾನಂದಗೌಡರು ಮುಖ್ಯಮಂತ್ರಿಯಾದರೂ ಯಾರಿಗೂ ಬಹುಮತ ಸಿಗಲಿಲ್ಲ. ಹೀಗಾಗಿ ನಾವು ಈ ಬಾರಿ 120 ಸ್ಥಾನ ಗೆದ್ದು ಸ್ವತಂತ್ರವಾಗಿ ಸರ್ಕಾರ ರಚಿಸುತ್ತೇವೆ ಎಂದು ಮಾಜಿ ಸಚಿವ ಈಶ್ವರಪ್ಪ ಆಶಾಭಾವನೆ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ನಡೆದ ವಿಜಯ ಸಂಕಲ್ಪ ಯಾತ್ರೆಯಲ್ಲಿ ಮಾತನಾಡಿದ ಅವರು ರಾಜ್ಯದಲ್ಲಿ ಬಿಜೆಪಿ ಈ ಬಾರಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ. ಇದು ನೂರಕ್ಕೆ ನೂರರಷ್ಟು ಸತ್ಯ ಎಂದು ಅಭಿಪ್ರಾಯಪಟ್ಟರು.

ನಂತರ ಸಂಸದ ಡಿ.ವಿ.ಸದಾನಂದಗೌಡ ಮಾತನಾಡಿ, ಈ ಹಿಂದೆ ಪಿರಿಯಾಪಟ್ಟಣ ಕ್ಷೇತ್ರ ಬಿಜೆಪಿಗೆ ಆಶ್ರಯ ನೀಡಿದ ಕ್ಷೇತ್ರವಾಗಿದ್ದು, ಮೋದಿ ಸರ್ಕಾರದ ಸಾಧನೆಗಳನ್ನು ಮನೆ ಮನೆಗೆ ತಿಳಿಸುವ ಮೂಲಕ ಈ ಬಾರಿ ಕ್ಷೇತ್ರದಲ್ಲಿ ಪಕ್ಷದ ಗೆಲುವಿಗೆ ಶ್ರಮಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಾಧನೆಗಳನ್ನು ಈ ರಾಜ್ಯದ ಜನತೆ ಮನಗಂಡಿದ್ದು, ಈ ಬಾರಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ಹಿಡಿಯಲಿದ್ದೇವೆ ಎಂದರು. ಈ ವೇಳೆ ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಕೌಲನಹಳ್ಳಿ ಸೋಮಶೇಖರ್, ಸುನೀಲ್, ಸುಬ್ರಹ್ಮಣ್ಯ, ಮಹದೇವಯ್ಯ, ರಾಜೇಂದ್ರ, ತುಳಸಿ ಮುನಿರಾಜೇಗೌಡ, ಜಿಲ್ಲಾ ಗ್ರಾಮಾಂತರ ಜಿಲ್ಲಾಧ್ಯಕ್ಷ ಮಂಗಳ ಸೋಮಶೇಖರ್, ಹೆಚ್.ಸಿ.ಬಸವರಾಜು, ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ, ಜಿಲ್ಲಾ ಉಪಾಧ್ಯಕ್ಷ ಅಣ್ಣಪ್ಪ, ಚಂದ್ರು, ಕೃಷ್ಣ, ರವಿ, ಪ್ರವೀಣ್, ಲೋಕಪಾಲಯ್ಯ, ನಳಿನಿಗೌಡ, ರಮೇಶ್, ನಿರ್ಮಲ ಇನ್ನಿತರರಿದ್ದರು.



ಮೈಸೂರು ತಾಲೂಕು ವಾಜಮಂಗಲ ಗ್ರಾಪಂ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಶಂಕರ್ ಅವರನ್ನು ಗ್ರಾಪಂ ಮಾಜಿ ಅಧ್ಯಕ್ಷರಾದ ಭೀಮರಾಜ್, ರಾಜಣ್ಣ, ಉಪಾಧ್ಯಕ್ಷೆ ಲತಾ, ಸದಸ್ಯರಾದ ಶಾರದ, ಮೋಹನ್ ಕುಮಾರ್, ಹೆಚ್.ವರದರಾಜ್, ಎಂ.ಲತಾ, ಕೆ.ಶಿವು, ಸುಂದ್ರಮ್ಮ, ಪ್ರದೀಪ್ ಶಿವಕುಮಾರ್, ಸವಿತ, ಕು.ಗೀತಾ, ಕೆಂಪಮ್ಮ ಚಂದ್ರಶೇಖರ್ ಮೂರ್ತಿ, ಮಂಜುಳ, ಸುಮ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ಕುಟುಂಬ ಆಡಳಿತದ ಜೆಡಿಎಸ್‌ನಿಂದ ಅಭಿವೃದ್ಧಿ ಸಾಧ್ಯವೇ?



ಹುಣಸೂರು, ಮಾ.3– ದೇಶದಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಿರುವ ಕಾಂಗ್ರೆಸ್, ಕುಟುಂಬ ರಾಜಕಾರಣ ಮಾಡುತ್ತಿರುವ ಜೆಡಿಎಸ್‌ಗೆ ಇತಿಶ್ರೀ ಹಾಡುವ ಮೂಲಕ ಮುಂಬರುವ ಚುನಾವಣೆಯಲ್ಲಿ 150ಕ್ಕೂ ಹೆಚ್ಚು ಸ್ಥಾನ ಪಡೆದು ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚಿಸುತ್ತೇವೆ ಎಂದು ಸಂಸದ ಡಿ.ವಿ.ಸದಾನಂದಗೌಡ ತಿಳಿಸಿದರು.

ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ನಡೆದ ಬಿಜೆಪಿ ಸಂಕಲ್ಪ ಯಾತ್ರೆ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಮಾಜಿ ಪ್ರಧಾನಿ ಮನೆಯಲ್ಲಿ ಟಿಕೆಟ್‌ಗಾಗಿ ಗಲಾಟೆ ನಡೆಯುತ್ತಿರುವಾಗ ರಾಜ್ಯದ ಅಭಿವೃದ್ಧಿ ಎಲ್ಲಿಂದ ಸಾಧ್ಯ ಎಂದ ಅವರು, ಗರೀಬಿ ಹಟಾವೊ ಘೋಷಣೆ ಮೂಲಕ 3 ಚುನಾವಣೆಗಳನ್ನು ಗೆದ್ದು ಬಡವರ ಅಭಿವೃದ್ಧಿಗೆ ಶ್ರಮಿಸದೇ ತಮ್ಮ ಆರ್ಥಿಕ ಸ್ಥಿತಿ ಉತ್ತಮಪಡಿಸಿಕೊಂಡ ಕಾಂಗ್ರೆಸ್ ನಾಯಕರು ಇದೀಗ ತಮ್ಮ ಪ್ರಾತಿನಿಧ್ಯಕ್ಕಾಗಿ ಒಬ್ಬರನ್ನೊಬ್ಬರು ಅನುಮಾನಿಸುತ್ತಲೇ ಸಾಗುತ್ತಿದ್ದಾರೆ. ಎಲ್ಲಿ ತಬ್ಬಿಕೊಂಡರೇ ಚಾಕು ಇರಿತವಾಗುತ್ತದೆಯೋ ಎಂಬ ಭಯದಲ್ಲಿ ಮುನ್ನಡೆಯುತ್ತಿದ್ದಾರೆ ಎಂದರು.

ಪ್ರಧಾನಿ ಮೋದಿ ಸರ್ಕಾರ ಹೊಸದಾಗಿ ದೇಶದ 40 ಕೋಟಿ ಜನರ ಬ್ಯಾಂಕ್ ಖಾತೆ ತೆರೆದು ಸರ್ಕಾರಿ ಸೌಲಭ್ಯಗಳನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ತಲುಪಿಸುತ್ತಿದೆ. ಶುದ್ಧ ಕುಡಿಯುವ ನೀರು, ಉಚಿತ ಗ್ಯಾಸ್, ಸೂರಿಲ್ಲದವರಿಗೆ ಶಾಶ್ವತ ಸೂರು, ಜನೌಷಧ ಕೇಂದ್ರ 5 ಲಕ್ಷದವರೆಗಿನ ಆಯುಷ್ಮಾನ್ ಯೋಜನೆ ಇನ್ನಿತರ ಜನಪರ ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಮಾತನಾಡಿ, ಕಾಂಗ್ರೆಸ್ ದೇಶದೆಲ್ಲೆಡೆ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಇತ್ತೀಚೆಗೆ ನಡೆದ ಮೇಘಾಲಯ, ಮಿಜೋರಾಂ, ನಾಗಲ್ಯಾಂಡ್ ಚುನಾವಣೆಯಲ್ಲಿ 180 ಕ್ಷೇತ್ರಗಳಲ್ಲಿ ಕೇವಲ 2 ಕಡೆ ಮಾತ್ರ ಕಾಂಗ್ರೆಸ್ ಗೆದ್ದಿದೆ ಎಂದರು.

ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಶ್ರಮಿಸುತ್ತಿರುವ ಬಿಜೆಪಿ 2024ರ ವೇಳೆಗೆ ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟಿಸುತ್ತೇವೆ. ಸಾಕಷ್ಟು ಪಾಪ ಮಾಡಿರುವ ಕಾಂಗ್ರೆಸ್ಸಿಗರು ಅಲ್ಲಿಗೆ ಬಂದು ಪೂಜೆ ಮಾಡಿ ಪಾಪ ಕಳೆದುಕೊಳ್ಳಲಿ ಎಂದರು.

ಹುಡಾ ಅಧ್ಯಕ್ಷ ಹಾಗೂ ನಗರಸಭಾ ಸದಸ್ಯ ಗಣೇಶ್ ಕುಮಾರಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ ನಾಗರಾಜ್ ಮಲ್ಲಾಡಿ, ಅಣ್ಣಯ್ಯ ನಾಯಕ, ಸೋಮಶೇಖರ್, ಜಿಲ್ಲಾ ಮಹಿಳಾಧ್ಯಕ್ಷೆ ಮಂಗಳ ಸೋಮಶೇಖರ್, ಮೈಲ್ಯಾಕ್ ಅಧ್ಯಕ್ಷ ಕೌಟಿಲ್ಯ ರಘು, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ವಸಂತಕುಮಾರ್, ಮಹದೇವಯ್ಯ, ತಾಲೂಕು ಅಧ್ಯಕ್ಷ ನಾಗಣ್ಣಗೌಡ, ವಕೀಲರಾದ ಯೋಗಾನಂದ ಕುಮಾರ್, ವಿ.ಎನ್.ದಾಸ್, ಸವಿತಾ ಚವ್ಹಾಣ್, ಸೂರೇಗೌಡ, ಹುಡಾ ಸದಸ್ಯ ಗೋವಿಂದ, ಹೆಚ್.ಪಿ.ಸುಬ್ಬಾರಾವ್, ರಮೇಶ್‌ಕುಮಾರ್, ಚಂದ್ರಶೇಖರ್, ಮಂಜು, ಸೂರ್ಯ ಕುಮಾರ್, ಕಾಂತರಾಜು, ದಿನೇಶ್, ವಿವೇಕ್, ಸತೀಶ್, ವೆಂಕಟಮ್ಮ ಇನ್ನಿತರರಿದ್ದರು.

ಮಾಂಸ ಮಾರುಕಟ್ಟೆ ಕಾಮಗಾರಿಗೆ ಗುದ್ದಲಿಪೂಜೆ



ನಂಜನಗೂಡು, ಮಾ.3– ನಗರದ ಚಾಮರಾಜನಗರ ಬೈಪಾಸ್ ರಸ್ತೆಯ ಕಸಾಯಿಖಾನೆ ಬಳಿ 41 ಲಕ್ಷ ರೂ. ವೆಚ್ಚದ ಮಾಂಸ ಮಾರುಕಟ್ಟೆ ನಿರ್ಮಾಣ ಕಾಮಗಾರಿಗೆ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಪ್ರಸ್ತುತ ನಗರದ ಆರ್.ಪಿ. ರಸ್ತೆಯ ಸುಭಾಷ್ ಪಾರ್ಕ್ ಆವರಣದಲ್ಲಿ ತಾತ್ಕಾಲಿಕ ಮಾಂಸ ಮಾರುಕಟ್ಟೆ ನಿರ್ಮಿಸಲಾಗಿತ್ತು. ಸ್ವಚ್ಛತೆ ದೃಷ್ಟಿಯಿಂದ ಶಾಶ್ವತ ಮಾಂಸ ಮಾರುಕಟ್ಟೆ ನಿರ್ಮಿಸಿ ಸ್ಥಳಾಂತರಿಸುವ ಉದ್ದೇಶದಿಂದ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, 14 ಮಾಂಸದ ಮಳಿಗೆಗಳನ್ನು ನಿರ್ಮಿಸಿ ಮೂಲ ಸೌಕರ್ಯ ಒದಗಿಸಿ 3 ತಿಂಗಳೊಳಗಾಗಿ ಮಾರುಕಟ್ಟೆ ಸ್ಥಳಾಂತರಿಸಲಾಗುವುದು. ಮೀನು, ಕೋಳಿ ಮಾಂಸ ಮಾರುಕಟ್ಟೆಯನ್ನು ಒಂದೆಡೆಗೆ ಸ್ಥಳಾಂತರಿಸಲಾಗುವುದು ಎಂದರು.

ಈ ವೇಳೆ ನಗರಸಭಾ ಉಪಾಧ್ಯಕ್ಷೆ ನಾಗಮಣಿ, ಸದಸ್ಯರಾದ ಸಿದ್ದರಾಜು, ಮೀನಾಕ್ಷಿ, ಬಾಲಚಂದ್ರ, ನಗರಸಭೆ ಎಇಇ ಸುರೇಶ್, ಕುಮಾರ್ ಸೇರಿದಂತೆ ಹಲವರಿದ್ದರು.

ಸಾರ್ವತ್ರಿಕ ವಿಧಾನಸಭಾ ಚುನಾವಣೆ ಹಿನ್ನಲೆ

ಅಸಮಾಧಾನಗೊಂಡಿದ್ದ ಮುಖಂಡರ ಮನವೊಲಿಸಿದ ಹೆಚ್‌ಸಿಎಂ



ಕೆಟ್ಟಿರುವ ಆರ್ಥಿಕ ಪರಿಸ್ಥಿತಿ, ಹಾಳಾಗಿರುವ ಆಡಳಿತ ವ್ಯವಸ್ಥೆ ಸರಿಪಡಿಸಲು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕು. ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿದರೆ ರಾಜ್ಯದಲ್ಲಿ ಎರಡೂವರೆ ಪರ್ಸೆಂಟ್ ಮತ ಏರಿಕೆಯಾಗುವ ಬಗ್ಗೆ ಸಮೀಕ್ಷೆಯೊಂದು ಹೇಳಿದೆ. ಸಿಎಂ ಆಯ್ಕೆ ವಿಚಾರ ಶಾಸಕರು ಮತ್ತು ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟದ್ದರಿಂದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ತರಲು 120 ಕ್ಷೇತ್ರಗಳನ್ನು ಗೆಲ್ಲುವ ಜವಾಬ್ದಾರಿ ಪ್ರತಿಯೊಬ್ಬ ಕಾರ್ಯಕರ್ತರ ಮೇಲಿದೆ.

–ಡಾ. ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ.

ತಿ.ನರಸೀಪುರ, ಮಾ.3– ಮುಂಬರುವ ಚುನಾವಣೆ ಹಿನ್ನೆಲೆಯಲ್ಲಿ ಕ್ಷೇತ್ರ ಗೆಲ್ಲಲು ಕಾರ್ಯತಂತ್ರ ರೂಪಿಸಿರುವ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಸಮಾಧಾನಗೊಂಡಿದ್ದ ಹಿರಿಯ ಮುಖಂಡರು ಹಾಗೂ ಬೆಂಬಲಿಗರ ಮನವೊಲಿಸುವಲ್ಲಿ ಯಶಸ್ವಿಯಾದರು.

ಪಟ್ಟಣದ ಕುರುಬಗೇರಿಯಲ್ಲಿರುವ ಪಪಂ ಮಾಜಿ ಅಧ್ಯಕ್ಷ ಬಸವಣ್ಣ ಅವರ ನಿವಾಸದಲ್ಲಿ ನಡೆದ ಹಿರಿಯ ಮುಖಂಡರು ಹಾಗೂ ಬೆಂಬಲಿಗರ ಸಭೆಯಲ್ಲಿ ಅಸಮಾಧಾನಗೊಂಡಿದ್ದ ಪ್ರತಿಯೊಬ್ಬರ ಅಭಿಪ್ರಾಯ ಆಲಿಸಿ, ಬೇಸರ ಶಮನಗೊಳಿಸಿದರು. ಆ ಮೂಲಕ ಮುಂಬರುವ ಚುನಾವಣೆಯಲ್ಲಿ ನೀವಾಗಲಿ, ನಿಮ್ಮ ಮಗ ಸುನೀಲ್ ಬೋಸ್ 'ಕೈ' ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ಬೆಂಬಲಿಸುತ್ತೇವೆ ಎಂದು ಮುಖಂಡರು ಭರವಸೆ ನೀಡಿದರು.

ಹಿರಿಯ ಮುಖಂಡ ಬಸವಣ್ಣ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಚಿವರಾಗಿ ಪಟ್ಟಣವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿದ ಮಹದೇವಪ್ಪನವರು ನಮ್ಮ ಸಂಪರ್ಕಕ್ಕೆ ಸಿಗದಿದ್ದರಿಂದ ಸಾಮಾನ್ಯ ಜನರ ಸಮಸ್ಯೆಗೆ ಸ್ಪಂದಿಸಲು ಸಾಧ್ಯವಾಗದೆ ಅಸಮಾದಾನಗೊಂಡು ದೂರವಿದ್ದೇವು. ಹಿಂದಿನ ನಿರ್ಲಕ್ಷ್ಯ ಇನ್ಮುಂದೆ ಆಗಬಾರದು. ಬೂತ್ ಮಟ್ಟದಲ್ಲಿ ಆಯಾಯ ಮುಖಂಡರಿಗೆ ಜವಾಬ್ದಾರಿ ನೀಡಬೇಕು. ಅರ್ಹರಿಗೆ ಸರ್ಕಾರದ ಸೌಲಭ್ಯ ಕಲ್ಪಿಸಲು, ಪಟ್ಟಣದ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷ ಬೆಂಬಲಿಸುತ್ತೇವೆ ಎಂದರು.

ಅಸಮಾಧಾನಿತರ ಅಭಿಪ್ರಾಯ ಆಲಿಸಿದ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜನರ ಜೊತೆಗಿನ ಸಂಪರ್ಕದ ಕೊರತೆಯಿಂದಾಗಿ ಅಭಿವೃದ್ಧಿ ಮಾಡಿಯೂ ಸೋತಿದ್ದೇವೆ. ಕಳೆದ ಚುನಾವಣೆಯಲ್ಲಿ ನಾನು ಸೋತಿದ್ದರಿಂದ ಕೋಟಿಗಟ್ಟಲೆ ಅನುದಾನ ವಾಪಸ್ ಹೋಗಿದೆ. ನರಸೀಪುರಕ್ಕೆ ಮಂಜೂರಾಗಿದ್ದ ಪಾಲಿಟೆಕ್ನಿಕ್ ಕಾಲೇಜು ಬೆಂಗಳೂರು ಪಾಲಾಗಿದೆ. ಪ್ರಮುಖ ರಸ್ತೆಗಳು ಅಭಿವೃದ್ಧಿ ಕಾಣದೆ ಗುಂಡಿ ಬಿದ್ದಿವೆ. ಕ್ಷೇತ್ರದ ಪುರಸಭೆ ವ್ಯಾಪ್ತಿಯ 7 ವಾರ್ಡ್‌ಗಳಲ್ಲಿರುವ 10 ರಿಂದ 12 ಬೂತ್‌ಗಳಲ್ಲಿಯೂ ಹಿರಿಯ ಮುಖಂಡರು ಮತ್ತು ಯುವಕರ ಸಮನ್ವಯತೆ ತಂಡ ರಚಿಸಿಕೊಂಡು ಬೃಹತ್ ಸಭೆ ನಡೆಸಿ, ಚುನಾವಣೆ ಗೆಲ್ಲೋಣ ಎಂದು ಕರೆ ನೀಡಿದರು.

ನಂತರ ಡಾ.ಹೆಚ್.ಸಿ.ಮಹದೇವಪ್ಪ ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವ ಮತ್ತೊರ್ವ ಹಿರಿಯ ಮುಖಂಡ ಎಸ್.ನಂಜುಂಡಸ್ವಾಮಿ ನಿವಾಸಕ್ಕೆ ತೆರಳಿ ಯೋಗಕ್ಷೇಮ ವಿಚಾರಿಸಿದರು. ನಂತರ ತ್ರಿವೇಣಿ ನಗರದಲ್ಲಿರುವ ಬಿಜೆಪಿ ಮುಖಂಡ, ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ ಅವರ ನಿವಾಸಕ್ಕೂ ತೆರಳಿ, ಕಾಂಗ್ರೆಸ್ ಬೆಂಬಲಿಸಿ ಪಕ್ಷ ಸೇರ್ಪಡೆಗೊಳ್ಳುವಂತೆ ಮನವೊಲಿಸಿದರು. ಅಲ್ಲದೆ ಹಲವು ಮುಖಂಡರನ್ನು ಭೇಟಿ ಮಾಡಿದರು.

ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಪಪಂ ಮಾಜಿ ಸದಸ್ಯ ಸಿ.ಮಹದೇವ, ಕಾಂಗ್ರೆಸ್ ಮುಖಂಡ ಸುನಿಲ್ ಬೋಸ್ ಮಾತನಾಡಿದರು. ಸಭೆಯಲ್ಲಿ ಪಪಂ ಮಾಜಿ ಅಧ್ಯಕ್ಷ ಎನ್.ಎಸ್.ಬಸವರಾಜು, ಎನ್.ಮಹದೇವಸ್ವಾಮಿ, ಮಾಜಿ ಉಪಾಧ್ಯಕ್ಷ ನೈಸ್ ಮಹದೇವಸ್ವಾಮಿ, ತಾಪಂ ಮಾಜಿ ಉಪಾಧ್ಯಕ್ಷ ಸಿ.ವೆಂಕಟೇಶ್, ಗ್ರಾಪಂ ಮಾಜಿ ಅಧ್ಯಕ್ಷ ನಾಗರಾಜು, ಮುಸುವಿನಕೊಪ್ಪಲು ಶಿವಾಂ, ವಾಟಾಳ್ ನಾಗೇಶ್, ಅರ್ಚಕ ರಂಗನಾಥ್, ಅಡಿಗೆ ಕಂಟ್ರಾಕ್ಟರ್ ಎಂ.ಮಂಜು, ಅಹಿಂದಾ ಟೌನ್ ಅಧ್ಯಕ್ಷ ರವೀಂದ್ರ ಮುಖಂಡರಾದ ಕೆಎಸ್‌ಆರ್‌ಟಿಸಿ ರಾಜಣ್ಣ, ವಿಕ್ರಾಂತ್ ಮಹದೇವ, ಕೆಇಬಿ ಮಲ್ಲಿಕಾರ್ಜುನ, ಗುರುಪ್ರಸಾದ್, ರಾಜಶೇಖರ್, ಪಣಜಿ ಮಹದೇವ್, ಸೋಮು ದಾದಾ, ಚೌಹಳ್ಳಿ ಮಲ್ಲೇಶ, ಮರಿಸ್ವಾಮಿ, ಬಂಕ್ ಮಹದೇವ, ಹೊಸಪುರ ಸಿದ್ದಯ್ಯ, ನಾಗೇಂದ್ರ ಕುಮಾರ್, ಮಣಿಕಂಠಸ್ವಾಮಿ, ತರಕಾರಿ ದಿಲೀಪ್, ಮಹದೇವಣ್ಣ, ಎಂ.ಬಿ.ಸಾಗರ್, ಎಂ.ವಿನಯ್, ಜಲ್ಲಿ ಮಹದೇವಸ್ವಾಮಿ, ವಾಸವಿ ರಾಜು, ವೆಂಕಟೇಶ್, ದಯಾನಂದ್, ವಾಸವಿ ರಾಜು, ವೆಂಕಟೇಶ್, ದಯಾನಂದ್, ಶಶಿಕುಮಾರ್, ಸಬೀಲ್, ನಾಗರಾಜು, ಕಿರಣ್, ಬಾರ್ ರಾಜು, ಮೋಹನ್, ಟೈಲರ್ ರಾಜಣ್ಣ, ಮೋಹನ್, ಈಡಿಗರ್ ಕುಮಾರ್ ಇನ್ನಿತರರಿದ್ದರು.


ಆರ್.ರಾಕೇಶ್‌ಗೌಡ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಕನ್ನೇಗೌಡ ಟೈಗರ್ಸ್
ಕೆ.ಜಿ.ಕೊಪ್ಪಲ್, ಜಯನಗರ, ಮೈಸೂರು
VISMAYA
ADVERTISERS